ಕರ್ಮವೀರ

ಹುಬ್ಬಳ್ಳಿ ತಾ. ೧೪—೨—

ಸಂಪುಟ ೨೦] [ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು : ಹ. ರಾ. ಪುರೋಹಿತ]

[ಸಂಸ್ಥಾಪಕರು : ರಂ. ರಾ. ದಿವಾಕರ

- ಬಲ್ಲವರ ನುಡಿಗಳು -

ರಾಷ್ಟ್ರೀಯ ದ್ವೇಷವೆಂಬುದು ವಿಚಿತ್ರ ವಸ್ತು. ಅದು ಅತ್ಯಂತ ತೀಕ್ಷ್ಣವಾಗಿರುವದು ನೀಚತರವಾದ ಸಂಸ್ಕೃತಿಯಿರುವಲ್ಲಿ. ಸಂಸ್ಕಾರದ ಮಟ್ಟ ಏರಿದಂತೆ, ಅದು ಕಡಿಮೆಯಾಗುತ್ತ ಕೊನೆಗೆ ಅಳಿದು ಹೋಗುವದು. ಆಗ ನಾವು ರಾಷ್ಟ್ರೀಯತೆಯನ್ನು ಮೀರಿ ನಿಂತು ನಮ್ಮ ನೆರೆಹೊರೆಯ ರಾಷ್ಟ್ರಗಳ ಜನತೆಯ ದುಃಖಗಳನ್ನು ನಮ್ಮವೇ ಎಂದು ಬಗೆಯತೊಡಗುವೆವು.

—ಗಯಟೆ

ದುಡುಕು ಯೌವನ ಅರಳುವಾಗಿನ ಗುಣ, ವಿವೇಕವು ವಾರ್ಧಕ್ಯದ ಸುಗ್ಗಿಕಾಲದ ಫಲ.

—ಸಿಸೆರೊ

ಕಲೆಯ ಸಂಬಂಧ ಪುಷ್ಪಗಳೊಡನೆ ಹೊರತು ಸಸ್ಯಶಾಸ್ತ್ರದೊಡನಲ್ಲ; ಮೂಲಕಾರಣಗಳೊಡನಲ್ಲ, ಪರಿಣಾಮದೊಡನೆ; ಕಾಮದೊಡನಲ್ಲ, ಪ್ರೇಮದೊಡನೆ; ಮಾನವ ಸ್ವಭಾವದೊಡನಲ್ಲ, ಮಾನವ ಜೀವಿಗಳೊಡನೆ.

—ಜಿರಾಲ್ಡ ಬುಲೆಟ್



ಪೀಪಿಂಗದ ಮಹಾದ್ವಾರ

ಚೀನದ ಪ್ರಾಚೀನ ರಾಜಧಾನಿಯಾದ ಪೀಪಿಂಗ್ ನಗರದ ಮಹಾದ್ವಾರವಿದು. ಈಚೆಗೆ ಕಮ್ಯುನಿಸ್ಟರ ವಶವಾದ ಇದು ದಿಲ್ಲಿಯಂತೆ ಹಲವು ರಾಜವಂಶಗಳು ತಲೆಕೆಳಗಾಗುವದನ್ನು ಕಂಡಿದೆ.



ಚಿಕ್ಕ ಕಥೆ

ಚಲುವೆಯ ಗಂಡ

ಮೂಲ (ಅಸ್ಟ್ರಿಯನ್): ಹಾರ್ಮನ್ ಬಾರ ★ ಅನುವಾದ: ಶ್ರೀ ಜಿ. ಎಸ್. ಮಠಕರ

ಬಹಳ ದಿನಗಳಾದ ನಂತರ ನನ್ನ ಹಳೆಯ ಮಿತ್ರನಾದ ಪಾಲ ಹಾರ್ನರನನ್ನು ರಸ್ತೆಯಲ್ಲಿ ಭೆಟ್ಟಿಯಾದೆ. ಆಗ ನಾನೆಂದೆ, "ಒಮ್ಮೆ ನಿನ್ನ ಪತ್ತೆಯಾಯಿತಲ್ಲ, ಅದೇ ಮಹಾ ಭಾಗ್ಯ. ಈಗೀಗ ಅತ್ತಿಯ ಹೂವಿನಂತೆ ಆಗಿ ಬಿಟ್ಟಿದ್ದೀ. ನಿನ್ನ ಭೆಟ್ಟಿಯಾಗದೆ ಆರು ತಿಂಗಳಾಗಿ ಹೋಯಿತು. ಇನ್ನೇನು, ಮದುವೆಯಾಗಿ ಬಿಟ್ಟಿದ್ದೀ. ಹೇಗಿದೆ ನಿನ್ನ ದಾಂಪತ್ಯ ಜೀವನ? ಅಲ್ಲವೊ, ಅಖಂಡ ಬ್ರಹ್ಮಚರ್ಯ ವ್ರತವನ್ನು ಕೊಟ್ಟಿದ್ದ ನೀನು ಈ ಉದ್ಯೋಗದಲ್ಲಿ ಬೀಳುವಿಯೆಂದು ಯಾರು ನೆನೆಸಿದ್ದರು? ಹೆಂಗಸರ ಲೀಲೆ! ಅವರು ಬಲೆಯನ್ನು ಬೀಸುವರು, ಗಂಡಸರು ನೇರವಾಗಿ ಅದರಲ್ಲಿ ಬೀಳುವರು, ಹೌದೊ ಅಲ್ಲವೋ?"

ಪಾಲನು ಏನೂ ಉತ್ತರ ಕೊಡಲಿಲ್ಲ. ಬರಿ ನಕ್ಕನು. ದಾರಿಯಲ್ಲಿ ಸಾಗುತ್ತಿರುವಾಗಲೆ ಅವನು ಚಿರೂಟು ಹಚ್ಚಿದನು. ಅವನ ಮುಖವನ್ನು ಲಕ್ಷ್ಯಪೂರ್ವಕ ನೋಡಿದೆನು. ಮೊದಲಿಗಿಂತ ಅವನು ಹೆಚ್ಚು ಗಂಭೀರನೂ ಮಿತಭಾಷಿಯೂ ಆಗಿದ್ದನು. ಅವನ ಮನನೋಯಿಸಬಾರದೆಂದು ಕೂಡಲೆ ನಾನೆಂದೆ, "ನಾನು ಒಳಗೊಂದು ಇಟ್ಟುಕೊಂಡು ಹೇಳಿದೆನೆಂದು ತಿಳಿಯಬೇಡ. ನನ್ನ ಸ್ವಭಾವ ನಿನಗೆ ಗೊತ್ತೇ ಇದೆ. ಆದರೂ ನೀನು ಬಹಳ ಬದಲಾಗಿಬಿಟ್ಟಿರುವಿ. ಸುಂದರ ಹೆಂಡತಿಯ ಗಂಡನಾಗಿರುವಿಯೆಂದು ಬದಲಾಗಿರುವಿಯಾ?"

"ಛೇ, ಹಾಗೇನೂ ಇಲ್ಲ. ಲಗ್ನವೇನೋ ಹೊಸದಾಗಿಯೆ ಆಗಿದ್ದೇನೆ. ಆದರೆ ಯಾರನ್ನು ನೀನು ಸುಂದರ ಹೆಂಡತಿಯೆನ್ನುವಿಯೋ ಅವಳನ್ನು ಮಾಡಿಕೊಂಡು ಪಶ್ಚಾತ್ತಾಪಪಡುವ ಕಾಲ ಬಂದಿದೆ. ಸುಂದರ ಹೆಂಡತಿಯ ಗಂಡನಾದವನು ಎಂಥೆಂಥ ಸಂಕಟಕ್ಕೆ ಗುರಿಯಾಗಬೇಕಾಗುವದೆಂದು ನಿನಗೇನು ಗೊತ್ತು?"

"ಪಾಲ, ನಿನ್ನ ಈ ಗೂಢಗುಂಜನ ನನಗೇನೂ ತಿಳಿಯುವದಿಲ್ಲ. ಒಗಟಿನಲ್ಲಿ ಮಾತಾಡುತ್ತಿರುವಿಯಲ್ಲ!"

ಪಾಲನೆಂದ: ನಿನಗೆ ಹೇಗೆ ತಿಳಿಯಬೇಕು ಪಾಪ! ಹೇಳುತ್ತೇನೆ. ಕೇಳು. ನನ್ನ ಲಗ್ನವಾಯಿತು. ಆಮೇಲೆ ಹನೀಮೂನಿಗೆ ಮ್ಯುನಿಕ್ಕಿಗೆ ಹೋದೆವು. ಹೆಂಡತಿಗೆ ಊರು ತೋರಿಸಬೇಕು, ನಾಲ್ಕು ಜನ ಮಿತ್ರರಿಗೆ ಪರಿಚಯ ಮಾಡಿಕೊಡಬೇಕು, ಆಮೇಲೆ ಬವೇರಿಯಾಕ್ಕೆ ಹೋಗಬೇಕು ಅಂತ ನನ್ನ ವಿಚಾರವಿತ್ತು. ನನ್ನಂತೆ ಅವಳೂ ಸುಖಿಯಾಗಿರಬಹುದೆಂದು ಮೊದಮೊದಲು ಕಲ್ಪಿಸಿಕೊಂಡಿದ್ದೆ. ಆದರೆ ಮುಂದೆ ನನ್ನ ಕಲ್ಪನೆ ಸರಿಯಲ್ಲವೆಂದು ತೋರತೊಡಗಿತು. ಅವಳ ಮನಸ್ಸಿನಲ್ಲಿ ಯಾವುದೋ ಒಂದು ಅಭಾವ ಕೊರೆಯುತಿರಬೇಕು. ಒಂದು ಗುಪ್ತ ಅಸ್ವಾಸ್ಥ್ಯವಿರಬೇಕೆಂದು ನನಗನಿಸಿತು. ಕಟ್ಟಕಡೆಗೆ ಅವಳನ್ನೇ ಕೇಳಿದೆ. ಅವಳು ಅಲ್ಲಗಳೆಯುತ್ತ ಅಂದಳು. ನನಗೇನು "ಕಡಿಮೆಯಾಗಿದೆ? ಚನ್ನಾಗಿಯೆ ಇರುವೆನಲ್ಲ. ಈ ಮ್ಯುನಿಕ್ ಪಟ್ಟಣವಾದರೂ ಎಷ್ಟು ಸೊಗಸಾಗಿದೆ!" ಆದರೆ ಒಳಗಿನ ಗುಟ್ಟನ್ನು ಬಹಳ ಕಾಲ ಬಚ್ಚಿಡುವದು ಅವಳಿಂದಾಗಲಿಲ್ಲ. ಕೊನೆಗೆ ನಾಚಿಕೆಯನ್ನು ತೊರೆದು ಹೇಳಿದಳವಳು: "ಆದರೆ, ಇಲ್ಲಿಯ ಜನರು ಹೀಗೇಕೆ ನಡೆದುಕೊಳ್ಳುತ್ತಾರೊ ಏನೊ. ಮಂದಿಯ ಜೋಡಿ ಹೊಂದಿಕೊಂಡು ಹೋಗಲಿಕ್ಕೆ ಅವರಿಗೆ ಮನಸೇ ಇಲ್ಲೇನೊ"

ನನಗೆ ಮೊದಲು ಅವಳ ಇಂಗಿತ ತಿಳಿಯಲಿಲ್ಲ: ನಾನು ಪ್ರತಿಪಾದಿಸಿದೆ: "ಜನರನ್ನೇಕೆ ಸುಮ್ಮನೆ ಹೀಯಾಳಿಸುತ್ತಿ? ಅವರಿಗೆ ಟೇಸ್ಟ್ ಒಪ್ಪು ತಿಳಿಯುತ್ತಿರಲಿಕ್ಕಿಲ್ಲ. ಅಷ್ಟೆ..."

"ಇಸ್ಸಿ, ನಾನೆಲ್ಲಿ ಹಾಗೆಂದೆ," ಅವಳು ವಿವರಿಸಿದಳು. "ಜನರಲ್ಲಿ ಹೊಕ್ಕು ಬಳಕೆ ಅವರಿಗೆ ಬೇಡವಾಗಿದೆ, ಅನ್ನುತ್ತೇನೆ ನಾನು. ನೋಡು ಪಾಲ, ತಾಸುತಾಸುಗಟ್ಟಲೆ ರಸ್ತೆಯಲ್ಲಿ ತಿರುಗಾಡಿದರೂ ಒಬ್ಬರು ಸಹ ತಪ್ಪಿ ಕೂಡ ಕಣ್ಣೆತ್ತಿ ನೋಡುವದಿಲ್ಲ. ಅದಕ್ಕೇ ನಾನನ್ನುವದು, ಮಂದಿಯ ಸಂಪರ್ಕವೇ ಬೇಡ ಈ ಜನರಿಗೆ!"

ಸುಂದರ ತರುಣಿಯನ್ನು ನೋಡಲು ಜನರು ದೀದಿಯಲ್ಲಿ ಗುಂಪುಗುಂಪಾಗಿ ನೆರೆಯಬೇಕು. ಇದೇ ನನ್ನ ಹೆಂಡತಿಯ ಆಸೆ. ಮ್ಯುನಿಕ್ ಜನರಿಗೆ ಆ ಚಟವಿಲ್ಲ. ಆ ಉಸಾಬರಿ ಅವರಿಗೆ ಬೇಡ. ಅದೇ ಅವರು ಹೊಂದಿಕೆಯಾಗದ ಜನ! .... ನಗುತ್ತೀಯಾಕೆ? ನಗುವದು ಇನ್ನು ಮುಂದೆ ಇದೆ, ಎಂದು ಪಾಲ ಒಮ್ಮೆ ನಿಟ್ಟುಸಿರುಬಿಟ್ಟ. ಮುಂದೆ ಹೇಳತೊಡಗಿದ:

ಮರುದಿನ ಬೆಳಗ್ಗಿನ ಸಂಗತಿ. ನಾನು "ಕ್ಯಾಫೆ ಮ್ಯಾಕ್ಸಿಮಿಲಾನ"ನಲ್ಲಿ ಕುಳಿತಿದ್ದೆ. ಪ್ರದರ್ಶನಕ್ಕೆ ಹೋಗಬೇಕೆಂದು ನಿಶ್ಚಯವಾಗಿತ್ತು. ಹಾಟೆಲಿನಲ್ಲಿ ನನ್ನ ಹೆಂಡತಿ ಶೃಂಗಾರ ಮಾಡಿಕೊಳ್ಳುವದರಲ್ಲಿ ಮಗ್ನಳಾಗಿದ್ದಳು. ಅವಳ ಹಾದಿ ನೋಡುತ್ತ ನಾನಿಲ್ಲಿ ಕುಳಿತಿದ್ದೆ. ಕೂತಲ್ಲಿಯೆ ಪತ್ರಿಕೆಗಳ ವಾಚನವಾಯಿತು. ಜಾಹಿರಾತುಗಳನ್ನೂ ಒಂದೂ ಬಿಡದೆ ನೋಡಿದ್ದಾಯಿತು. ಮುಂಜಾನೆಯ ಫರಾಳವೂ ಆಯಿತು. ಆದರೂ ಬೀಬೀ ಸಾಹೇಬರ ಸುಳಿವೇ ಇಲ್ಲ. ಸೋಮಾರಿಯಾಗಿ ಅಲ್ಲಿ ಕುಳಿತಿರಲು ನಾಚಿಕೆಯಾಯಿತು. ಕ್ಯಾಫೆಯಲ್ಲಿ ಯಾರೂ ಇರಲಿಲ್ಲ. ಒಂದು ಬದಿಯಲ್ಲಿ ದೊಡ್ಡ ಮೇಜಿನ ಬಳಿ ಕುಳಿತು ಜಗತ್ತನ್ನೇ ಮರೆತು ಕೆಲ ಹುಡುಗರು ಇಸ್ಪೇಟ ಆಡುತಿದ್ದರು. ಉಳಿದುದೆಲ್ಲ ಶಾಂತವಾಗಿತ್ತು....... ಹತ್ತುವರೆ ಆಯಿತು, ಹನ್ನೊಂದಾಯಿತು, ಹನ್ನೊಂದುವರೆಯೂ ಆಯಿತು. ಆದರೂ ರಾಣೀ ಸಾಹೇಬರ ಸವಾರಿ ಇಲ್ಲ. ನನಗೆ ಬೇಸರಿಕೆ ಬರತೊಡಗಿತು.

ಕೊನೆಗೊಮ್ಮೆ ದಯಮಾಡಿಸಿದಳು ಅವಳು. ಶೃಂಗಾರವಾಗಿ, ನಾಚುತ್ತ ನಲಿಯುತ್ತ ಬಂದಳು. ಎಷ್ಟು ಸುಂದರ!. ಮುಖವೂ ಪ್ರಸನ್ನವಾಗಿತ್ತು. ನಾನು ಒಡನೆ ಕೇಳಿದೆ, "ಏನು ಬೇಡೋಣ ತಿನ್ನಲಿಕ್ಕೆ?" ಆದರೆ ಅವಳು ಅತ್ತ ಗಮನಿಸಲಿಲ್ಲ. "ಈ ಕಿಡಿಕಿಯ ಬಳಿ ಕೂತುಕೊಳ್ಳಲಾರೆ. ಈ ದೀಪದ ಝಳ ನನಗೆ ಸಹನೆಯಾಗದು" ಎನ್ನುತ್ತ ಆ ಹುಡುಗರು ಕುಳಿತು ಇಸ್ಪೇಟು ಆಡುತಿದ್ದ ಸ್ಥಳದ ಸಮೀಪ ಇದ್ದ ಮೇಜಿನೆಡೆಗೆ ತೇಲಿ ಹೋದಳು. ಅಲ್ಲಿ ಕುರ್ಚಿಗಳನ್ನು ಅತ್ತಿತ್ತ ಸರಿಸಾಡುವ ಭರದಲ್ಲಿ ಒಂದು ಕುರ್ಚಿಯನ್ನು ಕೆಡವಿಯೇ ಬಿಟ್ಟಳು. ಅದರ ಮೇಲೆ ವರ್ತಮಾನ ಪತ್ರಗಳ ರಾಶಿಯೇ ಇತ್ತು.

ತರುಣರ ಇಸ್ಪೇಟು ಆಟದ ಸಮಾಧಿ ಭಂಗ ಹೊಂದಲಿಲ್ಲ. ನಾನು ಬಡಪಾಯಿ ಆ ಪತ್ರಿಕೆಗಳನ್ನೆಲ್ಲ ಎತ್ತಿ ಮೇಲಿಟ್ಟು ಹತ್ತಿರ ಕುಳಿತು ಮತ್ತೆ ಕೇಳಿದೆ: "ಏನು ತರಿಸೋಣ?" ಅವಳ ಉತ್ತರವೇ ಬೇರೆ. "ಈ ಕಳ್ಳ ಸೂಳೇಮಕ್ಕಳಿಗೆ ನಡುಹಗಲಲ್ಲಿ ಬೀರು ಕುಡಿದು ಇಸ್ಪೇಟಾಡುವ ಹೊರತು ಎರಡನೆ ಕೆಲಸವೆ ಇಲ್ಲವೋ ಏನೋ!" ಎಂದು ಅವಳು ಕೋಮಲ ಸ್ವರದಿಂದ ಸಿಡಿನುಡಿದಳು.

ನಾನು "ವಿಯೆನ್ನಾ ಡೇಲಿ"ಯ ಓದು ಮುಗಿಸಿ "ಕೋಲೋನ್ ಗ್ಯಾಜೀಟ"ನಲ್ಲಿ ತಲೆ ಹಾಕಿದ್ದೆ. ಅವಳೂ ಫರಾಳ ಮಾಡತೊಡಗಿದ್ದಳು. ರೂಪಲಾವಣ್ಯಗಳ ಪ್ರದರ್ಶನವನ್ನೆ ಅವಳು ಏರ್ಪಡಿಸಿದಂತಿತ್ತು. ತಿನ್ನುತಿನ್ನುತ್ತಲೇ ಅವಳ ಹೇಟೋದ್ಗಾರಗಳು ಹೊರಬೀಳುತಿದ್ದವು: "ಪಾಪ! ಇವರ ತಂದೆತಾಯಿಗಳು ಏನನ್ನುತಿದ್ದಾರೊ! ಕಾಸು ಕಾಸು ಗಂಟುಹಾಕಿಟ್ಟಿದ್ದನ್ನು ಕೊಟ್ಟು ಹುಡುಗರನ್ನು ಪರದೇಶಕ್ಕೆ ಕಳಿಸುತ್ತಾರೆ. ಕಲಿತು ಜಾಣರಾಗಿ ಮುಪ್ಪಿನ ಕಾಲಕ್ಕೆ ಊರುಗೋಲಾಗಬಹುದು ಅಂತ. ಆದರೆ ಈ ಮನೆಮುರುಕ ಹುಡುಗರು ಇಲ್ಲಿ ತರತರದ ಮದ್ಯ ಕುಡಿದು ಇಸ್ಪೇಟು ಆಡುತ್ತ ಮೋಜು ಮಾಡಿ ತಾಯಿ ತಂದೆಗಳ ರೊಕ್ಕ ಸೂರೆ ಮಾಡುವರು. ಇವರ ಪ್ರೊಫೆಸರ ಜನರಾದರೂ ಏನು ಮಾಡುತಿರುತ್ತಾರೊ! ಈ ಘಟಿಂಗರ ಮೇಲೆ ಅವರ ಲಕ್ಷ್ಯ ಎಳ್ಳಷ್ಟೂ ಇಲ್ಲವೊ, ಪಾಲ್?"

ನನ್ನ ಮನಸಿನ ಅವಸ್ಥೆ ತೀರ ಶೋಚನೀಯವಾಗಿತ್ತು. ಇನ್ನು ತಡೆಯುವದು ಸಾಧ್ಯವಾಗಲಿಲ್ಲ. ನಾನು ಸರಳವಾಗಿಯೆ ಹೇಳಿದೆ: "ನಿನಗೆ ಮ್ಯೂನಿಕ್ ಹಿಡಿಸುವದಿಲ್ಲವಾದರೆ ಇಲ್ಲಿ ಇನ್ನು ಇರೋಣ ಬೇಡ. ಆ ಪ್ರದರ್ಶನವನ್ನು ಕೂಡ ನೋಡಬೇಕೆನ್ನುವಿಯಾದರೆ ನೋಡುವ, ಇಲ್ಲದಿದ್ದರೆ ಅದೂ ಬೇಡ. ಇಲ್ಲೆ ಸ್ವಲ್ಪ ದೂರದಲ್ಲಿ ಸ್ಲಿಯಾಸಿ ಎಂಬ ಊರಿದೆ. ಗಾಡಿಯಲ್ಲಿ ಒಂದೆರಡು ತಾಸಿನ ಪ್ರಯಾಣ. ಸ್ಥಳವೂ ಬಹಳ ರಮಣೀಯವೆಂದು ಕೇಳಿದ್ದೇನೆ. ನನ್ನ ಹಳೆ ಮಿತ್ರ ಗ್ರೇಸರನೂ ಅಲ್ಲೆ ಇರುವನು."

ಅಂದೇ ಸಂಜೆ ನಾವು ಆ ಊರಿಗೆ ಹೋದೆವು. ಗ್ರೇಸರನ ಭೆಟ್ಟಿ ಮಾಡಿ ಬಂದು ಒಂದು ಹಾಟೇಲಿನಲ್ಲಿ ಇಳಿದೆವು. ಅದು ಸರೋವರದ ದಂಡೆಯ ಮೇಲೆಯೆ ಇತ್ತು. ಸಮೀಪದಲ್ಲೆ ಒಂದು ದಟ್ಟವಾದ ಅರಣ್ಯ. ನಿಸರ್ಗ ಸೌಂದರ್ಯದ ಉಪಭೋಗ ಮಾಡುವ ಸಂಧಿ ಜನರಿಗೆ ವಿರಳವಾಗಿಯೆ ದೊರೆಯುವದು... ಓಹೋ ಅವಸರದಲ್ಲಿ ನನ್ನ ಹೆಂಡತಿಯ ಹೆಸರು ಹೇಳಲಿಕ್ಕೇ ಮರೆತೆನಲ್ಲ. ಹೌದು, ಅವಳ ಹೆಸರು ಅಗಾಥಾ.... ಅವಳು ಬೇಸತ್ತು ಮಲಗಿದ್ದಳು. ನಾನು ಮಾತ್ರ ಸೈಕಲ ಹತ್ತಿ ನಿಸರ್ಗ ಸೌಂದರ್ಯವನ್ನು ಅವಲೋಕಿಸುತ್ತ ಸರೋವರಕ್ಕೆ ಪ್ರದಕ್ಷಿಣೆ ಹಾಕಿ ತಿರುಗಿ ಹಾಟೇಲಿಗೆ ಮರಳಿದೆ.

ಅಗಾಥೆ ಹಾಟೇಲಿನ ಬಳಿಯ ಹೂದೋಟದಲ್ಲಿ ಏನೋ ಓದುತ್ತ ಕುಳಿತಿದ್ದಳು. ಸುತ್ತಲೂ ಊರಿನ ಕೆಲ ಜನರಿದ್ದರು. ಆ ಸ್ಥಳ ನನಗೆ ಬಹಳ ಮೆಚ್ಚಿಕೆಯಾಗಿತ್ತು. ಅಲ್ಲೇ ಎರಡು ದಿನ ಉಳಿಯಬೇಕೆಂದು ಮನಸಿನಲ್ಲೆ ನಿಶ್ಚಯಿಸಿದ್ದೆ.

ಶುಭ್ರ ವೇಷವನ್ನು ಧರಿಸಿ ಪುಸ್ತಕಹಸ್ತಳಾಗಿ ಅಗಾಥೆಯು ತಂದ್ರಾತುರ ಸ್ವಪ್ನಮಯ ದೃಷ್ಟಿಯಿಂದ ಸರೋವರದತ್ತ ನೋಡುತಿದ್ದಳು. ನಾನು ಮೆಲ್ಲನೆ ಅವಳ ಕೈಯನ್ನು ನನ್ನ ಕೈಯಲ್ಲಿ ತೆಗೆದುಕೊಂಡು ಅಂಜುತ್ತಂಜುತ್ತಲೆ ಕೇಳಿದೆ: "ಅಗಾಥಾ, ಈ ಸ್ಥಳ ನಿನಗೆ ಹೇಗನಿಸುತ್ತದೆ?" "ಈ ನಿರ್ಜನ ಸ್ಥಳದಲ್ಲಿ ಎರಡು ದಿನಗಳಿಗಿಂತ ಹೆಚ್ಚು ಯಾರು ಇರಬಲ್ಲರು?" ಎಂದು ಅವಳು ಉತ್ತರವಿತ್ತಳು.

"ಆದರೆ ಈ ಸ್ಥಳ ನನಗೆ ಬಹಳ ಮೆಚ್ಚಿದೆ. ಈ ಸರೋವರ ಎಷ್ಟು ಸೊಗಸಾಗಿದೆ ನೋಡಿದಿಯಾ....?"

ಇರಬಹುದು—ನಿನಗೆ. ನನಗಂತೂ ಏನೂ ಸೇರುವದಿಲ್ಲವಪ್ಪ."

ನಾನು ಹಟದಿಂದ ಹೇಳಿದೆ, "ಮತ್ತು ಎದುರಿನ ಅರಣ್ಯ.... ಮನಸಿನಂತೆಯೇ ಅದೂ ಎಷ್ಟು ಗಹನ!"

"ನಿನಗೆ ಹಾಗೆ ತೋರಬಹುದು. ಆದರೆ ಆರೋಗ್ಯಕ್ಕೆ ಅದೇನೂ ಒಳ್ಳೆಯದಲ್ಲ. ಬೇಕಾದರೆ ಡಾಕ್ಟರರನ್ನು ಕೇಳಿ ನೋಡು!"

ಅಲ್ಲದೆ ಆ ಪರ್ವತ ಶಿಖರಗಳನ್ನು ನೋಡಿದೆಯಾ, ಅಗಾಥಾ? ಎಷ್ಟು ಮನೋಹರವಾಗಿವೆ?"

"ಏನು ಶಿಖರಗಳೋ ಏನು ಸೌಂದರ್ಯವೋ ಇವುಗಳಲ್ಲಿ ನೋಡುವಂಥಾದ್ದು ಏನಿದೆ? ಒಂದರಂತೆಯೆ ಮತ್ತೊಂದು, ಒಂದರ ಹಿಂದೆ ಇನ್ನೊಂದು....!" ಸ್ವಲ್ಪ ತಡೆದು ಅವಳು ತಿರುಗಿ ಹೇಳಿದಳು, "ಇನ್ನು ಇಲ್ಲಿಯ ಊಟದ ವ್ಯವಸ್ಥೆಯೂ ನೆಟ್ಟಗಿದ್ದಂತೆ ತೋರುವದಿಲ್ಲ. ಇಲ್ಲಿ ಜನರು ಬೀರು ಕುಡಿದು ಸೋಮಾರಿಯಾಗುವರೆಂದು ನನಗನಿಸುತ್ತದೆ. ಸೋಮಾರಿಯಾಗುವದು ನನಗೆ ಒಗ್ಗುವದಿಲ್ಲ. ಇಂಥ ನಿರ್ಜನ ಸ್ಥಳದಲ್ಲಿಯೇ ಇರಬೇಕಾಗಿದ್ದರೆ ಯಾವುದಾದರೊಂದು ಕಾನ್ವೆಂಟು ಸೇರಿದ್ದರೂ ನಡೆಯುತ್ತಿತ್ತು. ನಿನ್ನೊಡನೆ ಲಗ್ನ ಮಾಡಿಕೊಳ್ಳುವ ಅವಶ್ಯಕತೆ ಏನಿತ್ತು!"

ನನಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಅವಳಿಗೆ ಬೇಡವಾಗಿದ್ದರೆ ಮರುದಿನವೇ ಅಲ್ಲಿಂದ ತಳಕಿತ್ತೋಣವೆಂದು ಹೇಳಿಬಿಟ್ಟೆ.

ಆದರೆ ಸತ್ಯ ಹೇಳಬೇಕಾದರೆ, ನನಗೆ ಅಲ್ಲಿಂದ ಕದಲಲು ಎಳ್ಳಷ್ಟೂ ಮನಸಿರಲಿಲ್ಲ. ಸಾಮಾನು ಕಟ್ಟು, ಗಾಡಿ ಹತ್ತು, ಇಳಿ, ಸ್ಥಳ ಬದಲಿಸು, ಈ ಎಲ್ಲ ವ್ಯಾಪಾರ ನನಗೆ ಸೇರುವದಿಲ್ಲ. ಆದರೆ ಅಗಾಥಾಳಿಗೆ ಮಂದಿಯ ಬಾಯಲ್ಲಿ ತನ್ನಸ್ತುತಿಯನ್ನು ಕೇಳುವ ಆತುರ. ಭಕ್ತರಿಂದ ಮುಖಸ್ತುತಿಯನ್ನು ಕೇಳದಿದ್ದರೆ ಹೊತ್ತೇ ಹೋಗುತಿದ್ದಿಲ್ಲ ಅವಳಿಗೆ. ವಿಯೆನ್ನಾದಲ್ಲಿದ್ದುದರಿಂದ ಅವಳಿಗೆ ಅದೊಂದು ಚಟವೇ ಆಗಿಹೋಗಿತ್ತು. ಅಲ್ಲಿ ಇದ್ದಾಗ್ಗೆ ನಾನು

—೧೫ನೆಯ ಪುಟಕ್ಕೆ

ನಮ್ಮ ನೆರೆಯ ಇರಾಣಿಗಳು

ಇರಾಣದ ಪ್ರಾಚೀನ ಸಂಸ್ಕೃತಿ—ಇಸ್ಲಾಮಿನ ಬಿರುಗಾಳಿ—ರೈತ ಕೂಲಿಕಾರರ ದುರ್ಗತಿ—ಬಡತನದ ಭೈರವಲೀಲೆ—ಅಮೇರಿಕ ರಶಿಯುಗಳ ಮೇಲಾಟ—ಸುಲ್ತಾನನ ಕೊಲೆಯ ಪ್ರಯತ್ನ

ಇರಾಣಿಗಳು ಆರ್ಯಕುಲದವರು; ಅನಂತರ ಇಸ್ಲಾಮನ್ನು ಸ್ವೀಕರಿಸಿದರು. ಹಿಂದುಳಿದ ಅವರ ನಾಡಿನ ಆಂತರಿಕ ಪರಿಸ್ಥಿತಿ ಹೃದಯವಿದ್ರಾವಕವಾಗಿದೆ. ಒಂದೆಡೆ ಅಲ್ಪಸಂಖ್ಯ ಕುಬೇರರು ಸುಪ್ಪತ್ತಿಗೆಯ ಸುಖ ಅನುಭವಿಸುತ್ತಿದ್ದರೆ, ಇನ್ನೊಂದೆಡೆ ಕೌಪೀನಕ್ಕೆ ಚಿಂದಿಯಿಲ್ಲದ ಭಿಕ್ಷಾಪತಿಗಳು ಎಲ್ಲೆಲ್ಲೂ ಕಾಣಿಸುತ್ತಾರೆ. ಆಯಕಟ್ಟಿನ ಸ್ಥಾನದಲ್ಲಿರುವ ಕಾರಣ ಇರಾಣದ ರಾಜಕೀಯ ರಂಗವನ್ನು ನಾನು ವಶಪಡಿಸಿಕೊಳ್ಳಬೇಕು ತಾನು ವಶಪಡಿಸಿಕೊಳ್ಳಬೇಕೆಂದು ರಶಿಯ ಅಮೇರಿಕೆಗಳು ಸ್ಪರ್ಧೆ ನಡೆಸಿವೆ. ಸದ್ಯ: ಅಮೇರಿಕದ್ದೇ ಮೇಲುಗೈಯಾಗಿದ್ದರೂ ನಾಳೆ ಮತ್ತೊಂದು ಯುದ್ಧವೇನಾದರೂ ಸಂಭವಿಸಿತೆಂದರೆ ರಶಿಯ ಅರೆ ನಿಮಿಷದಲ್ಲಿ ಇರಾಣವನ್ನು ಸ್ವಾಹಾ ಮಾಡಿ ಬಕನಂತೆ ತೇಗದಿರದು. ಏಶಿಯದ ಒಂದು ಪ್ರಸಿದ್ಧ ಪ್ರಾಚೀನ ರಾಷ್ಟ್ರವಾದ ಇರಾಣವು ಹೀಗೆ ಬಿಳಿಯರ ಕೈಚಂಡಾಗಿ ನರಳುತ್ತಿದೆ.

ಪ್ರಾಚೀನ ಧರ್ಮ

ಪರ್ಶಿಯನ್ನರು ಅಥವಾ ಪಾರಸಿಕರು ಇಂದಿನ ಇರಾಣ ಅಥವಾ ಪರ್ಶಿಯದ ನಿವಾಸಿಗಳು. ಕುಲದಲ್ಲಿ ಕಾಕೇಶಿಯನ್ ಅಥವಾ ಇಂಡೋ-ಯುರೋಪಿಯನ್ನರು. ಇರಾನ್ ಎಂಬುದು ಆರ್ಯ ಎಂಬ ಶಬ್ದದ ತದ್ಭವ. ಡ್ಯಾನ್ಯೂಬ್ ನದಿಯ ತೀರದಿಂದ ಸುಮಾರು ಕ್ರಿ ಪೂ ೪-೫ ಸಾವಿರ ವರ್ಷಗಳ ಹಿಂದೆ ಕವಲೊಡೆದ ಆರ್ಯ ಮೂಲಪುರುಷರ ಎರಡನೆಯ ತಂಡದಲ್ಲಿ ಪುನಃ ಕವಲಾಗಿ ಇರಾನಿನಲ್ಲಿ ಉಳಿದವರನ್ನು ಬಿಟ್ಟು ಅಫಗಾಣಿಸ್ತಾನದ ಮೂಲಕ ಭಾರತಕ್ಕೆ ಬಂದು ವಲಸೆ ನಿಂದರು. ಇರಾನಿನಲ್ಲಿ ಉಳಿದವರೇ ಇಂದಿನ ಪಾರಸಿಕರ ಮೂಲ ಪುರುಷರು. ಜರತುಷ್ಟ್ರ ಎಂಬವನು ಅವರ ಮೂಲ ಗುರು ಮತ್ತು ವೇದಕ್ಕೆ ಅತಿ ಹತ್ತಿರವೆನಿಸುವ ಭಾಷೆಯಲ್ಲಿ ಬರೆದ ಜೆಂದವೆಸ್ತ ಅವರ ಪ್ರಾಚೀನ ಧರ್ಮಗ್ರಂಥ. ಅಹುರಮಜ್ದ ಎಂಬವನೇ ಅವರಿಗೆ ಇಂದ್ರನಂತೆ ಮುಖ್ಯ ದೈವವೆನಿಸಿದ್ದ. ಈ ಆರ್ಯ ಸಂಸ್ಕೃತಿ ಸುಮಾರು ೮-೯ ನೆಯ ಶತಕಗಳ ವರೆಗೆ ನಡೆದಿತ್ತು. ಆದರೆ ಆ ಬಳಿಕ ಇಸ್ಲಾಮಿನ ಬಿರುಗಾಳಿ ಬೀಸಿ ಅಲ್ಲಿಯ ಪ್ರಜೆಗಳು ಇಸ್ಲಾಮಿಗಳಾದರು.

ಕಾಲಿದಾಸನು 'ರಘುವಂಶ'ದಲ್ಲಿ ರಘುವು ಪಾರಸೀಕರನ್ನು ಜಯಿಸ ಹೊರಟನೆಂದು "ಪಾರಸೀಕಾಸ್ತತೋ ಜೇತುಂ ಪ್ರತಸ್ಥೇ ಸ್ಥಲವರ್ತ್ಮನಾ, ಇಂದ್ರಿಯಾಖ್ಯಾನಿವರಿಪೂಂಸ್ತತ್ವ ಜ್ಞಾನೇನ ಸಂಯಮೀ" ಎಂಬ ಶ್ಲೋಕದಲ್ಲಿ ಹೇಳಿದ್ದಾನೆ.

ಪ್ರಾಚೀನ ಕಾಲದಲ್ಲಿ ಇಂದಿನ ಇರಾನಿನ ಒಂದು ಭಾಗಕ್ಕೆ ಪಾರ್ಥಿಯ ಎಂಬ ಹೆಸರಿತ್ತು. ಅಲ್ಲಿ ಮಹಾಭಾರತದ ಕಾಲದಲ್ಲಿ ಅಂದರೆ ಸುಮಾರು ಕ್ರಿ. ಪೂ ೩೫೦೦ ರಲ್ಲಿ ಕುಂತೀಭೋಜನೆಂಬ ಅರಸನಿದ್ದನು. ಇವನು ಪೃಥುಗಳ ವಂಶದವನು. ಪಾಂಡವರ ತಾಯಿಯಾದ ಕುಂತಿ ಇವನ ದತ್ತದ ಮಗಳು. ಪ್ರಸಿದ್ಧ ಕವಿಯಾದ ಉಮರ್‌ಖಯ್ಯಾಂ ಈ ದೇಶದವನು. ಇಸ್ಲಾಮಿಗಳಿಂದ ತಮ್ಮ ಧರ್ಮವನ್ನು ಉಳಿಸಿಕೊಳ್ಳಲು ಓಡಿಬಂದ ಇರಾಣಿಗಳೇ ಭಾರತದ ಇಂದಿನ ಪಾರ್ಸಿಗಳು. ಇಲ್ಲಿ ಅವರಿಗೆ ಅಭಯ ಸಿಕ್ಕಿತು. ೧೯೨೫ ರಲ್ಲಿ ಅಧಿಕಾರಕ್ಕೆ ಬಂದ ರೀಜಾಖಾನ್ ಪಹ್ಲವಿ ಶಹಾ ಇತಿಹಾಸದಲ್ಲಿ ಪ್ರಸಿದ್ಧನಾದ ಡೇರಿಯಸ್ ದೊರೆಯ ಮಕುಟವನ್ನು ತನ್ನ ಮನೆತನಕ್ಕೆ ಆನುವಂಶಿಕವಾಗಿ ಮಾಡಿಕೊಂಡು ಪಾರ್ಥಿಯ (ಪೃಥ್ವಿ, ಪಾರ್ಥಿವ) ಎಂಬುದನ್ನು ಇರಾಣವೆಂದು ಬದಲಾಯಿಸಿದನು. ಈತನೂ ಅಫಗಾಣಿಸ್ತಾನದ ಅಮಾನುಲ್ಲನೂ ಇಸ್ಲಾಮಿ ಸಂಸ್ಕೃತಿಯನ್ನು ಹಿಂದಿಟ್ಟು ಪ್ರಾಚೀನ ಆರ್ಯ ಸಂಸ್ಕೃತಿಯ ನೆಲಗಟ್ಟಿನ ಮೇಲೆ ತಂತಮ್ಮ ರಾಷ್ಟ್ರಗಳನ್ನು ರೂಪಿಸಲು ಆಲೋಚನೆ ಮಾಡಿದವರು. ಈ ಕಾರ್ಯದಲ್ಲಿ ರೀಜಾ ಪಹ್ಲವಿ ತಕ್ಕಮಟ್ಟಿಗೆ ಕೃತಕೃತ್ಯನಾದನೆನ್ನಬಹುದು.

ಹೊಸ ಕಾಲ

ರಾಷ್ಟ್ರೀಯ ಸಭೆಯಾದ ಮಜ್ಲಿಸ್ ಎಂಬುದು ಇರಾಣದ ಪ್ರಾತಿನಿಧಿಕ ಸಂಸ್ಥೆ. ಆದುದರಿಂದ ಅಲ್ಲಿಯ ಮಂತ್ರಿ ಮಂಡಲ ಆದಕೆ ಹೊಣೆಯಾಗಿದೆ. ದೇಶವನ್ನು ೧೦ ಉಸ್ತಾನಗಳನ್ನಾಗಿ ವಿಭಾಗಿಸಲಾಗಿದೆ. ಒಂದೊಂದು ಉಸ್ತಾನಕ್ಕೂ ಒಬ್ಬೊಬ್ಬ ಉಸ್ತಾನದಾರನಿದ್ದಾನೆ. ಒಂದೊಂದು ಉಸ್ತಾನವನ್ನು ಪುನಃ ಹಲವಾರು ಶಹ್ರಿಸ್ತಾನಗಳನ್ನಾಗಿ ವಿಭಜಿಸಲಾಗಿದೆ. ಇರಾನಿನ ಗಡಿಯೊಳಗೆ ತಮ್ಮ ಪ್ರಭಾವ ಪ್ರತಿಷ್ಠೆಗಳನ್ನು ಬೆಳೆಸಿಕೊಳ್ಳಲು ಆಂಗ್ಲರೂ ರಶಿಯನ್ನರೂ ಸ್ಪರ್ಧಿಸುತ್ತ ಬಂದಿದ್ದಾರೆ. ಲೆನಿನ್ ಮಹಾಶಯನು ಝಾರನ ಕಾಲದ ಎಲ್ಲ ಒಪ್ಪಂದಗಳನ್ನು ಹರಿದೊಗೆದರೂ ಸಮಯ ಬಂದಾಗ ಇರಾನಿನಲ್ಲಿ ರಶಿಯನ್ನರ ಅಧಿಕಾರವನ್ನು ನಡೆಸುವ ಒಪ್ಪಂದವನ್ನು ಉಳಿಸಿಕೊಂಡನು. ಅದರ ಪ್ರಕಾರವೇ ಮೊನ್ನಿನ ಮಹಾಯುದ್ಧದ ಕಾಲದಲ್ಲಿ ಇರಾನಿನ ಉತ್ತರ ದಕ್ಷಿಣ ಭಾಗಗಳನ್ನು ರಶಿಯನ್ನರೂ ಆಂಗ್ಲರೂ ಆಕ್ರಮಿಸಿ ಅಲ್ಲಿಯ ಎಣ್ಣೆಯ ಗಣಿಗಳ ಆಧಿಪತ್ಯವನ್ನು ಉಳಿಸಿಕೊಂಡರು. ೧೯೪೬ ರಲ್ಲಿ ತೂದೇ ಪಾರ್ಟಿಯು ಅಜರ್‌ಬೈಜಾನಿನಲ್ಲಿ ರಶಿಯದ ಪ್ರಭಾವಕ್ಕೊಳಗಾಗಿ ಸ್ವತಂತ್ರವಾಗಲು ಒಂದು ನಿಷ್ಫಲ ಪ್ರಯತ್ನ ಮಾಡಿತು.

ಈಗ ಇರಾನಿನ ಸರಕಾರ ಆಂಗ್ಲೋ-ಅಮೇರಿಕನ್ನರ ವರ್ಚಸ್ಸಿಗೊಳಗಾಗಿದೆ. ಅವರಿಗೆ ಮೊದಲಿದ್ದ ಎಣ್ಣೆಯ ಸವಲತ್ತುಗಳು ಈಗಲೂ ಇವೆ. ಇದರಿಂದ ರಶಿಯಕ್ಕೆ ಬಹಳ ಅಸಮಾಧಾನವಾಗಿದೆ. ಇರಾಣದ ರಾಜಕೀಯ, ಸೈನಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಅಮೇರಿಕ ಭಾಗವಹಿಸುತ್ತಿರುವುದು ರಶಿಯವನ್ನು ಆದಷ್ಟು ದೂರ ಇಡಬೇಕೆಂದೇ. ಆದರೆ ಮನಸ್ಸು ಮಾಡಿದರೆ ರಶಿಯದ ಸೈನ್ಯ ಕೆಲವೇ ತಾಸುಗಳಲ್ಲಿ ಇಡೀ ಇರಾಣವನ್ನು ಕಬಳಿಸಿ ಬಿಡಬಹುದೆಂಬುದು ಇರಾಣಿಗಳಿಗೆ ಗೊತ್ತಿದೆ.

ಒಳನಾಡಿನ ಗತಿ

ಇರಾಣದ ಆಂತರಿಕ ಅವಸ್ಥೆ ಅವ್ಯವಸ್ಥೆಯಾಗಿದೆ; ಆ ಭೀಕರ ಬಡತನವನ್ನು ನೋಡಿದರೆ, ರೋಗರುಜೆಗಳನ್ನು ಕಂಡರೆ, ಬಹುಸಂಖ್ಯರ ಅಜ್ಞಾನ, ಅನಕ್ಷರತೆಗಳನ್ನು ಅವಲೋಕಿಸಿದರೆ ಮೈ ಜುಮ್ಮೆನ್ನುವುದು. ಇಂದಿಗೂ ಅಲ್ಲಿಯ ಒಕ್ಕಲಿಗರು ಮರದ ನೇಗಿಲಿಂದಲೇ ಉಳುತ್ತಾರೆ ಅವರ ಹೊಲವನ್ನು ಯಾರಾದರೂ ಜಪ್ತ ಮಾಡಿದರೆ ಅವರಿಗೆ ಕಾಯಿದೆಯ ರಕ್ಷಣೆಯಿಲ್ಲ ಖರ್ಚಿಗೆ ದುಡ್ಡು ಬೇಕಾದಾಗ ಅಲ್ಲಿಯ ಕುಬೇರರಿಗೆ ಚಕ್ರಬಡ್ಡಿ ತೆತ್ತು ಸಾಲ ತರಬೇಕಾಗುತ್ತದೆ. ಬೆಳೆದುದರಲ್ಲಿ ಅವರು ನೂರಕ್ಕೆ ೬೦ ರಿಂದ ೮೦ ಅಂಶ ಗೇಣಿ ಕೊಡಬೇಕು. ಅಂತೂ ಅವರು ಹೊಲದೊಡೆಯರ ಗುಲಾಮರು. ಕೂಲಿಕಾರರಿಗೂ ಅಷ್ಟೇ: ಯಾವ ಶಾಸನದ ಸಂರಕ್ಷಣೆಯೂ ಇಲ್ಲ. ಯಾರಾದರೂ ಸಮಾಜ ಸುಧಾರಣೆಗೆ ಕೈಹಾಕಿದರೆ ಸ್ಥಾನಮಾನ ವರ್ಚಸ್ಸುಗಳುಳ್ಳ ವ್ಯಕ್ತಿಗಳು ಅಡ್ಡಬರುವರು.

ಅಮೇರಿಕದ ಕೈವಾಡ

ಅಮೇರಿಕವು ೨ ನೆಯ ಮಹಾಯುದ್ಧದ ನಂತರ ಧನ, ಶಸ್ತ್ರಾಸ್ತ್ರ, ಯಂತ್ರೋಪಕರಣಗಳನ್ನು ಹೇರಳವಾಗಿ ಪೂರಯಿಸುತ್ತ ಬಂದಿದೆ; ಅಲ್ಲದೆ, ರಶಿಯದೊಡನೆ ಆದಷ್ಟು ಉಗ್ರವಾಗಿ ವರ್ತಿಸಬೇಕೆಂದು ಸರಕಾರಕ್ಕೆ ಬೋಧಿಸುತ್ತಲೂ ಇದೆ. ಈಗ ಅಮೇರಿಕ ಕಳಿಸುತ್ತಿರುವ ವಿಮಾನ, ಟ್ಯಾಂಕ್, ಬಂದೂಕು ಮುಂತಾದ ಸರಕುಗಳ ಬೆಲೆ ೧೦ ಕೋಟಿ ಡಾಲರುಗಳಷ್ಟಾಗುತ್ತದೆ. ಸದ್ಯಃ ಅಮೇರಿಕ ಕೊಡುತ್ತಿರುವ ಸಹಾಯದಿಂದ ಇರಾಣೀ ಶಾಸನಕರ್ತರು ತೃಪ್ತರಾಗಿದ್ದರೂ ಅವರಿಂದ ಇನ್ನೂ ಹೆಚ್ಚಿನ ಸಹಾಯ ಪಡೆಯಲು ಮನಸ್ಸುಳ್ಳವರಾಗಿಲ್ಲ. ಅಮೇರಿಕವು ಇರಾಣವನ್ನು ಒಕ್ಕಲುತನ, ಉದ್ಯಮ, ಸೈನ್ಯ ಮುಂತಾದವುಗಳಲ್ಲಿ ಆಧುನಿಕ ಮಟ್ಟಕ್ಕೇರುವಂತೆ ಮಾಡಲು ಮತ್ತೆ ೨೪ ಕೋಟಿ ಡಾಲರುಗಳನ್ನು ಕೊಡಬಯಸುತ್ತದೆ ಇದರ ಮೇಲೆ ಅಂತಾರಾಷ್ಟ್ರೀಯ ಬ್ಯಾಂಕಿನಿಂದ ೨೫ ಕೋಟಿ ಡಾಲರು ಸಾಲ ಕೊಡಿಸಲು ಮುಂದೆ ಬಂದಿದೆ. ಆದರೆ ಇರಾಣೀ ಪಾರ್ಲಿಮೆಂಟು ಈ ಒಂದಕ್ಕೂ ಈ ವರೆಗೆ ಒಪ್ಪಿಗೆ ಕೊಟ್ಟಿಲ್ಲ. ಆದರೂ ಅಮೇರಿಕನ್ನರು ತಮ್ಮ ಆಶೆಯನ್ನು ಬಿಟ್ಟುಕೊಟ್ಟಿಲ್ಲ. ಅಮೇರಿಕದ ಈ ಪ್ರಯತ್ನಗಳ ವಿರುದ್ಧ ಪ್ರಚಾರವನ್ನು ರಶಿಯನ್ನರು ಕೈಕೊಂಡು ಇರಾಣೀ ಸರಕಾರದ ಮೇಲೆ ಒತ್ತಾಯವನ್ನು ತರುವ ಹಂಚಿಕೆ ನಡೆಸಿದ್ದಾರೆ; ಇದಕ್ಕೆ ಇತ್ತೀಚೆಗೆ ನಡೆದ ಹಲಕೆಲವು ಗಡಿ ಗಲಭೆಗಳೇ ಸಾಕ್ಷಿಯಾಗಿವೆ. ರಶಿಯವು ಅನುಕೂಲ ಸಂದರ್ಭವನ್ನು ಕಾಯುತ್ತಿದೆ ಇರಾಣದಲ್ಲಿ ನೂರಕ್ಕೆ ೯೦ ಜನರು ದೀನದಲಿತರಿರುವುದರಿಂದ ಕಮ್ಯುನಿಜಂ ಪ್ರಸಾರಕ್ಕೆ ಅದು ಯುಕ್ತ ಕ್ಷೇತ್ರವಾಗಿದೆ. ಯುದ್ಧವೇನಾದರೂ ನಡೆದರೆ ರಶಿಯ ಎದುರು ಇರಾಣ ನಿಲ್ಲಲಾರದು.

ಇತ್ತೀಚಿನ ಕೋಲಾಹಲ

ಮೊನ್ನೆ ತೂದೇ ಪಾರ್ಟಿಯ ಎಡಪಕ್ಷದ ಉಗ್ರಗಾಮಿಗಳಲ್ಲಿ ಒಬ್ಬನಾದ ಫಕರ್ ರಾಯ್ ಎಂಬವನು ಇರಾಣದ ಸುಲ್ತಾನನಾದ ಶಹಾ ಮಹಮ್ಮದ್ ರೀಜಾ ಪಹ್ಲವಿಗೆ ಗುಂಡುಹೊಡೆದು ಗಾಯಗೊಳಿಸಿದ ಸುದ್ದಿ ಬಂದಿದೆ. ಇದರಿಂದ ಸರಕಾರವು ಆ ಉಗ್ರಗಾಮಿಗಳ ಪಕ್ಷವನ್ನು ವಿಸರ್ಜಿಸಿ ಬಿಟ್ಟಿತು. ಕೊಲೆಗಡಿಕನನ್ನು ಸುತ್ತುಮುತ್ತಿನವರೂ ಸೈನಿಕರೂ ಆಗಿಂದಾಗ ಸಂಹರಿಸಿಬಿಟ್ಟರು. ಆ ಸಂಬಂಧದಲ್ಲಿ ಇಬ್ಬರು ತೂದೇ ಮುಖಂಡರನ್ನು ಬಂಧಿಸಲಾಗಿದೆ ಮತ್ತು ಸೈನ್ಯದ ಕಾಯದೆಯನ್ನು ರಾಜಧಾನಿಯಾದ ತೆಹರಾಣದಲ್ಲಿ ಜಾರಿಗೆ ತರಲಾಗಿದೆ. ತೂದೇ ಪಕ್ಷವು ರಶಿಯದ ಬೆಂಬಲ ಕೆಲವು ಕಾಲದಿಂದ ಕೆಲವು ಅರಸನಾದರೂ ಕೇಳಬರುತ್ತದೆ. ಏಶಿಯದ ಒಂದು ದರಿದ್ರದೇಶವಾದ ಇರಾಣವಿಂದು ಹೀಗೆ ಬಿಳಿಯ ಜಾಣಕ್ಷರ ಕೈಯಲ್ಲಿ ಚಂಡಿನಂತೆ ಸಿಕ್ಕಿ ಒದ್ದಾಡುತ್ತಿರುವುದು ಬಹಳ ಶೋಚನೀಯವಾಗಿದೆ. ಅಲ್ಲಿಯ ಅಜ್ಞಾನ, ದಾರಿದ್ರ್ಯಗಳನ್ನು ನಿವಾರಣೆ ಮಾಡದಾದ ಸರಕಾರವಾದರೂ ಯಾವ ಗೌರವಕ್ಕೂ ಅರ್ಹವೆನಿಸದು. ಭಾರತದ ಆದರ್ಶವನ್ನು ಕಂಡಾದರೂ ಕಣ್ಣು ತೆರೆದು ನೋಡಿದರೆ ಇಂಥ ನೆರೆಯ ನಾಡುಗಳು ಅಂಧಕೂಪದಿಂದ ಮೇಲೇಳುವ ಹಾದಿಯನ್ನು ಹುಡುಕುವ ಧೈರ್ಯವನ್ನು ಪಡೆದಾವು. — ಅರ್ಜುನ

ಭಾರತೀಯರ ಸಂಕಟ

ಬ್ರಹ್ಮದೇಶದ ಆಂತರಿಕ ಗಲಭೆ ಪ್ರಕೋಪಕ್ಕೆ ಹೋಗಿರುವುದು. ಕಾರೆನ್ನರಿಗೆ ಬ್ರಹ್ಮೀ ಸರಕಾರದೊಳಗೇ ಪ್ರತ್ಯೇಕ "ಸ್ಥಾನ"ವೊಂದನ್ನು ಕೊಡುವುದಾಗಿ ಬ್ರಹ್ಮೀ ಮುಖ್ಯಮಂತ್ರಿ ಥಾಕಿನ್‌ನೂ ಅವರು ಸಾರಿದ್ದರ ಪರಿಣಾಮ ಅನುಕೂಲವಾದ ಸುದ್ದಿ ಬಂದಿಲ್ಲ. ಅದರ ಬದಲು ಕಾಳಗದ ಬೆಂಕಿ ಮತ್ತಷ್ಟು ಪ್ರಜ್ವಲವಾಗುತ್ತ ಬಂತೆಂದೇ ವಾರ್ತೆಯಿದೆ.

ಇನ್‌ಸೀನಿನಲ್ಲಿ ೧೦೦೦ ಭಾರತೀಯರು ಸಿಕ್ಕಿಬಿದ್ದಿದ್ದಾರೆ. ಬ್ರಹ್ಮೀ ಸೈನಿಕರಿಗೂ ಕಾರೆನ್ನರಿಗೂ ಇಲ್ಲಿ ಖಾದಾಖಾಡಿ ಕದನ ನಡೆದಿದೆ. ನಗರದ ತುಂಬ ಧೂಮಮಾಲೆ ಹಬ್ಬಿಹೋಗಿದೆ. ಭಾರತೀಯ ರಾಯಭಾರಿ ಕಚೇರಿಯವರೂ ಬ್ರಹ್ಮೀ ಸರಕಾರದವರೂ ಅವರನ್ನು ಅಲ್ಲಿಂದ ಪಾರುಮಾಡಲು ಭಗೀರಥ ಪ್ರಯತ್ನ ನಡೆಸಿದ್ದಾರೆ. ಹಿಂದೀಯರಲ್ಲದೆ ನಗರದಲ್ಲಿ ೨೭ ಬ್ರಿಟಿಶರು ಮತ್ತು ೫೦ ಪಾಕಿಸ್ತಾನಿಗಳೂ ಇದ್ದಾರೆ.

ಕಾರೆನ್ನರ ಕಾಳಗದ ಕಿಚ್ಚು ಹೆಚ್ಚಾಗುತ್ತಿದೆ. ಮಧ್ಯ ಬ್ರಹ್ಮದೇಶದಲ್ಲಿ ಅವರು ತಮ್ಮ ಪ್ರಬಲ ಕೇಂದ್ರವಾದ ಟೋಂಗೋ ನಗರದಿಂದ ದಕ್ಷಿಣಕ್ಕೆ (ಅಂದರೆ ರಾಜಧಾನಿಯಿಂದ ಉತ್ತರಕ್ಕೆ ೧೭೫ ಮೈಲು ದೂರ) ನುಗ್ಗಿರುವರು. ಅವರು ಶರಣು ಬರದಿದ್ದರೆ ಅವರ ಸರ್ವನಾಶ ಮಾಡುವುದಾಗಿ ಬ್ರಹ್ಮೀ ವೈಮಾನಿಕರು ಹಸ್ತಪತ್ರಿಕೆ ಹೊರಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೨ನೆಯ ಕನ್ನಡ ಸಾಹಿತ್ಯಸಮ್ಮೇಳನಕ್ಕೆ ಶ್ರೀಮಾನ್ ಉತ್ತಂಗಿ ಚೆನ್ನಪ್ಪನವರು ಅಧ್ಯಕ್ಷರು

೩೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಮಾರ್ಚ ೫,೬,೭ ನೆಯ ತಾರೀಖುಗಳಲ್ಲಿ ಹೈದರಾಬಾದು ಸಂಸ್ಥಾನದ ಕಲಬುರಗಿಯಲ್ಲಿ ನಡೆಯುತ್ತದೆ. ಧಾರವಾಡದ ಶ್ರೀಮಾನ್ ರೆ. ಉತ್ತಂಗಿ ಚೆನ್ನಪ್ಪನವರು ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ಸ್ವಾಗತ ಸಮಿತಿಯವರು ಸಮ್ಮೇಳನದ ಏರ್ಪಾಟುಗಳನ್ನು ಚುರುಕಿನಿಂದ ನಡೆಸುತ್ತಿದ್ದಾರೆ ಎಂದು ಪರಿಷತ್ತಿನ ಸಮ್ಮದ ಅಧ್ಯಕ್ಷರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮನರು ತಿಳಿಸುತ್ತಾರೆ.

ಹಿಂದಿಯೋಣಗದಲ್ಲಿ ಒಂದು ವಾರ

ಆಹಾರ ಸಮಸ್ಯೆಯ ತೀವ್ರ ಚರ್ಚೆ

ಸರದಾರ ಪಟೇಲರು ಆಹಾರ ಶಾಖೆಯನ್ನು ವಹಿಸಿಕೊಳ್ಳಬೇಕೆಂದು ಬಿನ್ನಹ—ವಿದೇಶಿ ವಸಾಹತುಗಳ ಬಗ್ಗೆ ಮುಖ್ಯ ಮಂತ್ರಿಗಳ ಹೇಳಿಕೆ

ಭಾರತದ ಘಟನಾ ಸಮಿತಿ ಫೆ ತಾ. ೧ಕ್ಕೆ ಶಾಸನ ಸಭಾರೂಪದಲ್ಲಿ ಪ್ರಾರಂಭವಾಗಿದ್ದು ಅನೇಕ ಶಾಖೆಗಳ ಅನೇಕ ಮಸೂದೆಗಳು ಮತ್ತು ಸರಕಾರೇತರ ಗೊತ್ತುವಳಿಗಳು ಚರ್ಚಿಸಲ್ಪಟ್ಟಿವೆ. ಈ ಅಧಿವೇಶನ ಮುಂಗಡ ಪತ್ರಿಕೆಯ ಅಧಿವೇಶನವಾಗಿದ್ದು ತಾ. ೨೮ಕ್ಕೆ ಮುಂಗಡ ಪತ್ರಿಕೆ ಮಂಡಿಸಲ್ಪಡಬಹುದು.

ಈ ವರೆಗೆ ನಡೆದ ಕಾರ್ಯಕಲಾಪಗಳಲ್ಲಿ ಡಾ. ಮುನಮೋಹನದಾಸರು ಮಂಡಿಸಿದ ಸರಕಾರೇತರ ಗೊತ್ತುವಳಿಯ ಫಲವಾಗಿ ನಡೆದ ಆಹಾರ ಚರ್ಚೆಯೇ ಮಹತ್ವದ್ದಾಗಿತ್ತು. ಚರ್ಚೆಯ ಕಾಲಕ್ಕೆ ಸರಕಾರದ ಧೋರಣವನ್ನು ಕಟುವಾಗಿ ಟೀಕಿಸಲಾಯಿತು. ಆಹಾರ ಶಾಖೆಯನ್ನು ಸರದಾರ ಪಟೇಲರು ತೆಗೆದುಕೊಳ್ಳಬೇಕೆಂಬ ಸೂಚನೆ ಕೂಡ ಮುಂದೆ ಮಾಡಲ್ಪಟ್ಟಿತು. ಆಹಾರ ಮಂತ್ರಿ ಜಯರಾಮದಾಸ ದೌಲತರಾಮರು ಸೌಮ್ಯವಾಗಿಯೆ ಉತ್ತರ ಕೊಟ್ಟು ಸರಕಾರದ ಮುಂದಿದ್ದ ಅಡಚಣೆಗಳನ್ನು ವಿವರಿಸಿದರು.

ಎರಡು ದಿನಗಳ (ತಾ. ೩ ಮತ್ತು ೪) ಆಹಾರ ಚರ್ಚೆಗೆ ಕಾರಣವೆಂದರೆ, ಡಾ ಮುನಮೋಹನದಾಸ ಮತ್ತು ಶ್ರೀ ಆರ್. ಕೆ. ಸಿಧ್ವಾ ಅವರು ತಂದಿದ್ದ ಗೊತ್ತುವಳಿಗಳು. ಡಾ. ದಾಸರ ಗೊತ್ತುವಳಿಯಲ್ಲಿ ಅಧಿಕ ಆಹಾರ ಬೆಳೆಯುವ ಸರಕಾರದ ಪ್ರಯತ್ನ ವಿಫಲವಾಗಿರುವದರಿಂದ ಆ ಬಗ್ಗೆ ಸಲಹೆ ಕೊಡಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಸೂಚಿಸಿದ್ದಿತು. ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿದವರಲ್ಲಿ ಶ್ರೀ ಆರ್. ಕೆ. ಸಿಧ್ವಾ, ಪಂ. ಹೃದಯನಾಥ ಕುಂಜರು, ಫ್ರ್ಯಾಂಕ್ ಅಂಥನಿ ಮೊದಲಾದವರಿದ್ದರು. ಶ್ರೀ ಸಿಧ್ವಾ ಅವರು ಕಳೆದ ಹದಿನೆಂಟು ತಿಂಗಳಲ್ಲಿ ಆಹಾರೋತ್ಪಾದನೆಯ ರಂಗದಲ್ಲಿ ಸರಕಾರ ಮಾಡಿದ ಕೆಲಸವೇನೆಂದು ವಿವರಿಸಲು ಅಪ್ಪಾನವಿತ್ತರಲ್ಲದೆ, ಪರದೇಶದಿಂದ ಬರುವ ಧಾನ್ಯಗಳಲ್ಲಿ ಮೋಸವನ್ನು ತಡೆಗಟ್ಟಲು ಸರಕಾರಕ್ಕೆ ಸಾಧ್ಯವಾಗಿಲ್ಲೆಂದು ಆಹಾರ ಮಂತ್ರಿಗಳೇ ಸ್ಥಾಯೀ ಸಮಿತಿ ಸಭೆಯಲ್ಲಿ ಒಪ್ಪಿಕೊಂಡ ಅಂಶವನ್ನು ಹೊರಗೆಡಹಿದರು. ಧಂಜಾರೆ ರೋಗದಿಂದ ಗೋಧಿ ಪೀಕು ನಾಶವಾಗುತ್ತಿರುವದನ್ನು ಪಂ. ಕುಂಝುರು ಅವರು ಉಲ್ಲೇಖಿಸಿ ಆಗ್ರಾ ಕಾಲೇಜಿನ ಪ್ರಿನ್ಸಿಪಾಲರು ಆದಕ್ಕೊಂದು ಪ್ರತೀಕಾರೋಪಾಯವನ್ನು ಹುಡುಕಿದ್ದು ಕೇಳಬಂದಿರುವದರಿಂದ ಅದನ್ನು ಸರಕಾರದವರು ಪರಿಶೀಲಿಸಬೇಕೆಂದು ಸೂಚಿಸಿದ್ದರು. ಶ್ರೀ ಫ್ರಾಂಕ ಅಂಥನಿಯವರು ಆ ರೋಗದಿಂದ ವರ್ಷಕ್ಕೆ ೧ ಕೋಟಿ ಟನ್ ಗೋಧಿ ನಾಶವಾಗುತ್ತಿರುವದರಿಂದ ಅದರ ಕಡೆ ಗಮನ ಕೊಡುವದವಶ್ಯವೆಂದರಲ್ಲದೆ ನಾಜೀಮುದ್ದೀನ ಅಹಮದರ ಹೇಳಿಕೆಯಂತೆ ಈ ಮಹತ್ವದ ಪ್ರಶ್ನೆ ಬಗೆಹರಿಯಬೇಕಾದರೆ ಮುಖ್ಯ ಮಂತ್ರಿಗಳಾಗಲಿ ಸರದಾರ ಪಟೇಲರಾಗಲಿ ಆಹಾರ ಶಾಖೆಯನ್ನು ವಹಿಸಿಕೊಳ್ಳಬೇಕೆಂದು ಸೂಚಿಸಿದರು. ಅನಂತಶಯನಂ ಅಯ್ಯಂಗಾರರು ನಮ್ಮ ದೇಶದ ಮತ್ತು ವಿದೇಶಗಳ ಎಕರೆವಾರು ಅನ್ನೋತ್ಪಾದನೆಯನ್ನು ಹೋಲಿಸಿ ಜಪಾನದಲ್ಲಿ ಎಕರೆಗೆ ೩೦೦೦ ಪೌಂ. ಧಾನ್ಯ ಬೆಳೆಯುತ್ತಿದ್ದರೆ ಈ ದೇಶದಲ್ಲಿ ಬರಿ ೯೦೦ ಪೌಂ. ಬೆಳೆಯುತ್ತಿದೆಯೆಂದು ಕೇಳಿದರು.

ದೇಶದ ಎಲ್ಲ ದಾಖಲೆಗಳು ಉಳಿತಾಯಗಳನ್ನು ಮೀರಿ ಹುಸಿ ಅಂತರ್‌ರಾಷ್ಟ್ರೀಯ ಸಾಲಕ್ಕೆ ಕೈನೀಡುವಂತೆ ಮಾಡಿರುವ ಗಾಢ ಆಹಾರ ಕೊರತೆಯಿಂದ ಸಹಜವಾಗಿಯೆ ಸದಸ್ಯರು ಉದ್ವಿಗ್ನರಾಗಿ ಕಠೋರ ಟೀಕೆಗಳನ್ನು ಮಾಡಿದರು.

ಆಹಾರ ಮಂತ್ರಿಗಳ ಉತ್ತರದ ಭಾಷಣದ ನಡುವೆಯೂ ಅನೇಕರು ಅವರನ್ನು ತಡೆತಡೆದು ಅರ್ಧ ಸವಾಲು ಹಾಕಿದರು. ಕಡೆಗಷ್ಟು ಉತ್ತರಕ್ಕಾಗಿ ಅವರನ್ನು ಒತ್ತಾಯಗೊಳಿಸಲಾಯಿತು. ಸಮಯಾಭಾವವನ್ನು ಸಹಿಸಲು ಸದಸ್ಯರು ಸಿದ್ಧರಿಲ್ಲವೆಂದು ಸ್ಪಷ್ಟವಾಯಿತು.

ಮಂತ್ರಿಗಳು ಸರಕಾರದ ಧೋರಣವನ್ನು ಸಮರ್ಥಿಸಿಕೊಳ್ಳುವದರಲ್ಲಿ ತಮ್ಮ ಮುಂದಿರುವ ಅನೇಕ ಕಷ್ಟಗಳನ್ನು ವಿವರಿಸಿದರು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಪೂರೈಸಿಕೊಳಿಸಿದಲ್ಲದೆ ಆಹಾರ ಪರಿಸ್ಥಿತಿ ಹೀಗೇ ಉಳಿಯುವದೆಂದು ಅವರು ಒಪ್ಪಿಕೊಂಡರು. ವಿವಿಧ ಪ್ರಾಂತಗಳಲ್ಲಿ ಆಹಾರ ಎತ್ತುವಳಿ ಸಮರ್ಪಕವಾಗಿಲ್ಲೆಂದೂ ಅವರ ಅಭಿಪ್ರಾಯವಾಗಿತ್ತು. ದೇಶದ ಆಹಾರ ವಿಸ್ತಾರ, ಹಳ್ಳಿಗರ ಅಜ್ಞಾನ, ಅಧಿಕ ಧಾನ್ಯೋತ್ಪಾದನೆಗೆ ಮಾಡಿದ ಧನಸಹಾಯದ ಸದುಪಯೋಗವಾಗದಿರುವದು, ಯಾಂತ್ರಿಕ ಸಾಮುಗ್ರಿಗಳನ್ನು ಕಳಿಸಲು ಸಾರಿಗೆಯ ಅಭಾವವೇ ಮೊದಲಾದವುಗಳು ಅಡಚಣೆಯುಂಟುಮಾಡಿವೆ ಪ್ರಾಂತಗಳೂ ಒಕ್ಕೂಟವೂ ಒಟ್ಟಾಗಿ ಒಕ್ಕಲತನದ ಅಭಿವೃದ್ಧಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟರೇನೇ ಆಹಾರದ ಉತ್ಪಾದನೆ ಹೆಚ್ಚೀತೆಂದು ಅವರೆಂದರು.

ಸದಸ್ಯರ ಒತ್ತಾಯಕ್ಕೋಸ್ಕರ, ಎರಡು ಮೂರು ವಾರಗಳಲ್ಲೆ ಉಚ್ಚ ವರ್ಗಗಳಲ್ಲಿ ಮಾತುಕತೆ ನಡೆಸಿ ಪರಿಣಾಮಕರ ಉಪಾಯ ಕೈಕೊಳ್ಳಲಾಗುವದೆಂದು ಮಂತ್ರಿಗಳು ಆಶ್ವಾಸನ ಕೊಟ್ಟಮೇಲೆ, ಅಸಂತೋಷದಿಂದಲೆ ಗೊತ್ತುವಳಿಗಳು ಹಿಂತೆಗೆದುಕೊಳ್ಳಲ್ಪಟ್ಟವು.

ಟ್ಯಾರಿಫ ಕಾಯದೆ ತಿದ್ದುಪಡಿ

ಜಿನೇವಾ ಅಂತರ್‌ರಾಷ್ಟ್ರೀಯ ವಾಣಿಜ್ಯ ಒಪ್ಪಂದಕ್ಕೆ ಭಾರತಸರಕಾರ ಈಗಾಗಲೆ ಅಂಕಿತ ಹಾಕಿದುದನ್ನು ಒಪ್ಪಿಕೊಳ್ಳುವ ಟ್ಯಾರಿಫ್ ಕಾಯದೆ ತಿದ್ದುಪಡಿ ಮಸೂದೆಗೆ ತಾ ೨ಕ್ಕೆ ಸಭೆ ಒಪ್ಪಿಗೆ ಕೊಟ್ಟಿತು. ಅದರ ಚರ್ಚೆಯಲ್ಲಿ ಹಲ ಸದಸ್ಯರು ಸಾಮ್ರಾಜ್ಯ ಸವಲತ್ತನ್ನು ಉಳಿಸಿ ಬ್ರಿಟನ್ನಿಗೆ ಸುಂಕದಲ್ಲಿ ಸೌಕರ್ಯ ತೋರಿಸಿದ್ದೇ ಮೊದಲಾದ ಅಂಶಗಳನ್ನು ಟೀಕಿಸಿದರು. ಆದರೆ ವಾಣಿಜ್ಯ ಮಂತ್ರಿಗಳು ಈ ವ್ಯವಸ್ಥೆಯಿಂದ ಭಾರತಕ್ಕಾಗುವ ಲಾಭಗಳನ್ನು ವಿವರಿಸಿದ್ದಲ್ಲದೆ ಬ್ರಿಟನ್ನಿನ ವಿರುದ್ಧ ಹಳಿಯ ಮನಃ ಕ್ಷೋಭ ಉಳಿಸಿಕೊಳ್ಳಬಾರದೆಂದು ವಾದಿಸಿದರು.

ದರ್ಬಾನ ಗಲಭೆ

ದರ್ಬಾನದ ವರ್ಣದ್ವೇಷಾತ್ಮಕ ಗಲಭೆಗಳನ್ನು ಕುರಿತು ಮುಖ್ಯ ಮಂತ್ರಿ ಪಂ. ನೆಹರೂ ಅವರು ಒಂದು ಮಹತ್ವದ ಹೇಳಿಕೆಯನ್ನು ಕೊಟ್ಟರು. (ತಾ. ೨). ಈ ಗಲಭೆಗಳ ಬಗ್ಗೆ ದಕ್ಷಿಣ ಆಫ್ರಿಕೆಯ ಭಾರತೀಯ ಹೈಕಮೀಶನರರ ಕಚೇರಿಯ ಶ್ರೀ ಚಾರಿಯವರಿಂದ ಬಂದ ವರದಿಯ ವಿವರಗಳನ್ನು ಸಭೆಯ ಮುಂದಿರಿಸಿ (ಮರಣ: ೫೩ ಹಿಂದೀಯರು ಮತ್ತು ೮೩ ಆಫ್ರಿಕನರು; ಗಾಯಗೊಂಡವರು: ೧೦೮೭; ನಷ್ಟ: ೨೪೦ ಭಾರತೀಯ ಮನೆಗಳು, ೨೦ ಅಂಗಡಿಗಳು. ೨೦೦೦೦ ಭಾರತೀಯರು ನಿರಾಶ್ರಿತರು) ಪರಿಹಾರಕ್ಕಾಗಿ ಭಾರತ ಸರಕಾರ ೫೦೦೦೦ ಪೌ. ಕೊಟ್ಟಿದೆಯೆಂದು ತಿಳಿಸಿದರು. ಈ ಪರಿಹಾರಧನ ಉಭಯ ಪಕ್ಷದವರಿಗೂ ತಲಪಬೇಕೆಂದು ತಿಳಿಸಲಾಗಿದೆ. ಆಫ್ರಿಕನ್ನರಿಗೂ ಹಿಂದೀಯರಿಗೂ ನಡುವೆ ಉಂಟಾದ ಕ್ಷೋಭದಬಗ್ಗೆ ಅವರು ವ್ಯಾಕುಲ ವ್ಯಕ್ತಗೊಳಿಸಿ ಉಭಯತರಲ್ಲಿ ಸೌಹಾರ್ದವನ್ನು ನೆಲೆಗೊಳಿಸುವದಲ್ಲದೆ ಆಫ್ರಿಕನ್ನರ ಅಭ್ಯುದಯಕ್ಕೆ ನೆರವಾಗುವದೇ ಭಾರತದ ಧೋರಣವೆಂದು ಸ್ಪಷ್ಟಗೊಳಿಸಿದ್ದರಿಂದ ಭಾರತೀಯ ಆಫ್ರಿಕನ್ನರಲ್ಲಿ ಒಡಕು ಹುಟ್ಟಿಸುವ ಬಿಳಿಯರ ಆಟಕ್ಕೆ ಭಾರತ ಸರಕಾರ ಬಲಿಬೀಳುವದಿಲ್ಲೆಂದು ವ್ಯಕ್ತವಾಯಿತು.

ವಿದೇಶಿ ವಸಾಹತುಗಳು

ಭಾರತದಲ್ಲಿರುವ ಫ್ರೆಂಚ್ ಮೊದಲಾದ ವಿದೇಶಿ ವಸಾಹತುಗಳ ಭವಿಷ್ಯದ ಬಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಮುಖ್ಯ ಮಂತ್ರಿ ಪಂ. ನೆಹರು ಅವರು ಉತ್ತರ ಕೊಡುತ್ತ ಈ ವಸಾಹತುಗಳಿಗೆ ಭಾರತದಲ್ಲಿ ಲೀನವಾಗದೆ ಗತ್ಯಂತರವಿಲ್ಲೆಂಬ ಮನವರಿಕೆಯನ್ನು ವ್ಯಕ್ತಗೊಳಿಸಿದರು. ಫ್ರೆಂಚರ ೫ ವಸಾಹತುಗಳಲ್ಲಿ ನಾಲ್ಕರಲ್ಲಿ ಈಗಾಗಲೆ ನಗರ ಸಭಾ ಚುನಾವಣೆಗಳಾಗಿದ್ದು ಇನ್ನೊಂದರಲ್ಲಿ ಸದ್ಯಕ್ಕೆ ಆಗಲಿದೆ. ಆ ಮೇಲೆ ಅಲ್ಲಿ ಸೇರ್ಪಡೆಯ ಬಗ್ಗೆ ಮತಗಣನೆ ನಡೆಯುವದೆಂದೂ ಈ ವಸಾಹತುಗಳ ಪ್ರಜೆಗಳ ಅಭಿಪ್ರಾಯ ಭಾರತದಲ್ಲಿ ವಿಲೀನವಾಗಬೇಕೆಂದೇ ಇದೆಯೆಂದೂ ತಿಳಿಸಲಾಯಿತಲ್ಲದೆ ಮುಕ್ತಗೊಳಿಸಿದ ಕಾಲಕ್ಕೆ ಭಾರತ ಸರಕಾರದ ಸಿರಿ ಕ್ಷೆಕರಿರಬೇಕೆಂದು ಫ್ರೆಂಚ ಸರಕಾರಕ್ಕೆ ಒತ್ತಾಯ ಮಾಡಲಾಗಿದೆಯೆಂದೂ ಸ್ಪಷ್ಟಗೊಳಿಸಲಾಯಿತು.

ಮಾನವದಾರ, ಮಂಗ್ರೋಲ

ಕಾಠೇವಾಡದ ಮಂಗ್ರೋಲ ಮತ್ತು ಜುನಾಗಢದ ಮಾನವದಾರ ಸಂಸ್ಥಾನಗಳ ಕೆಲ ಆಸ್ತಿಗಳ ಆಡಳಿತಕ್ಕೆ ಬೇಕಾದ ಅಧಿಕಾರಗಳನ್ನು ಸಂಸ್ಥಾನ ಮಂತ್ರಿಗಳು ಕೇಳಿದುದಕ್ಕೆ ಸಭೆಯಲ್ಲಿ ಸಾಕಷ್ಟು ಬೆಂಬಲ ದೊರೆಕರೂ ಮೌ. ಹಜರತ ಮೊಹಾನಿಯವರು ಮಾತ್ರ ಸಂಸ್ಥಾನ ಶಾಖೆಯನ್ನು ನಾಜಿಗಳಿಗೆ ಹೋಲಿಸಿ ಪೊಟ್ಟೆಯುರಿಯನ್ನು ಹೊರಗೆಡಹಿದರು. ಮಂಗ್ರೋಲ ನರೇಂದ್ರನು ಮೊದಲು ಸೇರ್ಪಡೆ ಪತ್ರಕ್ಕೆ ಸಹಿಹಾಕಿ ಆ ಮೇಲೆ ಪಾಕಿಸ್ತಾನದೊಡನೆ ಒಪ್ಪಂದ ಮಾಡಿಕೊಂಡನು. ಮಾನವದಾರವು ಜುನಾಗಡದೊಳಗಿದ್ದು ಅದಕ್ಕೆ ಸ್ವತಂತ್ರ ಅಸ್ತಿತ್ವವೇ ಇಲ್ಲ. ಇವೆರಡು ಸಂಸ್ಥಾನಗಳನ್ನು ಭಾರತ ಸರಕಾರ ವಶಪಡಿಸಿಕೊಂಡಿತ್ತು. ಮೊಹಾನಿಯವರು ಜುನಾಗಡ ಹೈದರಾಬಾದಗಳ ಪ್ರಶ್ನೆ ಬಂದೊಡನೆ ಹೀಗೆ ದಾರಿತಪ್ಪಿ ಮಾತಾಡುವದನ್ನು ಸರದಾರ ಪಟೇಲರು ಖಂಡಿಸಿದರು. ಮಸೂದೆ ಸ್ವೀಕೃತವಾಯಿತು.

ಬ್ಯಾಂಕಿಂಗ್ ಮಸೂದೆ, ಕಂಪನಿಗಳ ಲಾಭ ಹಂಚಿಕೆಯ ಮಸೂದೆ, ಚಹಾ ಸಮಿತಿಯನ್ನು ಸ್ಥಾಪಿಸುವ ಮಸೂದೆ ಮೊದಲಾದವು ಪರಿಶೀಲಕ ಸಮಿತಿಗೊಪ್ಪಿಸಲ್ಪಟ್ಟವು.

ಸೈನಿಕರು ರಾಷ್ಟ್ರಸೇವಕರು

ಸೈನ್ಯಾಧಿಕಾರಿಗಳಿಗೆ ಜ. ಕಾರ್ಯಪ್ಪನವರ ಉಪದೇಶ

ಸ್ವಾರ್ಥಕ್ಕಿಂತಲೂ ದೇಶಸೇವೆಗೇ ಮಹತ್ವ ಕೊಟ್ಟು ಸೈನಿಕರು ದುಡಿಯಬೇಕೆಂದು ಮುಖ್ಯ ಸೇನಾಪತಿ ಜನರಲ್ ಕಾರ್ಯಪ್ಪನವರು ಮದ್ರಾಸಿನಲ್ಲಿ (ತಾ. ೬) ಸೇರಿದ ಉಚ್ಚ ಮತ್ತು ಮಧ್ಯಮ ವರ್ಗದ ಸೇನಾಧಿಕಾರಿಗಳ ಸಭೆಯಲ್ಲಿ ಉಪದೇಶಿಸಿದರು. ಜಗತ್ತಿನ ಯಾವ ಸೈನ್ಯಕ್ಕೂ ಕಡಿಮೆಯೆನಿಸದಂತೆ ಭಾರತದ ಸೈನ್ಯವನ್ನು ಕಟ್ಟಬೇಕು. ಆ ಕಾರ್ಯದಲ್ಲಿ ಸ್ವಾರ್ಥತ್ಯಾಗದಿಂದ ಅಧಿಕಾರಿಗಳು ಪ್ರವೃತ್ತರಾಗಬೇಕು. ಆಗ ಅವರಿಗೆ ಧನಲಾಭವಿಲ್ಲದಿದ್ದರೂ ಕೀರ್ತಿಲಾಭವಾಗುವದರಲ್ಲಿ ಸಂಶಯವಿಲ್ಲ.

ಸೈನ್ಯದಲ್ಲಿರಬೇಕಾದ ಶಿಸ್ತು ಸಂಘಟನೆಗಳನ್ನು ಒತ್ತಿ ಹೇಳುತ್ತ ಮುಖ್ಯ ಸೇನಾಪತಿಗಳು ಸೈನ್ಯದ ಸೊತ್ತು ಸಲಕರಣೆಗಳು ಕರಕೊಡುವ ಪ್ರಜಾಕೋಟಿಗೆ ಸೇರಿದ್ದೆಂದು ಮನಗಂಡು ಅದನ್ನು ಜತನವಾಗಿ ಕಾಪಾಡಬೇಕೆಂದರು. ಅಧಿಕಾರಿಗಳು ಮನೆಯಲ್ಲೆ ಆಗಲಿ ಸೈನ್ಯದ ಭೋಜನಾಲಯದಲ್ಲೆ ಆಗಲಿ ದುಂದುಗಾರಿಕೆ ಮಾಡುವದು ಸಲ್ಲದು. ಯೋಗ್ಯ ಭಾವನೆಯಿಂದ ಆಜ್ಞೆಗಳನ್ನು ಪಾಲಿಸದಿದ್ದವರಿಗೆ ಶಿಸ್ತುಭಂಗಕ್ಕಾಗಿ ಉಗ್ರ ದಂಡನೆ ವಿಧಿಸಲಾಗುವದೆಂದೂ ಅವರು ಎಚ್ಚರಿಕೆ ಕೊಟ್ಟರು.

ಜಾತೀಯತೆ, ರಾಜಕೀಯ ಪಕ್ಷಪಾತಗಳು ಸೈನ್ಯದೊಳಗೆ ಕಾಲಿಡಕೂಡದೆಂದು ಅವರು ತಿಳಿಸಿದರು.

ಮದ್ರಾಸ್ ಕಾರ್ಪೊರೇಶನ್ನು ಬೆಳ್ಳಿಯ "ತೋಫಿ"ನಲ್ಲಿಟ್ಟು ಜ. ಕಾರ್ಯಪ್ಪನವರಿಗೆ ಮಾನಪತ್ರವನ್ನರ್ಪಿಸಿದರು.

ಮುಂಬಯಿ ಕರ್ನಾಟಕಕ್ಕೆ ಜೋಗ ವಿದ್ಯುಚ್ಛಕ್ತಿ

ಕಾಳಿ ನದಿಗೆ ಅಣೆಕಟ್ಟು

ಜೋಗದಿಂದ ಶಿರಸಿ, ಯಲ್ಲಾಪುರ, ದಾಂಡೇಲಿ ಮಾರ್ಗವಾಗಿ ಹುಬ್ಬಳ್ಳಿ ಧಾರವಾಡಗಳಿಗೆ ವಿದ್ಯುಚ್ಛಕ್ತಿಯನ್ನು ತರುವ ಉದ್ದೇಶ ಸರಕಾರಕ್ಕಿದೆಯೆಂದೂ ಅದಕ್ಕಾಗಿ ಇಷ್ಟರಲ್ಲೆ ಮೈಸೂರು ಸರಕಾರದೊಡನೆ ಮುಂಬಯಿ ಮಂತ್ರಿಗಳಾದ ಡಾ. ಗಿಲ್ಡರರೂ ಪಾಟೀಲ ಮಲ್ಲನಗೌಡರೂ ಮಾತುಕತೆ ಆರಂಭಿಸಲಿರುವರೆಂದೂ ಮಾನ್ಯ ಮುಖ್ಯ ಮಂತ್ರಿ ಹಾಗು ಒಕ್ಕಲತನ ಮಂತ್ರಿಗಳ ಉತ್ತರ ಕನ್ನಡ ಜಿಲ್ಲಾ ಪ್ರವಾಸದ ಕಾಲದಲ್ಲಿ ಹೊರಗೆಡಹಲ್ಪಟ್ಟಿತು. ಜೋಗವನ್ನು ಮಂತ್ರಿದ್ವಯರು ಸಂದರ್ಶಿಸಿದರು. ಅಲ್ಲಿ ೪೮೦೦೦ ಕಿಲೋವಾಟ್ ಶಕ್ತಿ ಉತ್ಪಾದಿಸಲ್ಪಡುತ್ತಿದ್ದು ಮೈಸೂರು ಸಂಸ್ಥಾನದವರು ೧೦೦೦೦ ಕಿಲೋವಾಟ್ ಮಾತ್ರ ಉಪಯೋಗಿಸುತ್ತಿರುವರು.

ಕಾರವಾರ ಜಿಲ್ಲೆಯ ಸುಪಾದಲ್ಲಿ ಕಾಳಿ ನದಿಗೆ ಕಟ್ಟಲಿರುವ ಅಣೆಕಟ್ಟಿನ ಸ್ಥಳವನ್ನೂ ಮಂತ್ರಿಗಳು ಪರಿಶೀಲಿಸಿದರು. ವಿದ್ಯುತ್ ಮತ್ತು ನೀರಾವರಿಯನ್ನೊಳಗೊಂಡ ಈ ಅಣೆಕಟ್ಟು ೨೭೫ ಅಡಿ ಎತ್ತರ ಹಾಗು ೮೪೦ ಅಡಿ ಉದ್ದವಿರುವದು. ಅದರಲ್ಲಿ ೧೨೮೦ ಘನ ಅಡಿಯಷ್ಟು ನೀರು ೪೮ ಚೌ. ಮೈಲು ಕ್ಷೇತ್ರದಲ್ಲಿ ಸದಾಕಾಲ ನಿಲ್ಲುವದು. ಜೋಗ ವಿದ್ಯುತ್ತು ದೊರೆತರೂ ಈ ಯೋಜನೆಯನ್ನು ತ್ಯಜಿಸಲಾಗುವದಿಲ್ಲೆಂದು ಮಂತ್ರಿಗಳು ಹೇಳಿದರು.

ಕಾಶ್ಮೀರ ಸಮಸ್ಯೆ ಸುಲಭವಾಗಿ ಬಿಡುವದು

ಯು. ರಾ. ಸಮಿತಿಯ ಆಸೆ

ಯುಕ್ತರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ಸದಸ್ಯರು ಕರಾಚಿಯಲ್ಲಿ ಬಂದಿಳಿದಿದ್ದು ಪಾಕಿಸ್ತಾನದ ಮಂತ್ರಿ-ಅಧಿಕಾರಿಗಳೊಡನೆ ಮಾತುಕತೆ ಪ್ರಾರಂಭಿಸಿದ್ದಾರೆ. ಈ ಮಾತುಕತೆಗಳ ವಿವರವೇನೂ ಪ್ರಕಟವಾಗಿಲ್ಲವಾದರೂ ಕಾಶ್ಮೀರ ಸಮಸ್ಯೆ ಸುಲಭವಾಗಿ ಬಿಡುವದೆಂಬ ಧೈರ್ಯವನ್ನು ಸಂಧಾನ ಸಮಿತಿಯ ಅಧ್ಯಕ್ಷರಾದ ಡಾ. ಲೊಝಾನೋ ವ್ಯಕ್ತಗೊಳಿಸಿದ್ದಾರೆ. ಮತಗಣನೆಯನ್ನು ನಡೆಸಬೇಕಾದರೆ ಕನಿಷ್ಠ ಎರಡು ವರ್ಷ ಹಿಡಿಯಬಹುದೆಂದು ಹೇಳಲಾಗಿದೆ. ಸಮಸ್ಯೆಯನ್ನು ಮತಗಣನೆಯಿಲ್ಲದೆ ಬಗೆಹರಿಸಲವಕಾಶವಿದೆಯೆಂದು ಸಮಿತಿಯ ಮತವಂತೆ. ಉಭಯ ಸರಕಾರಗಳ ಪ್ರತಿನಿಧಿಗಳನ್ನು ಸಭೆಗೂಡಿಸಿ ಈ ಪ್ರಸ್ತಾವ ಮಾಡಲಾಗುವದೆಂದೂ ಮತಗಣನೆಯೇ ಬೇಕೆಂದು ಹಟಹಿಡಿಯಲ್ಪಟ್ಟರೆ ಮಾತ್ರ ಆ ಬಗ್ಗೆ ವ್ಯವಸ್ಥೆ ಮಾಡಲಾಗುವದೆಂದೂ ತಿಳಿಯುತ್ತದೆ.

ಈ ನಡುವೆ ಯುಕ್ತರಾಷ್ಟ್ರದ ಜನಮತಗ್ರಹಣಾಧಿಕಾರಿಯನ್ನು ನೇಮಿಸುವ ಬಗ್ಗೆ ಒಂದು ಯಾದಿ ಪ್ರಕಟಿಸಲ್ಪಟ್ಟಿದೆ. ಅದರಿಂದ ಉಭಯ ಸರಕಾರಗಳು ಯಾರನ್ನೂ ಆಯ್ದುಕೊಳ್ಳಬಹುದು. ಆದರೆ ಅದರಲ್ಲಿ ಅಂತರ್‌ರಾಷ್ಟ್ರೀಯ ಪ್ರಸಿದ್ಧ ಪುರುಷರೊಬ್ಬರ ಹೆಸರೂ ಇಲ್ಲದಿರುವದರಿಂದ ದಿಲ್ಲಿ-ಕರಾಚಿಗಳಲ್ಲಿ ಅಸಂತೋಷವುಂಟಾಗಿದೆ.

ಗೋಪಾಲ ಕೃಷ್ಣ ಗೋಖಲೆಯವರು

ಗಾಂಧೀಜಿಯ ರಾಜಕೀಯ "ಗುರು"ವಿನ ತ್ಯಾಗಮಯ ಆದರ್ಶ ಜೀವನ

ಲೇಖಕರು —
ಶ್ರೀ. ನೆಗಳೂರು ರಂಗನಾಥರು


ಗೋಖಲೆಯವರು.

೧೯೧೫ ರ ಫೆಬ್ರುವರಿ ೧೯ ಕ್ಕೆ ಗೋಖಲೆಯವರು ಪರಲೋಕವಾಸಿಗಳಾದರು. ಆ ಮಾತಿಗೆ ೩೯ ವರುಷಗಳಾದುವು. ಇಷ್ಟು ಕಾಲ ಗತಿಸಿಹೋದರೂ ಅವರ ಸ್ಮರಣೆಯಿಂದ ಸ್ಫೂರ್ತಿ ಬರುತ್ತಲೆ ಇದೆ. ಅವರು ಪ್ರಾರಂಭಮಾಡಿದ ಕಾರ್ಯ ಕುದುರುತ್ತಲೆ ಇದೆ ಮಹಾನುಭಾವರ ರೀತಿಯೇ ಹಾಗೆ. ಬದುಕಿರುವಾಗ ಬೃಹದಾಕಾರದ ಕಾರ್ಯ ಮಾಡುವರು; ಭೌತಿಕ ಬಾಳು ಮುಗಿದ ನಂತರವೂ ಅವರ ನೆನಹು ಅವರ ಕಾರ್ಯದ ಮಹತ್ವದ ಅರಿವು ತಂದುಕೊಟ್ಟು ಮುಂದಿನ ಪೀಳಿಗೆಯಲ್ಲಿ ಉತ್ಸಾಹಶಕ್ತಿ ತಂದುಕೊಡುವುದು. ಅದಕ್ಕಾಗಿಯೇ ಅನ್ನುವುದು ರೂಢಿಯಲ್ಲಿ — ಮಹಾನುಭಾವರ ಬಾಳು ಎರಡು ತೆರ: ಭೌತಿಕ—ಆತ್ಮಿಕ ಎಂದು.

ಗೋಖಲೆಯವರ ಭೌತಿಕ ಬಾಳು ಈ ಜಗತ್ತಿನಲ್ಲಿ ಕೇವಲ ೪೯ ವರುಷವಾಗಿತ್ತು. ಒಂದು ಜೀವವು ಈ ಐವತ್ತು ವರುಷಗಳಲ್ಲಿ ಮಾಡಿದ ಕಾರ್ಯದ ಪರಿಶೀಲನೆ ಮಾಡಿದರೆ ಆ ಜೀವವು ಎಷ್ಟು ಹಿರಿದಾಗಿದ್ದಿತೆಂದು ತಿಳಿದುಬರುವುದು. ಅಲ್ಲದೆ ಮರಣಾನಂತರವೂ ಅವರು ಕೈಕೊಂಡ ಕಾರ್ಯವು ಜರಿಗಡಿಯದೆ ಸಾಗುತ್ತಿರುವುದರ ಸಂಗತಿಯು ಕೂಡ ಆ ಜೀವದ ದೊಡ್ಡತನವನ್ನು ತೋರುತ್ತದೆ.

ಗೋಖಲೆಯವರು ಬಹುದೊಡ್ಡ ಜೀವಿ. ಅವರ ದೊಡ್ಡತನ ಅವರ ಕಾರ್ಯದಿಂದಲೆ ಬಂದುದು. ಕಾರ್ಯಕ್ಕೆ ಕಸುವು ಬಂದುದು ಅವರ ಧ್ಯೇಯದಿಂದ. ಧ್ಯೇಯಕ್ಕೆ ಜೀವ ಬಂದುದು ಸೇವೆಯಿಂದ, ಸತತವಾದ ಸೇವೆಯಿಂದ, ನಿಸ್ವಾರ್ಥ ಸೇವೆಯಿಂದ, ದೇಶದ ಸೇವೆಯಿಂದ. "ನಮ್ಮ ದೇಶದ ಜನರು ಉಳಿದ ದೇಶದ ಜನರು ತಮ್ಮ ದೇಶದಲ್ಲಿ ಇದ್ದಂತೆ ಇರಬೇಕೆಂದು ನನ್ನ ಬಯಕೆ. ನಮ್ಮ ಜನ-ಹೆಂಗಸು-ಗಂಡಸರು-ಜಾತಿ-ಮತ ಪಂಥಗಳ ಭೇದವಿಲ್ಲದೆ ಬೆಳೆಯಲು, ಪರಿಪೂರ್ಣರಾಗಲು-ಅಸ್ಪದ-ಅನುವು ಪಡೆಯಬೇಕು; ಯಾವ ಬಗೆಯ ಅಸ್ವಾಭಾವಿಕವಾದ ತಡೆಯೂ ಇಲ್ಲದೆ ಬೆಳೆಯುತ್ತಿರಬೇಕು. ನಮ್ಮ ಭಾರತವು ಉಳಿದ ಜಾಗತಿಕ ದೇಶಗಳ ಜತೆಗೆ-ರಾಜಕೀಯದಲ್ಲಿ, ಔದ್ಯೋಗಿಕತೆಯಲ್ಲಿ, ಧಾರ್ಮಿಕ ವಿಚಾರದಲ್ಲಿ, ಸಾಹಿತ್ಯದಲ್ಲಿ, ಕಲೆಯಲ್ಲಿ, ತನ್ನ ಸರಿಯಾದ ಸ್ಥಾನವನ್ನು ಪಡೆಯಬೇಕು" ಎಂದು ಅವರು ಒಂದು ಭಾಷಣದಲ್ಲಿ ಹೇಳಿದ್ದಾರೆ.

ಬಯಕೆಗಳು ಕೊನರಿ ಕಮರಿ ಹೋದರೆ ಅವು ಕೇವಲ ದರಿದ್ರನ ಮನೋರಥಗಳಾಗುವವು. ಗೋಖಲೆಯವರ ಬಯಕೆಗಳು ಗಾಳಿಗೋಪುರಗಳಾಗಲಿಲ್ಲ. ಇಂದು ಭಾರತದಲ್ಲಿ ಭಾರತಕ್ಕಾಗಿ ಹಗಲಿರುಳು ದುಡಿಯುತ್ತಲಿರುವ ಸೇವಕರ ತಂಡವೊಂದು ಅವರ ಕಾರ್ಯ ನಿರ್ವಹಿಸುತ್ತಲಿದೆ. ಅದೆ ಭಾರತ ಸೇವಕ ಸಮಾಜ (Servant of India Society) ಮೇಲೆ ವಿವರಿಸಿದ ಮಾತುಗಳು ಗೋಖಲೆಯವರಿಂದ ಹೊರಬಂದವು. ಇಂದು ಗೋಖಲೆಯವರ ನೆನಹು ಭಾರತದ ಜನರಲ್ಲಿ ಬರುವುದು ಈ ಭಾರತ ಸೇವಕ ಸಮಾಜದಿಂದಲೆ. ಅದು ಅವರ ಬಾಳಿನ ಉಸಿರು. ಕಾರ್ಯದ ಕುರುಹು. ಪ್ರಭಾವದ ಪ್ರತೀಕ.

ಕರ್ತವ್ಯದ ಕೋಟೆ

ಮೊದಲಿನಿಂದ ಕೊನೆಯತನಕವೂ ಅವರ ಬಾಳಿನ ಸುತ್ತಲು ಕರ್ತವ್ಯದ ಕೋಟೆಯೆ ಇದ್ದಂತಿತ್ತು. ಗೋಖಲೆ ಹುಟ್ಟಿದುದು ೧೮೬೬ ರ ಮೇ ತಿಂಗಳ ೯ ನೆಯ ದಿನಾಂಕಕ್ಕೆ ರತ್ನಾಗಿರಿ ಜಿಲ್ಲೆಯ ಚಿಪಳೂಣ ತಾಲೂಕಿನ ಕಾತಲುಕ ಹಳ್ಳಿಯಲ್ಲಿ. ಹಳ್ಳಿಯ ವಾತಾವರಣದಲ್ಲಿ ಬೆಳೆದುದರಿಂದ ಕರ್ತವ್ಯ ಪಾಲಿಸುವ ರೈತನ ಚಿತ್ರ ಮನದ ಮೇಲೆ ಅಚ್ಚೊತ್ತಿತ್ತು.

ಗೋಖಲೆಯವರ ಮನೆತನ ಬಹು ದೊಡ್ಡ ಮರಾಠಾ ಇತಿಹಾಸದಲ್ಲಿ ಅವರಿಗೆ ಹಿರಿದಾದ ಸ್ಥಾನವಿದೆ. ಧೈರ್ಯ ಸ್ಥೈರ್ಯ, ಸಾಹಸಗಳಿಗೆ ಅವರು ಹೆಸರಾಗಿದ್ದರು. ಪ್ರತಿಭಾವಂತರೂ ಕುಶಲರೂ ಎಂದು ಹೆಸರು ಗಳಿಸಿದ್ದರು. ಇಂಥ ಪೂರ್ವಜರ ಇತಿಹಾಸ ಕತೆಗಳನು ಬಾಲ್ಯದಲ್ಲಿ ಕೇಳಿದ ಗೋಪಾಲನಿಗೆ ಕರ್ತವ್ಯಬುದ್ಧಿಯು ಉದಯವಾಗಿ ಬೆಳೆವುದು ಸಹಜವೆ ಇದೆ.

ಸ್ವತಃ ಗೋಪಾಲನ ತಂದೆಯು ಕರ್ತವ್ಯಕ್ಕಾಗಿ, ಪ್ರಾಮಾಣಿಕತನಕ್ಕಾಗಿ ಪ್ರಸಿದ್ಧಿ ಪಡೆದಿದ್ದರು. ಅವರು ಕೊಲ್ಹಾಪುರದ ಹತ್ತಿರದ ಕಾಗಲದಲ್ಲಿ ಕೆಲಸ ಮಾಡುತ್ತಿದ್ದರು. ಮನೆತನದ ಬಡತನದ ಮೂಲಕ ಹೆಚ್ಚು ಕಲಿಯಲು ಕೃಷ್ಣರಾಯರಿಗೆ ಸಾಧ್ಯವಾಗದಿದ್ದರೂ ಬುದ್ಧಿಮತ್ತೆಯ ಮೂಲಕ ಕಲಿತವರಿಗಿಂತ ಹೆಚ್ಚು ಕಾರ್ಯಕ್ಷಮರಾಗಿದ್ದರು. ತಮ್ಮ ಬಡತನದ ಮೂಲಕ ತಾವು ಹೆಚ್ಚು ಕಲಿಯಲು ಸಾಧ್ಯವಾಗಲಿಲ್ಲ ಎಂಬುದು ಅವರಲ್ಲಿ ಅಳುಕುತ್ತಿತ್ತು. ಆದಕ್ಕಾಗಿ ತಮ್ಮ ಜೀವನವನ್ನು ಹತ್ತಿಕ್ಕಿ ಮಕ್ಕಳ ಶಿಕ್ಷಣದ ಏರ್ಪಾಡು ಮಾಡಿದರು. ತಂದೆಯು ಹೀಗೆ ತಮ್ಮ ಶಿಕ್ಷಣಕ್ಕಾಗಿ ಕಷ್ಟಪಡುತ್ತಿದ್ದಾನೆಂಬುದು ಗೋಪಾಲನ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಮಾಡಿತು.

ಅದಕ್ಕೂ ಹೆಚ್ಚಾಗಿ ತಾಯಿಯ ಪ್ರಭಾವ ಗೋಪಾಲನ ಮೇಲೆ ಆಯಿತು. ತಾಯಿ ಓಕ ಮನೆತನದ ಭಾಸ್ಕರ ಪಂತನ ಮಗಳು. ಅಕ್ಷರ ಜ್ಞಾನ ಅವಳಿಗೆ ಇಲ್ಲದಿದ್ದರೂ ಸಾಂಸಾರಿಕ ಜಾಣತನ ಅವಳಲ್ಲಿ ಇತ್ತು. ಸಣ್ಣ ಸಂಬಳದಲ್ಲಿಯೆ ಸಂಸಾರ ಸಾಗಿಸಿ ಹಣ ಉಳಿಸಲು ಗಂಡನಿಗೆ ನೆರವಾಗುತ್ತಿದ್ದಳು. ಧಾರ್ಮಿಕ ವೃತ್ತಿಯವಳು. ಅವಳ ಧರ್ಮ ಮೂಲದಲ್ಲಿ ಕರ್ತವ್ಯಬುದ್ಧಿಯನ್ನೇ ತೋರುತ್ತಿತ್ತು.

ದೈವಯೋಗದಿಂದ ಕೃಷ್ಣರಾಯರು ಚಿಕ್ಕ ವಯಸ್ಸಿನಲ್ಲಿಯೆ ಕಾಲವಾದರು. ಅಣ್ಣ ಗೋವಿಂದ ತಮ್ಮ ಗೋಪಾಲ ಇಬ್ಬರೂ ಇನ್ನೂ ಕೊಲ್ಹಾಪುರದಲ್ಲಿ ಶಾಲೆಯಲ್ಲಿದ್ದರು. ತಂದೆ ತೀರಿದ ನಂತರ ಇಬ್ಬರ ಶಿಕ್ಷಣ ನಡೆವುದು ಹೇಗೆ? ಮನೆಯಿಂದ ಇದ್ದುಳ್ಳವರಲ್ಲ, ಪಿತ್ರಾರ್ಜಿತ ಆಸ್ತಿ ಎಂಬುದಿಲ್ಲ. ಏನು ಮಾಡಬೇಕು ಮುಂದೆ? ಎಂಬುದು ದೊಡ್ಡ ಪ್ರಶ್ನೆಯಾಯಿತು. ಮನೆತನದ ಈ ಹಿರಿ ಪ್ರಶ್ನೆಯನ್ನು ಬಿಡಿಸುವವರು ಯಾರು? ಮನೆತನದ ಭಾರ ಹೊರಬೇಕಾಗಿ ಬಂದ ಅಣ್ಣನೆ ಅಲ್ಲವೆ? ಅದುದು ಅವನೇ ವಹಿಸಿದ.

ಗೋವಿಂದನ ಶಿಕ್ಷಣ ಅಲ್ಲಿಗೆ ನಿಂತಿತು. ಆಗಿನ್ನೂ ಅವನಿಗೆ ೧೮ ವರುಷ. ಕಲಿಯಬೇಕೆಂಬ ಲವಲವಿಕೆ ಇತ್ತು. ಆದರೆ ಅನುಕೂಲತೆ ಇಲ್ಲ. ತಾನು ಕಲಿವ ಹಂಬಲ ತೊರೆದರೆ ತನ್ನ ಕಿರಿಯ ತಮ್ಮನಾದ ಗೋಪಾಲನ ಗತಿಯೇನು? ಅವನಿಗಾಗಿ ತನ್ನ ಶಿಕ್ಷಣದ ವಿಚಾರ ಬಿಡಬೇಕೆಂದು ನಿರ್ಧಾರ ಮಾಡಿದನು. ದೂರದ ಕಕ್ಕನ ಸಹಾಯದಿಂದ ಒಂದು ಸಣ್ಣ ಕೆಲಸ ದೊರಕಿತು. ತಿಂಗಳ ಸಂಬಳ ೧೫ ರೂಪಾಯಿ. ಈ ಹದಿನೈದು ರೂಪಾಯಿಯಲ್ಲಿ ಮನೆ ನಡೆಸಿ, ತಮ್ಮನ ಶಿಕ್ಷಣ ಮುಂದುವರೆಸಿದನು. ತನ್ನ ಪಾಡು ಗೋಪಾಲನಿಗೆ ಬರಬಾರದೆಂದು ಹವಣಿಸಿದನು—ಹೆಣಗಿದನು.

ಈ ಸನ್ನಿವೇಶವೂ ಗೋಪಾಲನ ಮುಂದಿನ ಜೀವನದ ಮೇಲೆ ಪರಿಣಾಮ ಮಾಡಿತು. ಕರ್ತವ್ಯಬುದ್ಧಿಯೊಡನೆ ಸ್ವಾರ್ಥತ್ಯಾಗದ ಪಾಠವನ್ನೂ ಅದು ಕಲಿಸಿತು. ಅಲ್ಲದೆ, ಬಾಳಿನಲ್ಲಿ ಶಿಕ್ಷಣದ ಮಹತ್ವವನ್ನು, ಕಲಿವವರಿಗೆ ಬರುವ ತೊಡಕುಗಳನ್ನು ತಿಳಿಸಿ ಕೊಟ್ಟವು. ಅದಕ್ಕಾಗಿ ಶಿಕ್ಷಣದ ಬಗ್ಗೆ ಅವನಿಗೆ ಯಾರಿಗೂ ಇಲ್ಲದಷ್ಟು ಅಭಿಮಾನ—ಆಸ್ಥೆ ಆಸಕ್ತಿ. ಬದುಕಲು ಅವಶ್ಯವಾಗುವಷ್ಟು ಮಾತ್ರ ಉಂಡುಟ್ಟು ಶಿಕ್ಷಣ ಮುಂದುವರೆಸಿದನು. ೧೮೮೧ ರಲ್ಲಿ ಮ್ಯಾಟ್ರಿಕ ಪರೀಕ್ಷೆ ಪಾಸಾದನು. ಕೆಲಕಾಲ ರಾಜಾರಾಮ ಕಾಲೇಜದಲ್ಲಿ, ಮುಂದೆ ಡೆಕ್ಕನ ಕಾಲೇಜ, ಎಲ್‌ಫಿನ್‌ಸ್ಟನ್ ಕಾಲೇಜ ಸೇರಿ, ಗಣಿತ ವಿಷಯವನ್ನು ಮುಖ್ಯವಾಗಿಟ್ಟುಕೊಂಡು ಎರಡನೆ ವರ್ಗದಲ್ಲಿ ಬಿ. ಎ. ಪಾಸಾದನು. ಆಗ ಅವನಿಗೆ ಇನ್ನೂ ೧೮ ವರುಷ.

ಎರಡು ಮಾರ್ಗ

ಜೀವನ ಒಂದು ಘಟ್ಟಕ್ಕೆ ಮುಟ್ಟಿತು. ಆದರೆ ಒಂದು ದೊಡ್ಡ ಪ್ರಶ್ನೆಯೂ ಬಂದಿತು. ಇನ್ನು ಮುಂದೆ ಕಲಿಯಬೇಕೊ? ಕೆಲಸ ಹಿಡಿದು ಮನೆತನ ಸಾಗಿಸಲು ನೆರವಾಗಬೇಕೊ? ಕಲಿವುದಾದರೆ ಯಾವ ಮಾರ್ಗ ಹಿಡಿಯಬೇಕು? ಕಾಯದೆ ಪಂಡಿತನಾಗಬೇಕೊ, ನ್ಯಾಯಶಾಸ್ತ್ರ ವಿಶಾರದನಾಗಬೇಕೊ, ಅಥವಾ ಆಯ್. ಸಿ. ಎಸ್. ಗಾಗಿ ಹೋಗಬೇಕೊ? ಮನೆತನದ ಸ್ಥಿತಿ ನೋಡಿದರೆ ಕಲಿಕೆ ಸಾಧ್ಯವಿಲ್ಲವಷ್ಟೆ ಅಲ್ಲ, ಅದರ ಗೊಡವೆ ಬಿಡಬೇಕೆಂದು ಅನ್ನಿಸುತ್ತಿತ್ತು. ಕೆಲಸ ಮಾಡುವುದಾದರೆ ಎಲ್ಲಿ ಕೆಲಸ ಮಾಡಬೇಕು? ದುಡ್ಡಿಗಾಗಿ ದುಡಿಯಬೇಕೊ ಸೇವೆಗಾಗಿ ದುಡಿಯಬೇಕೊ? ೧೮ ವರುಷದ ತರುಣನಿಗೆ ಕಾಡುತ್ತಿದ್ದ ಈ ಪ್ರಶ್ನೆಗಳನ್ನು ಬಿಡಿಸುವ... ಸಮರ್ಪಕವಾಗಿ ಬಿಡಿಸುವ ಪ್ರಸಂಗ ಬಂತು.

ಇದೆ ಸಮಯಕ್ಕೆ (೧೮೮೦) ಪುಣೆಯಲ್ಲಿ ಒಂದು ಹೊಸ ಶಿಕ್ಷಣ ಸಂಸ್ಥೆ ಉದಯಿಸಿತ್ತು. ಬಾಳ ಗಂಗಾಧರ ತಿಲಕ ಮತ್ತು ಆಗರಕರ ಇವರ ಪ್ರಯತ್ನದಿಂದ. ಅದೆ ನ್ಯೂ ಇಂಗ್ಲಿಶ್ ಸ್ಕೂಲು. ಅದು ನಮ್ಮ ನಾಡವರ ಶಿಕ್ಷಣಕ್ಕಾಗಿ ಹೆಣಗುತ್ತಿತ್ತಲ್ಲದೆ ಅಲ್ಲಿಯ ಶಿಕ್ಷಕರು ಸೇವಾಬುದ್ಧಿಯ ಸ್ವಾರ್ಥತ್ಯಾಗಿಗಳಾಗಿದ್ದರು. ಶಿಕ್ಷಣ ಸ್ವಾರ್ಥತ್ಯಾಗ, ಸೇವಾಬುದ್ಧಿ ಇವು ಗೋಪಾಲನ ಗಮನ ಸೆಳೆಯುತ್ತಿದ್ದವು. ತನ್ನ ಜೀವನದಲ್ಲಿ ತಾನು ಕಷ್ಟಬಟ್ಟು ಶಿಕ್ಷಣ ಗಳಿಸಿದ್ದುದು ಸಾರ್ಥಕವಾಗಬೇಕಾಗಿದ್ದರೆ ಶಿಕ್ಷಕನಾಗಬೇಕು ಎಂದು ಮನಿಸಿದ. ಇಂತಹ ಮನೋವೃತ್ತಿ ಒಂದೆಡೆ, ತಿಲಕ ಆಗರಕರರಂತಹ ಸಮಾಜ ಸೇವಕರ ಪ್ರಭಾವ ಮತ್ತೊಂದೆಡೆ—ಹೀಗಾಗಿ ಅವನು ಶಿಕ್ಷಕನಾಗಬೇಕೆಂದು ನಿರ್ಧರಿಸಿದಾಗ ಅಣ್ಣನಿಂದ ಒಂದು ಮಾತು ಬಂದಿತು. ಅಣ್ಣನಾದ ಗೋವಿಂದರಾಯನ ಮನಸ್ಸಿನಲ್ಲಿ ತಮ್ಮ ಗೋಪಾಲ ಮುಂದೆ ಬರಬೇಕು. ಕೇವಲ ಸ್ವಾರ್ಥತ್ಯಾಗ ಸೇವೆಯೆಂದುಕೊಂಡು ಮಹತ್ವಾಕಾಂಕ್ಷೆಯನ್ನು ಕೊಲ್ಲಬಾರದು ಎಂದು ಮತ ಕೊಟ್ಟನು. ಆದರೂ ಕೊನೆಗೆ ಅವನು ಸಮ್ಮತಿ ಕೊಟ್ಟನು. ಆಗ ಗೋಪಾಲನು ನ್ಯೂ ಇಂಗ್ಲೀಶ್ ಸ್ಕೂಲಿನಲ್ಲಿ ೩೫ ರೂಪಾಯಿ ವೇತನದ ಮೇಲೆ ಶಿಕ್ಷಕನಾದನು. ಸಂಬಳದ [illegible] ಭಾಗ ಮನೆಗೆ ಕಳಿಸತೊಡಗಿದನು.

ಗೋಪಾಲನ ಸ್ಮೃತಿಶಕ್ತಿ ಅಗಾಧವಾಗಿತ್ತು. ಅವನು ಶಿಕ್ಷಕನಾಗಿದ್ದಾಗ ಹುಡುಗರಿಗೆ ಕಲಿಸುವ ಪಾಠಗಳನ್ನು ಮನನ ಮಾಡಿಕೊಂಡು ಹೋಗುತ್ತಿದ್ದನು. ಮಿಲ್ಟನ್‌ನ 'ಪ್ಯಾರಾಡಾಯಿಜ ಲಾಸ್ಟ' ಅವನಿಗೆ ಕಂಠಪಾಠವಾಗಿತ್ತು. ಕಲಿಸುವ ಪುಸ್ತಕವನ್ನು ಕೈಯಲ್ಲಿ ಹಿಡಿಯದೆ ಕಲಿಸುತ್ತಿದ್ದುದು ಹುಡುಗರಿಗೆ ಆಶ್ಚರ್ಯವುಂಟುಮಾಡುತ್ತಿದ್ದಿತಲ್ಲದೆ, ಅವರ ಬಗ್ಗೆ ಆದರವನ್ನುಂಟುಮಾಡುತ್ತಿದ್ದಿತು. ಇದೂ ಅಲ್ಲದೆ ಸ್ವತಃ ಗೋಖಲೆಯವರಿಗೆ ಅವು ಭಾಷಣ ಕಲೆಯ ಸಿದ್ಧತೆಯ ಪ್ರಯೋಗ ಪಾಠಗಳಾಗತೊಡಗಿದವು. ಬರ್ಕ, ಬ್ರಾಯಿಟ, ಇವರ ಭಾಷಣಗಳನ್ನು ತಮ್ಮವನ್ನಾಗಿ ಮಾಡಿಕೊಂಡಿದ್ದರು. ಇದೆಲ್ಲ ಅಭ್ಯಾಸ ಹುಡುಗರಿಗಾಗಿ ಮಾಡುತ್ತಿದ್ದರೂ ಸ್ವಂತದ ಏಳಿಗೆಗೆ ಅನುಕೂಲವಾಗುತ್ತಿತ್ತು.

ಭಾಷಣಚಾತುರ್ಯ ಬೆಳೆದಂತೆಲ್ಲ ವಕೀಲನಾಗಬೇಕೆಂಬ ಲವಲವಿಕೆ ಬೆಳೆಯತೊಡಗಿತು. ಪುಣೆಯಲ್ಲಿದ್ದರೂ ಶಾಲೆಯಲ್ಲಿ ಶಿಕ್ಷಕರಾಗಿದ್ದರೂ ಮುಂಬೈ ಕಡೆಗೆ ಆಗಾಗ ಹೋಗಿಬಂದು ಕಾಯದೆಯ ಕಾಲೇಜಿನಲ್ಲಿ ವರ್ಗಗಳಿಗೆ ಹೋಗುತ್ತಿದ್ದರು.

ತ್ಯಾಗಪಥದ ಸ್ವೀಕಾರ

ಮುಂದೆ ಕೆಲ ದಿವಸಗಳಲ್ಲಿ ಗೋಖಲೆಯವರು ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯ ಆಜೀವ ಸದಸ್ಯರಾಗಲು ಒಪ್ಪಿಕೊಂಡರು. ಹಾಗೆ ಕೈಕೊಳ್ಳಲು ತಿಲಕ ಆಗರಕರರ ಪ್ರಭಾವವೆ ಹೆಚ್ಚಿನ ಕಾರಣವಾಗಿತ್ತು. ತಿಲಕ ಆಗರಕರ ಇವರು ಆ ಸೊಸಾಯಟಿಯ ಸ್ಥಾಪಕ ಸದಸ್ಯರಾಗಿದ್ದರು. ಈ ಹೊಸ ಸ್ಥಾನ ಸ್ವೀಕರಿಸಿದ ಕೂಡಲೆ ಒಬ್ಬ ಗೆಳೆಯ ಮೂದಲಿಸಿದಾಗ ಗೋಖಲೆ ಅಂದರು:

"ನೀವು ದುಡ್ಡಿನ ವಿಲಾಸದಲ್ಲಿ ಓಲಾಡಿರಿ, ನಾನು ಮಾತ್ರ ಕಾಲುವಹಗೆಯಿಂದ ಕಾಲ ಕಳೆಯುವೆ."

ಹೊಸ ಹೊಸ ಸ್ಥಾನ-ಅದರ ಭಾರ, ಇವುಗಳ ಮೂಲಕ ಹೊಸ ಕ್ಷೇತ್ರಗಳಲ್ಲಿ ಕಾಲಿಡಬೇಕಾಯಿತು. ಪತ್ರಿಕಾ ವ್ಯವಸಾಯದಲ್ಲಿ ಮನಸ್ಸು ಹಾಕತೊಡಗಿದರು. "ಸುಧಾರಕ" ಪತ್ರಿಕೆಯಲ್ಲಿ ಬರೆಯತೊಡಗಿದರು. ಈ ಅವಧಿಯಲ್ಲಿ ಗಣಿತದ ಪಠ್ಯ ಪುಸ್ತಕ ಬರೆದರು. ಅದು ಅನೇಕ ಗಣಿತಜ್ಞರ ಪ್ರಶಂಸೆ ಪಡೆದಿದ್ದಲ್ಲದೆ, ಅನೇಕ ಆವೃತ್ತಿಗಳನ್ನು ಕಂಡಿದೆ.

೧೮೮೪ ರಲ್ಲಿ ಡೆಕ್ಕನ ಎ. ಸೊಸಾಯಟಿಯವರು ಉಚ್ಚ ಶಿಕ್ಷಣಾಲಯ ಪ್ರಾರಂಭಿಸುವುದನ್ನು ನಿಶ್ಚಯಿಸಿದರು. ೧೮೮೫ ರಲ್ಲಿ ಫರ್ಗ್ಯುಸನ್ ಕಾಲೇಜು ಪ್ರಾರಂಭವಾಯಿತು. ಗೋಖಲೆಯವರು ಪ್ರಾಧ್ಯಾಪಕರಾಗಿ ಆರಿಸಲ್ಪಟ್ಟರು. ಆಗ ಅಲ್ಲಿ ಸದಿ (Southey) ಅವರು ಬರೆದ ನೆಲ್ಸನ್ (Nelson) ಕಲಿಸುವ ಪ್ರಸಂಗ ಬಂತು. ತನಗೆ ಗೊತ್ತಿಲ್ಲದ್ದನ್ನು ತಾನೇನು ಕಲಿಸಬಲ್ಲೆ? ಗೊತ್ತಿಲ್ಲವೆಂದು ಬಿಡುವಂತಿಲ್ಲ. ಆದಕ್ಕಾಗಿ ಮುಂಬಯಿಗೆ ಹೋಗಿ ಬಂದರದಲ್ಲಿ ಅಡ್ಡಾಡಿ ಹಡಗುಪಡೆಯ ಪಾರಿಭಾಷಿಕ ಶಬ್ದಗಳ ಬಗ್ಗೆ ಎಲ್ಲ ಮಾಹಿತಿ ಮಾಡಿಕೊಂಡು ಬಂದು ವರ್ಗದಲ್ಲಿ ಪಾಠ ಕೊಟ್ಟರಂತೆ. ವಿದ್ಯಾರ್ಥಿಗಳಿಗಾಗಿ ಎಷ್ಟು ತಯಾರಿ ಮಾಡಿದರೂ ಅವರಿಗೆ ಕಡಿಮೆ ಎನ್ನಿಸುತ್ತಿತ್ತು.

ಗಣಿತ ಕಲಿಸುತ್ತಿದ್ದರಲ್ಲದೆ, ಇಂಗ್ಲಿಷ, ಇತಿಹಾಸ, ಅರ್ಥಶಾಸ್ತ್ರ, ಇವುಗಳನ್ನು ಕಲಿಸುವ ಪ್ರಸಂಗವೂ ಬರುತ್ತಿತ್ತು. ಪ್ರಸಂಗ ಬಂದರೆ ಬೆದರುವವರಲ್ಲ. ಅದನ್ನು ಹಿಡಿದುಕೊಂಡು ಅದಕ್ಕೆ ಎದುರಾಗಿ ಅಭ್ಯಾಸ ಮಾಡಿ, ಅದ ಮಾಡಿಕೊಂಡು ಹುಡುಗರಿಗೆ ಹೇಳುತ್ತಿದ್ದರು. ಹೇಳಿದ ವಿಷಯವನ್ನು ಕಲಿಸುತ್ತಿದ್ದರಿಂದ ಅವರಿಗೆ (Professor-to-order) "ಹೇಳಿದ

ಮಾನೆಯ ಪುಟಕ್ಕೆ

ನಿದ್ರೆಯಲ್ಲಿ ನಡೆಯುವದು ಅಥವಾ ಸುಪ್ತಿಸಂಚಾರ ವ್ಯಾಧಿ

ನಿದ್ರೆಯಲ್ಲಿ ಹಾಸಿಗೆಯಿಂದೆದ್ದು ಎತ್ತೆತ್ತಲೋ ಅಲೆಯುವ "ಚಟ" ಎಷ್ಟೋ ಜನರಿಗೆ ಇರುವದುಂಟು. ಸಾಮಾನ್ಯವಾಗಿ ನಮ್ಮಲ್ಲಿ ಪ್ರತಿಯೊಬ್ಬನೂ ನಿದ್ರೆಯಲ್ಲಿ ನಡೆಯುವ ಇಲ್ಲವೆ ಸುಪ್ತಸಂಚಾರದ ವ್ಯಾಧಿಯುಳ್ಳ ಮಿತ್ರನನ್ನೋ ಬಂಧುವನ್ನೋ ಕಂಡಿರಬಹುದು. ಪ್ರಸ್ತುತ ಲೇಖಕನ ಸಂಬಂಧಿಯೊಬ್ಬನು ಒಮ್ಮೊಮ್ಮೆ ರಾತ್ರಿ ಎಷ್ಟು ಅರ್ಧ ನಿದ್ರಾವಸ್ಥೆಯಲ್ಲಿ ದೂರದೂರ— ಅರ್ಧ ಮೈಲಿನ ವರೆಗೂ— ನಡೆದುಹೋಗುತ್ತಿದ್ದನು. ಆದರೆ ಸಾಮಾನ್ಯವಾಗಿ ಹೀಗೆ ನಿದ್ರೆಯಲ್ಲಿ ಅಲೆದಾಡುವವರು ತಾವು ಮಲಗಿದಲ್ಲಿಗೇ ಮರಳುತ್ತಿರುತ್ತಾರೆ. ಒಂದು ಸಲ ನನ್ನ ಈ ಸಂಬಂಧಿಕನು ಹೊಲದಲ್ಲಿ ಬಹಳ ದೂರ ಹೋದ ಮೇಲೆ ಒಂದು ಗಿಡ ಕಲ್ಲನ್ನು ಎಡವಿ ಎಚ್ಚತ್ತು, ತಾನಿರುವ ಸ್ಥಳವನ್ನು ಅವಸ್ಥೆಯನ್ನು— ಕೌಪೀನ ಮಾತ್ರ!— ಕಂಡು ಅತ್ಯಂತ ಆಶ್ಚರ್ಯಪಟ್ಟನು. ಈ ನಕ್ತಂಚಾರಿ ಅವಸ್ಥೆಯಲ್ಲಿರುವಾಗ ರೋಗಿಯು ಕಣ್ಣು ಪೂರ್ಣ ಅಥವಾ ಅರ್ಧ ಮುಚ್ಚಿರುವದು ರೂಢಿ. ಮತ್ತು ಸಾಧಾರಣವಾಗಿ ಅವನು ಪರಿಚಿತ ಸ್ಥಳಗಳಲ್ಲೇ ಸಂಚಾರ ಮಾಡುತ್ತಿರುತ್ತಾನೆ.

ಸ್ವಪ್ನಾವಸ್ಥೆಗೂ ಈ ನಿದ್ರಾಸಂಚಾರಿ ಅವಸ್ಥೆಗೂ ಬಹಳ ಭೇದವಿಲ್ಲ. ಅಸ್ಫುಟವಾದ ಸ್ವಪ್ನದಂತೆ ರೋಗಿಗೆ ತನ್ನ ನಿದ್ರಾಚೇಷ್ಟಿತಗಳ ನೆನಪಿಲ್ಲದಿರುವದೂ ಉಂಟು; ಇದ್ದರೂ ಅಸ್ಪಷ್ಟ. ನಿಜವಾಗಿ, ಇದು ಸಾಧನೆಯ ಸ್ವಪ್ನವೆನ್ನಬಹುದು.

ಆದರೆ ದುಃಸ್ವಪ್ನಗಳಿಗೂ ಸುಪ್ತಿಸಂಚಾರಕ್ಕೂ ಬಹಳ ಅಂತರವಿದೆ. ಭಯಾನಕ ಸ್ವಪ್ನಗಳ ಸಂಗಡ ಬರುವ ಭಂಗಿವಿಕಾರ ಮುಖವಿಕಾರಗಳನ್ನು ಇಲ್ಲಿ ನಾವು ಕಾಣುವದಿಲ್ಲ. ಕಿರಿಚಾಟ, ಮಾತಾಟಗಳೂ ಇಲ್ಲ. ಗ್ರಸ್ತನು ಸಮಾಧಾನಚಿತ್ತದಿಂದ, ಎಚ್ಚರಿರುವಾಗ ಹೇಗೆ ನಡೆದುಕೊಳ್ಳುತ್ತಾನೋ ಹಾಗೆಯೆ ವ್ಯವಹರಿಸುವದರಿಂದ ಈ ವ್ಯಾಪಾರವನ್ನು ಕಂಡು ಜನಸಾಮಾನ್ಯರು ಅಚ್ಚರಿಪಡುತ್ತಾರೆ. ಮಂತ್ರಮುಗ್ಧನು ನಡೆದುಕೊಳ್ಳುವಂತೆ ಸ್ವಪ್ನಸಂಚಾರಿಯ ರೀತಿ.

ಅಸಾಧ್ಯ ಸಾಹಸಗಳಿಲ್ಲ

ನಿದ್ರಾಸಂಚಾರಿ ಅಸಾಧ್ಯ ಕೃತ್ಯಗಳನ್ನು ಮಾಡುವನೆಂದು ಪ್ರತೀತಿಯುಂಟು. ಆದರೆ ಅವನ ಕೃತಿಗಳಲ್ಲಿ ಚಮತ್ಕಾರವೇನೂ ಇರುವದಿಲ್ಲ. ಎಚ್ಚರವಾಗಿರುವಾಗ ಯಾವುದು ಅಸಾಧ್ಯವೋ ಅದನ್ನು ನಿದ್ರೆಯಲ್ಲಿ ಅವನು ಮಾಡಲಾರ. ಆದರೆ ಕಡಿದಾದ ಗುಡ್ಡ ಹತ್ತುವದು, ಇಕ್ಕಟ್ಟಾದ ಸಂದಿಗಳಲ್ಲಿ ಪಾರಾಗುವದು, ತೀರ ತೆಳ್ಳನ್ನ ಗೋಡೆಗಳ ಮೇಲೆ ನಿರ್ಭಯವಾಗಿ ನಡೆದು ಹೋಗುವದೇ ಮೊದಲಾದ ಅದ್ಭುತ ಸಾಹಸಗಳನ್ನು ನಿದ್ರಾಸಂಚಾರಿಗಳು ಮಾಡುವದುಂಟು. ಆದರೆ ಎಚ್ಚತ್ತಾಗ ಅವರಲ್ಲಿರಬಹುದಾದ ಭಯಶಂಕಾದಿಗಳು ಆಗ ಜಾಗೃತವಾಗಿರುವದಿಲ್ಲವಾದ ಕಾರಣವೇ ಅವರು ನಿದ್ರಾಚೇಷ್ಟೆಯಲ್ಲಿ ಇದನ್ನು ಮಾಡಲು ಸಮರ್ಥರಾಗುವರು. ಇಂಥ ಸಾಹಸಗಳಲ್ಲಿ ಅವರು ಅಪಾಯಕ್ಕೊಳಗಾದ ಉದಾಹರಣೆಗಳೂ ಇಲ್ಲದಿಲ್ಲ.

ಈ ಸ್ವಪ್ನಸಂಚಾರದಲ್ಲಿ ಭೂತಗಳ ಚೇಷ್ಟೆಯುಂಟೆಂದು ಕೆಲವರ ಹೇಳಿಕೆ. ಆದರೆ ಅದಕ್ಕೆ ಆಧಾರಗಳು ದೊರೆಯುವದಿಲ್ಲ. ಭೂತಗಳೆಂಬವು ಇದ್ದರೆ ಕೂಡ ಅವಕ್ಕೂ ಈ ರೋಗಕ್ಕೂ ಏನೂ ಸಂಬಂಧವಿಲ್ಲೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಕೆಲವು ವಿಶಿಷ್ಟ ಸ್ಥಳಗಳಲ್ಲಿ ಮಲಗಿದರೆ ಮಲಗಿದ ಮನುಷ್ಯನು ಅಲ್ಲಿಂದೆದ್ದು ದೂರ — ಹೆಚ್ಚಾಗಿ ಬಯಲಲ್ಲಿ— ಹೋಗಿ ಬಿದ್ದಿರುವನೆಂಬ ಕತೆಗಳು ಆಗಾಗ್ಗೆ ವರದಿಯಾಗುತ್ತವೆ. ದಕ್ಷಿಣ ಕನ್ನಡದ ಗುರುಪುರವೆಂಬ ಸ್ಥಳದಲ್ಲಿ ಒಂದು ವಿಶಿಷ್ಟ ಬಂಗಲೆಯಲ್ಲಿ ಮಲಗಿದ್ದವರು ಶಿಕ್ಷಾಮುಖವೆಂಬ ಬಂಡೆಗಲ್ಲಿನ ಮೇಲೆ ಮರುದಿನ ಮುಂಜಾನೆ ಏಳುವರೆಂದು ಒಂದು ಕರ್ಣಾಕರ್ಣಿಕೆಯುಂಟು? ಇದಕ್ಕೆ ಆಯಾ ಸ್ಥಳದಲ್ಲಿರುವ ಭೂತದ ಚೇಷ್ಟೆಯೇ ಕಾರಣವೆಂದು ಹೇಳುತ್ತಾರೆ. ಅದು ನಿಜವಾಗಿದ್ದರೂ ಸುಪ್ತಿಸಂಚಾರದ ಕಕ್ಷೆಯೊಳಗೆ ಬರಲಾರದು. ಅದು ಇಚ್ಛಾಶಕ್ತಿಯ ಪ್ರೇರಣೆಯಿಂದ ಯಾತ್ರಿಕನು ಪಾತ್ರಗಳನ್ನು (ಮೀಡಿಯಂ) ಮೂರ್ಛಾವಸ್ಥೆಯಲ್ಲಿ ನಡೆಸುವ ಚಮತ್ಕಾರದ ವರ್ಗಕ್ಕೆ ಸೇರಬಹುದೇನೊ.

ಈಡೇರದ ಆಶೆಗಳು

ಸುಪ್ತಿ ಸಂಚಾರ ಒಂದು ಮನೋವ್ಯಾಧಿ. ಅದು ಚಿಕ್ಕ ದೊಡ್ಡವರು ಹೆಂಗಸರು ಗಂಡಸರು ಇವರೆಲ್ಲರಿಗೆ ಅಂಟಬಲ್ಲದು. ಮನಶ್ಶಾಸ್ತ್ರಜ್ಞರು ಅದನ್ನು ಹೀಗೆ ಸ್ಪಷ್ಟೀಕರಿಸುತ್ತಾರೆ: ಜಾಗೃತಾವಸ್ಥೆಯಲ್ಲಿ ಹತ್ತಿಕ್ಕಲ್ಪಟ್ಟ ಯಾವುದಾದರೊಂದು ಅಭಿಲಾಷೆಯ ಪ್ರೇರಣೆ ಸುಷುಪ್ತಿಯಲ್ಲಿ ಮೇಲ್ಮೈಯಾಗಿ ಅಭೀಷ್ಟವನ್ನು ಬೆನ್ನಟ್ಟಲು ಗ್ರಸ್ತನನ್ನು ಮುಂನೂಡಬಹುದು. ಯಾವುದಾದರೊಂದು ಕೊರಗು, ಕೊರತೆ, ಕೀಳ್ಮೆ ಅಥವಾ ಅಸುರಕ್ಷಿತತೆ ನಿದ್ರಾಕಾಲದಲ್ಲಿ ಅಭಿವ್ಯಕ್ತವಾಗಲು ಹೆಣಗಬಹುದು. ಅಥವಾ ಅದು ದೇಹದಲ್ಲಿ ಯಾವುದಾದರೊಂದು ಧಾತುವಿನ ಕೊರತೆಯಿಂದಲೂ ಉಂಟಾಗಬಹುದು. ಮಾನಸಿಕ ಚಿಕಿತ್ಸೆಯೊಡನೆ ಗ್ಲುಕೋಸ್ ಸತ್ವದ ಪಥ್ಯದಿಂದ ಫಲ ದೊರೆತ ನಿದರ್ಶನಗಳಿವೆ.

ಕೊರತೆ, ಅಸುರಕ್ಷಿತತೆಗಳಿಂದ ನಿದ್ರಾಸಂಚಾರದ "ಚಟ"ಕ್ಕೆ ಬಿದ್ದ ಹುಡುಗನೊಬ್ಬನ ಉದಾಹರಣೆಯನ್ನು ಡಾ। ಜಿ. ಡಿ. ಬೋರ್ಝುರು ಉಲ್ಲೇಖಿಸುತ್ತಾರೆ. ೧೩ ವಯಸ್ಸಿನ ಹುಡುಗನೊಬ್ಬ ಕಳೆದ ಮೂರು ವರ್ಷಗಳಿಂದ ನಿದ್ರಾಸಂಚಾರಿಯಾಗಿದ್ದ. ಮನೆಯೆಲ್ಲ ಸುತ್ತಿ ಮಾಳಿಗೆಯನ್ನೇರಿ ತಿರುಗಿಬಂದು ಅವನು ತನ್ನ ಹೆತ್ತವರ ಹಾಸಿಗೆಯಲ್ಲಿ ಮಲಗಿಬಿಡುತ್ತಿದ್ದ. ವಿಚಾರಿಸಿದಾಗ ಅವನು ಹತ್ತು ವಯಸ್ಸಿನ ತನಕ ತಂದೆ ತಾಯಿಗಳ ಮೋಹದ ಕನಿಷ್ಠ ಪುತ್ರನಾಗಿ ಅವರೊಡನೆ ಮಲಗುತ್ತಿದ್ದನೆಂದೂ ಮುಂದೆ ಇನ್ನೊಂದು ಮಗು ಹುಟ್ಟಿದ ನಂತರ ಆ ಸ್ಥಾನದಿಂದ ಚ್ಯುತನಾಗಿ ಬೇರೆಯೆ ಮಲಗಬೇಕಾಗಿ ಬಂದುದರಿಂದ ಅವನ ಮನಸಿನಲ್ಲೊಂದು ಕೊರತೆ ಬಿತ್ತಿತ್ತೆಂದೂ ಅರ್ಥವಾಯಿತು. ಅದರಿಂದಲೇ ಅವನು ಸುಷುಪ್ತಾವಸ್ಥೆಯಲ್ಲಿ ತನ್ನ ಗುರಿಯಾದ ತಾಯ್ತಂದೆಗಳ ಹಾಸಿಗೆಯನ್ನು ಸೇರುತ್ತಿದ್ದನು. ವಿಷಯಗಳನ್ನು ಅವನಿಗೆ ವಿವರಿಸಿದ ನಂತರ ಅವನ ಈ ಅಭ್ಯಾಸ ಮಾಯವಾಗಿ ಸ್ವಸ್ಥನಾದನು.

ಹಿಂಸೆಯಿಲ್ಲ!

ಇನ್ನೊಂದು ವಿಚಿತ್ರ ಉದಾಹರಣೆ ಕೆಲ ವರ್ಷಗಳ ಹಿಂದೆ ಪಾಶ್ಚಾತ್ಯ ಪತ್ರಿಕೆಗಳಲ್ಲಿ ವರದಿಯಾಗಿತ್ತು. ನಿದ್ರಾಸಂಚಾರದ ಅಭ್ಯಾಸವುಳ್ಳ ಒಬ್ಬಾತನ ಮೇಲೆ ಪಿತೃವ್ಯಹತ್ಯೆಯ ಆರೋಪ ಬಂದಿತ್ತು. ಅವನು ನಿದ್ರೆಯಲ್ಲಿದ್ದಾಗ ತನಗರಿಯದೆ ಎದ್ದು ಬಂದು ಚಿಕ್ಕಪ್ಪನನ್ನು ಕೊಂದಿದ್ದನೆಂದು ಹೇಳಲಾಗಿತ್ತು. ಆರೋಪಿಗೂ ತನ್ನ ರಾತ್ರಿಪರ್ಯಟನ ರೋಗ ಗೊತ್ತಿದ್ದುದರಿಂದ ಇರಬಹುದೆಂದು ಅದನ್ನು ನಂಬಿದ್ದ. ಆದರೆ ಕುತೂಹಲಿ ಪೋಲೀಸನೊಬ್ಬನು ಈ ಮಾತನ್ನು ನಂಬದೆ ಮನಶ್ಶಾಸ್ತ್ರಜ್ಞರ ಅಭಿಪ್ರಾಯವನ್ನು ಕೇಳಿದ. ಆಗ ಅವರು ನಿದ್ರಾಸಂಚಾರಿಗಳು ಆ ಅವಸ್ಥೆಯಲ್ಲಿ ಸರ್ವಥಾ ಇನ್ನೊಬ್ಬರನ್ನು ಹಿಂಸಿಸುವದಿಲ್ಲೆಂದು ಅಭಿಪ್ರಾಯಕೊಟ್ಟರು. ಮೃತನ ಆಸ್ತಿ ಬಹಳವಾಗಿದ್ದು ಅದರ ಉತ್ತರಾಧಿಕಾರಿಗಳಾಗಲಿದ್ದ ಅವನ ಮಕ್ಕಳೇ ಅವನನ್ನು ಕೊಲೆಮಾಡಿ ಚೂರಿಯನ್ನು ಆರೋಪಿಯ ಹಾಸಿಗೆಯಲ್ಲಿರಿಸಿದ್ದು ಈ ಮೂಲಕ ಆರೋಪಿಯ ಮೇಲೆ ಅಪರಾಧ ಹೊರಿಸುವದು ಕಾರಣವಾಗಿ [illegible]

ನಿದ್ರಾಸಂಚಾರಿ ಅವಸ್ಥೆಯಲ್ಲಿ ಉಗ್ರ ರಾಗದ್ವೇಷಗಳು ಜಾಗೃತವಾಗುವದಿಲ್ಲವಾದುದರಿಂದ ಆ ಕಾಲವಲ್ಲಿ ದುಷ್ಕೃತ್ಯಕ್ಕೆ ಅವಕಾಶವಿಲ್ಲವಂತೆ.

—ಪಾ.

ಕೃಷಿ ವಿಜ್ಞಾನದ ಪ್ರಗತಿ: ಜಗತ್ತಿನ ಜನಸಂಖ್ಯೆ ಬೆಳೆದಂತೆ ಆಹಾರದ ಕೊರತೆ ನೀಗಿಸಲು ಇದ್ದ ಸ್ಥಳದಲ್ಲೇ ಹೆಚ್ಚು ಬೆಳೆಸುವ ಅವಶ್ಯಕತೆ ಬಿದ್ದಿದೆ. ಬೀಜದ ಸುಧಾರಣೆಯ ಉಪಾಯದಿಂದ ಬೆಳೆ ಹೆಚ್ಚಿಸಲು ಬ್ರಿಟಿಶ ಕೃಷಿ ವಿಜ್ಞಾನಿಗಳು ಸಮರ್ಥರಾಗಿದ್ದಾರೆ. ಎಳೆ ಗಿಡಗಳನ್ನೂ ಸುಧಾರಿಸಲಾಗುತಿದೆ. ಚಿತ್ರದಲ್ಲಿ ಒಂದು ಬೆಳವಣಿಗೆ ಕುಂಠಿತವಾದ ಅವರೆ ಗಿಡಕ್ಕೆ ಕೋಲ್ಚಿಸೈನ ಎಂಬ ಹೊಸ ಔಷಧವನ್ನು ಇಂಜೆಕ್ಷನ್ ಕೊಡಲಾಗುತಿದೆ. ಇದರಿಂದ ಕೃಷಿ ಪದ್ಧತಿಯಲ್ಲೇ ಕ್ರಾಂತಿಯುಂಟಾಗುವ ಸಂಭವವುಂಟು.

ಮಳೆ ಮತ್ತು ಕಾಯದೆ

ಮಳೆರಾಯನ ಅವಕೃಪೆ ಮತ್ತು ಅತಿಕೃಪೆಯ ಸುಖದುಃಖ ಭಾರತ ದೇಶಕಿದ್ದಷ್ಟು ಬೇರಾವದಕ್ಕೂ ಇರಲಿಕ್ಕಿಲ್ಲ. ಮಳೆ ಬರಿಸುವ ಕೃತಕೋಪಾಯಗಳನ್ನು ಕುರಿತು ಪಾಶ್ಚಾತ್ಯ ದೇಶಗಳಲ್ಲಿ ಹಲವಾರು ಪ್ರಯೋಗಗಳಾಗುತಿರುವವೆಂದು ಸುವಾರ್ತೆಗಳು ಬರುತಿವೆ. ಆದರೆ ನಾವು ಇಲ್ಲಿ ಪ್ರಸ್ತಾವಿಸುತಿರುವದು ಈ ಕೃತಕ ಮಳೆಯ ಬಗ್ಗೆ ಕಾಯದೆಯ ಪ್ರಯೋಗವಲ್ಲ; ದೈವಕೃಪಾಪೋಷಿತ ಮಳೆಯ ಬಗ್ಗೆ. ಆಸ್ಟ್ರೇಲಿಯದಲ್ಲಿ ಒಂದು ಕಡೆ ಮಳೆ ತೀರ ಕಡಿಮೆಯಾಗಿ ಪೈರು ಒಣಗಿ ಹೋಗತೊಡಗಿತ್ತು. ಸ್ವಲ್ಪ ದೂರದಲ್ಲಿ ಇನ್ನೊಂದು ಕಡೆ ಅತಿವೃಷ್ಟಿಯಾಗಿ ಪೈರು ಕಳಿದು ಹೋಗಲಾರಂಭಿಸಿತ್ತು. ಅನಾವೃಷ್ಟಿ ಪ್ರದೇಶದ ಜನರು ಸೇರಿ ಇಗರ್ಜಿಗಳಲ್ಲಿ ಮಳೆಗಾಗಿ "ಆಕಾಶದಲ್ಲಿರುವ ತಂದೆ"ಯನ್ನು ಪ್ರಾರ್ಥಿಸಬೇಕೆಂದು ಸಂಕಲ್ಪಿಸಿದರು. ಈ ಸುದ್ದಿ ಅತಿವೃಷ್ಟಿಪ್ರದೇಶದ ಜನರ ಕಿವಿಗೆ ಬಿದ್ದೊಡನೆ ಅವರು ವಕೀಲರಲ್ಲಿಗೆ ಧಾವಿಸಿದರು. ಮರುದಿನ ಬಂತು ತಂತಿ: "ನೀವು ಪ್ರಾರ್ಥನೆ ಮಾಡಿದ ಫಲವಾಗಿ ಮಳೆ ಬಂದು ನಮ್ಮ ಪೈರಿಗೂ ಮನೆಮಾರಿಗೂ ಆಗಬಹುದಾದ ಹಾನಿಗೆ ನೀವೇ ಜವಾಬ್ದಾರರಾಗುವಿರಿ. ನಿಮ್ಮ ಮೇಲೆ 'ಕಾಯದೆಶೀರ' ಕ್ರಮ ಕೈಕೊಳ್ಳಲಾಗುವದು. ತಿಳಿಯಿರಿ!"

ಭಾರತದಲ್ಲಿರುವ ೬೫೦ ಲಕ್ಷ ಎಕರೆ ಪಡ ಭೂಮಿಯಲ್ಲಿ ೧೯೪೮ ರಲ್ಲಿ ಬರಿ ೪,೬೬,೬೦೧ ಎಕರೆ ಮಾತ್ರ ಸಾಗುವಾಡಲಾಗಿದೆಯೆಂದೂ ಉಳಿದುದನ್ನು ಕ್ರಮಕ್ರಮೇಣ ಸಾಗುವಳಿ ಮಾಡಬೇಕಲ್ಲದೆ ಒಮ್ಮೆಲೆ ಮಾಡಲು ಸಾಧ್ಯವಿಲ್ಲೆಂದೂ ಆಹಾರ ಮಂತ್ರಿಗಳು ಹಿರಿಯೋಲಗದಲ್ಲಿ ಹೇಳಿದರು.

ಒಂದು ಅಣು ಬಾಂಬಿಗೆ ೨೦೦೦೦ ಪ್ರಾಣಾಹುತಿ

ಅಣುಬಾಂಬಿನ ಪ್ರಕಿರಣ (Radiation) ಶಕ್ತಿಯ ಭಯ ಅನೇಕರನ್ನು ಅಕಾರಣವಾಗಿ ಎದೆಗೆಡಿಸುತಿದೆಯೆಂದು ಅಮೇರಿಕೆಯ ಕರ್ನಲ್ ಕೂನಿಯೆಂಬ ಅಣುಬಾಂಬ್ ತಜ್ಞರು ಕೆಲದಿನಗಳ ಹಿಂದೆ ಹೇಳಿದ್ದರು. ಬಾಂಬು ಬಿದ್ದೊಡನೆ ನೂರಕ್ಕೆ ೮೫ ಜನರಿಗೆ ಸಾವು ಬಂದರೆ ಅನಂತರದ ಪ್ರಕಿರಣದಿಂದ ಕೇವಲ ನೂರಕ್ಕೆ ೧೫ ಜನರಿಗೆ ಮಾತ್ರ ಮರಣವೊದಗುತ್ತದೆಂದು ಅವರು ಅಭಿಪ್ರಾಯಪಟ್ಟಿದ್ದರು. ಆದರೆ ಅದರ ಮರುದಿನವೇ ವಾಶಿಂಗ್‌ಟನ್ನಿನ ರಾಷ್ಟ್ರೀಯ ಸಾಮರಿಕ ಸಂಸ್ಥೆಯವರು ಒಂದು ಹೇಳಿಕೆ ಹೊರಡಿಸಿ ಶತ್ರುಗಳು ಒಗೆದ ಪ್ರತಿಯೊಂದು ಅಣು ಬಾಂಬಿಗೂ ೨೦೦೦೦ ಜನ ತಕ್ಷಣ ಆಹುತಿಯಾಗುವರು, ಮತ್ತೆ ೨೦೦೦೦ ಜನ ಸ್ವಲ್ಪ ಕಾಲದಲ್ಲೆ ಸಾಯುವರು ಹಾಗು ೬೦೦೦೦ ಜನರಿಗೆ ಭಯಂಕರ ಗಾಯವಾಗುವದು ಎಂದು ಸಾರಿದ್ದಾರೆ. ತಜ್ಞರೇ ಹೀಗೆ ವಿಸಂಗತವಾಗಿ ಮಾತಾಡಿದರೆ ಪಾಮರರು ಗೊಂದಲದಲ್ಲಿ ಬೀಳದಿರುವರೆ?

೧೯೪೮ ಜೂನದಿಂದ ಡಿಸೆಂಬರ ವರೆಗೆ ಭಾರತದಲ್ಲಿ ೨೦ ರೇಲ್ವೆ ಅಪಘಾತಗಳಾಗಿ ೬೭ ಜನ ಸತ್ತು ೨೫೪ ಜನರು ಗಾಯಗೊಂಡು, ರೇಲ್ವೇ ಯಂತ್ರಾದಿಗಳಿಗೆ ಧಕ್ಕೆಯಾಗಿ ೬,೬೮,೦೨೦ ರೂ ಹಾನಿಯಾಗಿದೆಯೆಂದು ರೇಲ್ವೆ ಮಂತ್ರಿಗಳು ಹಿರಿಯೋಲಗದಲ್ಲಿ ಹೇಳಿದರು. ರೇಲ್ವೆ ಸಾರಿಗೆ ಇನ್ನೂ ಹೆಚ್ಚು ಸುಧಾರಿಸುವಂತೆ ಎಲ್ಲ ರೇಲ್ವೆಗಳ ಪುನರ್ಘಟನೆಮಾಡುವ ವಿಚಾರ ಸರಕಾರಕ್ಕಿದೆ. ಲೋಹಮಯವಾದ ೮೦೦ ಮೂರನೆ ವರ್ಗದ ಡಬ್ಬಿಗಳು ಪ್ರತಿಯೊಂದರ ೯೯ ಸಾವಿರ ರೂಪಾಯಿ ವೆಚ್ಚದಲ್ಲಿ ೧೯೫೦ ರಲ್ಲಿ ಸಿದ್ಧವಾಗುವವು. ಅವನ್ನು ಬೆಂಗಳೂರಿನ ವಿಮಾನ ಕಂಪನಿಯಲ್ಲಿ ಸಿದ್ಧಗೊಳಿಸಲಾಗುತಿದೆ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೯

ಹಣದ ಮುಗ್ಗಟ್ಟು ಇನ್ನೂ ಕಡಿಮೆಯಾಗಿಲ್ಲ ಶೇರು ಬೆಲೆಗಳು ಬಹಳ ತಗ್ಗಿವೆ. ಇಂದಿನ ಬೆಲೆಗಳು ಇಂತಿದ್ದವು.

ಮುಂಬಯಿ ಡಾಯಿಂಗ್	೯೩೬-೪-೦
ಕೋಹಿನೂರು	೨೬೯-೮-೦
ಫಿನ್ಲೆ	೨೬೫-೦-೦
ಸ್ವದೇಶಿ	೨೬೯ ೦ ೦
ಗೋಕಾಕ	೨೬೯-೮-೦
ಸೆಂಚುರಿ	೨೨೮-೧೨-೦
ಸೆಂಟ್ರಲ ಇಂಡಿಯಾ	೨೩೧-೦-೦
ಟಾಟಾ ಸ್ಟೀಲ ಡೆಫರ್ಡ	೧೫೬೫-೦-೦
ಇಂಡಿಯನ್ ಆಯರ್ನ	೨೧-೧-೦
ಅಸೊ. ಸಿಮೆಂಟ್ಸ	೨೨೧-೦-೦
ಬೇಲಾಪುರ ಸಕ್ಕರೆ	೨೨೫-೦-೦
ಸಿಂಧ್ಯ ಸ್ಟೀಮ	೧೯-೩-೦
ಸೆಂಟ್ರಲ ಬ್ಯಾಂಕ್	೮೮-೦-೦
ಇಂಪೀರಿಯಲ್ ಬ್ಯಾಂಕ್	೧೮೬೫ ೦ ೦
ಬ್ಯಾಂಕ ಆಫ್ ಇಂಡಿಯಾ	೧೯೬-೦-೦

ಚಿನ್ನ ಬೆಳ್ಳಿ

ಬೆಲೆಗಳಲ್ಲಿ ವಿಶೇಷ ಅಂತರವಿಲ್ಲ.

ಚಿನ್ನ	೧೧೭-೪-೦
ಬೆಳ್ಳಿ	೧೮೬-೦-೦

ಅರಳೆ

ಮೇ	೬೨೦-೦-೦
ಜುಲೈ	೬೨೦-೦-೦
ಸೆಪ್ಟೆಂಬರ	೬೨೦-೦-೦

ಎಣ್ಣೆಕಾಳು

ಶೇಂಗಾ (ತಯಾರಿ)	೧೭೩-೧೨ ೦
ಅಗಸಿ ,,	೨೬-೮-೦
ಅಗಸಿ (ದಿಸೆಂ-ಜನೆ)	೨೬ ೮-೦
ಅಗಸಿ ಎಣ್ಣೆ	೧೬-೮-೦
ಔಡ್ಲ	೨೯-೦-೦

ಹುಬ್ಬಳ್ಳಿ

ತಾ. ೧೦

ಜ. ಹತ್ತಿ ನಗಕ್ಕೆ		೫೦೦-೫೧೫
ಮುಂ. ಹತ್ತಿ		೪೭೫-೪೮೫
ಜ. ಅರಳೆ ,,		೨೯೦-೩೧೦
ಜ. ಹತ್ತಿಕಾಳು	ರೂ.ಗೆ	೫ ಪೌಂಡು
ವಿ. ಹತ್ತಿಕಾಳು	,,	೫¾ ಪೌಂಡು
ಕುಸುಬಿ (ಬ. ಮಣಕ್ಕೆ)		೧೫-೧೨-೦
ಅಗಸಿ (ಚೀಲಕ್ಕೆ)		೩೯-೪೦
ಔಡಲ	,,	೩೯ ೪೦½
ಜ. ಹೆಸರು	,,	೪೯-೫೧
ಕರಿ ಎಳ್ಳು	,,	೬೦-೬೪
ಬಿಳಿ ಎಳ್ಳು	,,	೮೫
ಕಡಲೆ	,,	೫೫-೫೬½
ಜ. ತೊಗರಿ	,,	೩೦ ೩೨
ಹುರಳಿ	,,	೩೫-೩೭
ಕೆಂ. ಅಲಸಂದಿ	,,	೫೬-೫೮
ಬಿ. ಅಲಸಂದಿ	,,	೫೮ ೬೦
ಶೇಂಗಾ (ಹೇರು)		೪೪-೪೬

ಲಂಡನ್ ಪತ್ರ

(ಸ್ವಂತ ಪ್ರತಿನಿಧಿಯಿಂದ)

ಪಾಶ್ಚಾತ್ಯ ಒಕ್ಕೂಟದ ಗುಪ್ತಸಭೆ—

ಅಮೇರಿಕದ ಹೊಸ ಸಾಮ್ರಾಜ್ಯ ನೀತಿ— ಕೂಲಿಕಾರ ಸರಕಾರದ ಜನಪ್ರಿಯ ಕಾರ್ಯ— ಗಾಂಧೀ ಪುಣ್ಯ ದಿನಾಚರಣೆ— ರಾಜಕುಮಾರನ ಬಗ್ಗೆ ಗರತಿಯರ ಚಿಂತೆ

೨ ಫೆಬ್ರುವರಿ

ಈ ವಾರ ಪಾಶ್ಚಾತ್ಯ ಒಕ್ಕೂಟದ ಗುಪ್ತ ಸಭೆ ೨ ದಿನಗಳ ವರೆಗೆ ನಡೆಯಿತು. ಬೆಲ್ಜಿಯಂ, ಫ್ರಾನ್ಸ್, ನೆದರ್‌ಲೆಂಡ್ಸ ಮತ್ತು ಲಕ್ಸೆಂಬರ್ಗ ಗಳ ವಿದೇಶ ಮಂತ್ರಿಗಳು ಆಗಮಿಸಿದ್ದರು. ಈ ಸಭೆಯಲ್ಲಿ ಬ್ರಿಟಿಶ್ ವಿದೇಶಮಂತ್ರಿ ಬೆವಿನ್ನರು ಪ್ರಧಾನ ಪಾತ್ರವಹಿಸಿದರು. ಐರೋಪ್ಯ ಸಮಿತಿಯ ಸ್ಥಾಪನೆ, ಉತ್ತರ ಅಟ್ಲಾಂಟಿಕ್ ಒಪ್ಪಂದದಲ್ಲಿ ಇಟೆಲಿಯನ್ನು ಸೇರಿಸಿಕೊಳ್ಳುವುದು ಮತ್ತು ಇಸ್ರೇಲಿನ ಮನ್ನಣೆಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಮೇಲೆ ಚರ್ಚೆ ನಡೆಯಿತು. ಉತ್ತರ ಅಟ್ಲಾಂಟಿಕ್ ಒಪ್ಪಂದ ಇಂದಾಗುವುದು, ನಾಳೆಯಾಗುವುದು ಎಂದು ಪತ್ರಿಕೆಗಳ ತುಂಬ ಅದರ ಸುದ್ದಿ ತುಂಬಿ ಹೋಗಿದೆ. ಸ್ಕಾಂಡಿನೇವಿಯದ ನಾಡುಗಳಿಗೆ ಪಾಶ್ಚಾತ್ಯರ ಗುಂಪಿಗೆ ಸೇರಬೇಕೋ ಪೌರಸ್ತ್ಯರದ್ದಕ್ಕೆ ಸೇರಬೇಕೋ ಎಂದು ತಿಳಿಯದೆ ತಲೆ ಚಚ್ಚಿಕೊಳ್ಳುತ್ತಿವೆ. ಒಪ್ಪಂದದ ಶರ್ತುಗಳು ಯಾವುವೆಂಬುದನ್ನು ಪರಿಶೀಲಿಸಿ ಒಂದು ವೇಳೆ ಅದಕ್ಕೆ ಸೇರುವುದಾದರೂ ಆಕ್ರಮಣದ ಭಯವಿಲ್ಲದಾಗ ತಾನೆಂದೂ ವಿದೇಶೀಯರಿಗೆ ಠಾಣೆಗಳನ್ನು ಮಾಡಿ ಕೊಡುವುದಿಲ್ಲವೆಂದು ನಾರ್ವೆ ರಶಿಯಕ್ಕೆ ತಿಳಿಸಿದೆ.

ಸಂಯುಕ್ತ ಪಾಶ್ಚಾತ್ಯ ಯುರೋಪಿನ ಬಗ್ಗೆ ರಶಿಯ ಕಿಡಿಕಾರುತ್ತಿದೆ. ಅದರಲ್ಲೂ ಉತ್ತರ ಅಟ್ಲಾಂಟಿಕ್ ಒಪ್ಪಂದವನ್ನು ಕಂಗರೆ ಅದು ಸಿಡಿದೇಳುತ್ತದೆ. ಚತುರ್ರಾಷ್ಟ್ರ ಸಹಕಾರ ನೀತಿಯಿಂದ ಪಾಶ್ಚಾತ್ಯ ಪಂಚರಾಷ್ಟ್ರಗಳು ದೂರವಾಗುತ್ತಿವೆಯೆಂದೂ ಜಾಗತಿಕ ಪ್ರಭುತ್ವವನ್ನು ಗೆಲ್ಲಲು ಗುರಿಹೂಡಿವೆಯೆಂದೂ ರಶಿಯ ಹೇಳಿಕೆ ಕೊಟ್ಟಿದೆ. ಅದೇ ಮರುದಿನ ಟ್ರೂಮನ್ನರೊಡನೆ ಶಾಂತಿಯ ಮಾತುಕತೆ ನಡೆಸಲು ಸಿದ್ಧರಿರುವುದಾಗಿ ಸ್ಟಾಲಿನ್ನರು ಹೇಳಿದರು. ಆದರೆ ಪಾಶ್ಚಾತ್ಯ ಮಿತ್ರರು ಸ್ಟಾಲಿನ್ನರ ಶರ್ತುಗಳಂತೆ ಸಂದರ್ಶನ ನಡೆಯಗೊಡೆವೆಂದೂ ಸಂ. ರಾ. ಸಂಘದ ಶರ್ತುಗಳಂತೆ ಮಾತ್ರ ಹಾಗೆ ಮಾತುಕತೆ ನಡೆಸಬಹುದೆಂದೂ ಸಾರಿದರು. ಉತ್ತರ ಅಟ್ಲಾಂಟಿಕ್ ಒಪ್ಪಂದವೇನಾದರೂ ಆದರೆ ಅದರ ಸೇನಾಧಿಪತ್ಯವು ಜರ್ಮನಿಯಲ್ಲಿ ಅಮೇರಿಕದ ಸೇನಾಪತಿಯಾಗಿರುವ ಲೆಫ್ಟಿನೆಂಟ್ ಜನರಲ್ ಹೂಬ್ನರನಿಗೆ ಒಪ್ಪಿಸಲ್ಪಡುವುದೆಂದು ನಾನು ಹೇಳಬಲ್ಲೆ.

ಭಾರತಕ್ಕೆ ಮಾರ್ಶಲ್ ಯೋಜನೆ?

ಅಧ್ಯಕ್ಷ ಟ್ರೂಮನ್ನರು ತಮ್ಮ ಆರಂಭ ಭಾಷಣದಲ್ಲಿ ಹೇಳಿದ ಮತ್ತು ವಿದೇಶ ಮಂತ್ರಿ ಡೀನ್ ಆಚಿಸನ್ನರು ವಿವರಿಸಿದ ಒಂದು ಬಗೆಯ ಮಾರ್ಶಲ್ ಯೋಜನೆ ಮಾಡಿ ತನ್ಮೂಲಕ ಭಾರತಕ್ಕೆ ಸಹಾಯ ಕೊಡುವುದರ ಬಗ್ಗೆ ಭಾರತವೇನು ಹೇಳೀತೆಂಬುದರ ವಿಷಯವಾಗಿ ಇಲ್ಲಿ ಬಹಳ ತರ್ಕವಿತರ್ಕ ಎದ್ದಿದೆ. ನಂಬಲರ್ಹವಾದ ಸುದ್ದಿಯಂತೆ ಭಾರತ ಮತ್ತು ಇತರ ಏಶಿಯದ ರಾಷ್ಟ್ರಗಳಿಗೆ ಅಸಿದ್ಧಪದಾರ್ಥ ಕಳುಹುವ ಶರ್ತಿನ ಮೇಲೆ ಆ ಸಹಾಯವನ್ನು ಸಿದ್ಧ ಪದಾರ್ಥ ವಿನಿಮಯದ ಮೂಲಕ ಅಮೇರಿಕ ಸಲ್ಲಿಸುವುದೆಂದು ತಿಳಿಯುತ್ತದೆ. ಕೆಲ ರಾಜಕೀಯ ನಿರೀಕ್ಷಕರ ಪ್ರಕಾರ ಇದೊಂದು ನವೀನ ಸಾಮ್ರಾಜ್ಯವಾದ- ಅಮೇರಿಕನ್ ಮಾದರಿಯದು. ಅಮೇರಿಕದ ರಾಯಭಾರಿ ಕಚೇರಿಯ ಒಬ್ಬಾತ 'ಇದು ಕೇವಲ ವ್ಯಾಪಾರ, ಮತ್ತೇನೂ ಅಲ್ಲ' ಎಂದು ನನಗೆ ಹೇಳಿದ. ಈ ವಿಷಯದ ವ್ಯಾಖ್ಯೆ ಅಮೇರಿಕದಲ್ಲಿ ಹೀಗೆ ಹೊರಟಿತು: "ಇದರಿಂದಾಗುವ ಜಾಗತಿಕ ಲಾಭ ನಮ್ಮದು; ಏಕೆಂದರೆ ನಮ್ಮ ಸಂಪತ್ತನ್ನು ವ್ಯಾಪಾರದಲ್ಲಿ ತೊಡಗಿಸಬೇಕಾಗಿದೆ, ಸಾಮಾನುಗಳಿಗೆ ಪೇಟೆಯ ಅಗತ್ಯವಿದೆ. ಇದರ ಉದ್ದೇಶವನ್ನು ಸರ್ವಸಾಮಾನ್ಯ ಸಾಮ್ರಾಜ್ಯವಾದ ಎಂದೆನ್ನಬಹುದು."

ಪುಕ್ಕಟೆ ಔಷಧೋಪಚಾರ

ಪುಕ್ಕಟೆ ಔಷಧೋಪಚಾರ..ವೈದ್ಯರೂ ಔಷಧಗಳೂ ಬಿಟ್ಟಿಯಾಗಿ ಸಿಗುವುದು-ಹಲ್ಲಿನ ಮತ್ತು ಕಣ್ಣಿನ ಚಿಕಿತ್ಸೆ ಎಲ್ಲರಿಗೂ ಧರ್ಮಾರ್ಥವಾಗಿ ಕೊಡುವುದು. ಕನ್ನಡಕ ಬೇಕಾದವರಿಗೆ ಕನ್ನಡಕ, ಬೋಳುತಲೆಯವರಿಗೆ ಟೋಪಿ ಮುಂತಾದವನ್ನು ಹಂಚುವುದು, ಈ ಎಲ್ಲ ಚಟುವಟಿಕೆಗಳನ್ನು ರಾಷ್ಟ್ರೀಯ ಆರೋಗ್ಯ ಸೇವಾ ಶಾಖೆಯ ಮೂಲಕ ನಡೆಸಿದ್ದು ಕೂಲಿಕಾರ ಸರಕಾರಕ್ಕೆ ಕೀರ್ತಿಯನ್ನು ತಂದಿದೆ. ಇದು ೧೯೪೮ರ ಜುಲೈ ೫ರಲ್ಲಿ ಜಾರಿಗೆ ಬಂದೀತು ಇದರ ಖರ್ಚು ದಿನೇ ದಿನೇ ಹೆಚ್ಚಾಗುತ್ತಿದೆ. ಇರುವೆ ಕಚ್ಚಿದರೆ ಸಾಕು, ಬೀದಿಯ ಮನುಷ್ಯನೀಗ ಆಗಿಂದಾಗ ವೈದ್ಯರ ಹತ್ತಿರ ಓಡುತ್ತಾನೆ. ಅದುದರಿಂದ ಈ ಯೋಜನೆಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಖರ್ಚು ಮೊದಲ ೯ ತಿಂಗಳಲ್ಲೇ ಬೀಳಬಹುದಾಗಿದೆ. ನೇತ್ರವೈದ್ಯ ಸಂಘದವರ ಅಂದಾಜಿನಂತೆ ೨½ ಕೋಟಿ ಬ್ರಿಟರಿಗೆ ಕನ್ನಡಕಗಳು ಬೇಕಾಗಿವೆ ಮತ್ತು ಪ್ರತಿ ವರ್ಷ ೭೦ ಲಕ್ಷ ಕನ್ನಡಕಗಳಿಗೆ ಅರ್ಜಿಗಳು ಬರುವುವು. ಮೊದಲ ೯ ತಿಂಗಳ ಖರ್ಚು ೧೦ ಕೋಟಿ ೨೦ ಲಕ್ಷ ಪೌಂಡುಗಳಷ್ಟೆಂದು ಅಂದಾಜು ಮಾಡಲಾಗಿದೆ.

ಪುಣ್ಯದಿನಾಚರಣೆ

ಗಾಂಧಿಯವರ ಪುಣ್ಯದಿನಾಚರಣೆ ಇಲ್ಲಿ ನಡೆಯಿತು. ಒಂದು ವರ್ಷದ ಕೆಳಗೆ ಭಾರತಭವನದಲ್ಲಿ ನಡೆದಂತೆ ಭಾವನಾವಶತೆಯ ದೃಶ್ಯಗಳಿಂದ ಅದು ನಡೆಯಲಿಲ್ಲ. ಬಾಪುವಿನ ಚಿತ್ರದ ಎದುರಿಗೆ ಪುಸ್ತಕ ಭಾಂಡಾರದಲ್ಲಿ ಸುಮಾರು ೫೦೦೦ ಜನರು ನೆರೆದರು. ಚಿತ್ರದ ಮೇಲೆ ಹೆಬ್ಬೆಳಕು ಬಿದ್ದಿತ್ತು. ಅದಕ್ಕೆ ಪುಷ್ಪಾಲಂಕಾರ ಮಾಡಲಾಗಿತ್ತು. ಹಾರ್ಮೋನಿಯಂ ವಾದನದೊಡನೆ ಹಾಡಿದ ಗೀತವನ್ನು ಎಲ್ಲರೂ ಮೌನದಿಂದ ಆಲಿಸಿದರು. ಅನಂತರ ಹೈಕಮಿಶನರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ, "ಮಹಾತ್ಮರನ್ನು ಧಾರ್ಮಿಕ ರೀತಿಯಿಂದ ಪೂಜಿಸಿದರೆ ಫಲವಿಲ್ಲ. ನಮ್ಮಲ್ಲಿ ಬೇಕಾದಷ್ಟು ದೇವಾಲಯಗಳೂ ವೇದಿಕೆಗಳೂ ಧರ್ಮಬೋಧಕರೂ ಇದ್ದಾರೆ, ಅಷ್ಟೇ ಸಾಕು; ಅವರಿದ್ದಾಗ ಅವರನ್ನು ಪ್ರೀತಿಸುತ್ತಿದ್ದವರು ಅವರ ಉದಾಹರಣೆಯನ್ನು ಅನುಸರಿಸಿದರೆ ಅವರ ಅವತಾರದ ಉದ್ದೇಶವನ್ನು ಸಾರ್ಥಕ ಪಡಿಸಿದಂತಾದೀತು" ಎಂದು ಹೇಳಿದರು.

ಹಾಲ್ಬರ್ನ್ ಹಾಲಿನಲ್ಲಿ ಸುಮಾರು ೨೦೦೦ ಜನರು ಕೂಡಿದ್ದರು. ಅದರಲ್ಲಿ ಹಿಂದೀಯರೂ ವಿದೇಶೀಯರೂ ಎಲ್ಲರೂ ಇದ್ದರು. ಹೆಚ್ಚು ಕಡಿಮೆ ಮೇಲಿನಂತೆಯೇ ಅವರೂ ಪುಣ್ಯತಿಥಿಯನ್ನು ಆಚರಿಸಿದರು. "ರಘುಪತಿ ರಾಘವ ರಾಜಾರಾಮ" ಎಂಬುದನ್ನು ಹಾಡಿದ ಮೇಲೆ ಒಂದು ನಿಮಿಷ ಮೌನವನ್ನು ಅವಲಂಬಿಸಲಾಯಿತು. ಮಹಾತ್ಮರು ಕೇವಲ ಭಾರತಕ್ಕಲ್ಲ ಇಡೀ ಜಗತ್ತಿಗೇ ಸೇರಿದವರು ಎಂದು ಕೃಷ್ಣಮೆನನ್ನರು ಭಾಷಣದಲ್ಲಿ ಹೇಳಿದರು. ಭಾರತದಲ್ಲಿ ಅವರಿದ್ದುದು ಭಾರತದ ಸುದೈವ. ಉಗ್ರಭಾವ ಮತ್ತು ದ್ವೇಷಗಳಿಂದ ತುಂಬಿದ ಇಂದಿನ ಜಗತ್ತಿಗೆ ಅವರ ಬೋಧ ವಿಶೇಷವಾಗಿ ಅಗತ್ಯವಿದೆ. ಅವರನ್ನು ಗೊಂಬೆ ಮಾಡಿ ಪೂಜಿಸುವುದರ ಬದಲು ಜನರು ಅವರ ಉಪದೇಶವನ್ನು ಆಚರಣೆಗೆ ತರಬೇಕು ಎಂದು ಮುಂತಾಗಿ ಹೇಳಿ ಅವರು ಭಾಷಣ ಮುಗಿಸಿದರು. ಅನಂತರ ಗಾಂಧಿಯವರ ಜೀವನವನ್ನು ಚಿತ್ರಿಸುವ ಸಿನೆಮವನ್ನು ತೋರಿಸಲಾಯಿತು.

ಪತ್ರಿಕೆಗಳ ವಿಚಿತ್ರ ವರ್ತನೆ

ಭ್ರಷ್ಟಾಚಾರಕ್ಕೀಡದವರೆಂದು ಹೇಳಲಾದ ಮಂತ್ರಿಗಳಲ್ಲಿ ಇಬ್ಬರ ದೊರಕು ಮಿಂಕ್ಲರ ಮೇಲಿನ ಅಪಾದನೆ ಸುಳ್ಳೆಂದು ಲಿನ್‌ಸ್ಕಿ ವರದಿ ಹೇಳಿದ್ದು ಸರಕಾರೀ ವರ್ಗಗಳಲ್ಲಿ ಸಮಾಧಾನಕರವೆನಿಸಿದೆ. ಆ ಇಬ್ಬರೆಂದರೆ ಬೆಲ್ಚರ್ ಮತ್ತು ಲಿನ್‌ಸ್ಕಿ. ಬೆಲ್ಚರನ ಬದಲು ಈಗ ಜಾನ ಎಡ್ವರ್ಡ್ಸ್‌ನನ್ನು ನಿಯಮಿಸಲಾಗಿದೆ. ಜಾನ್ ಎಡ್ವರ್ಡ್ಸನು ಸುಸಂಬದ್ಧನೂ ಸನಾತನಿಯೂ ಆದ ಕೂಲಿಕಾರ; ಒಳ್ಳೆಯ ಶಾಂತ ಮನಸ್ಕ, ಬೆವಿನ್ನರಂತೆ ಸಿಡುಕು ಸ್ವಭಾವದವನಲ್ಲ. ಲಿನ್‌ಸ್ಕಿ ವರದಿಯನ್ನು ನಂಬಿ ಹಲವು ಪತ್ರಿಕೆಗಳು ಲಂಚ ಕೊಡಬಂದ ಸಿಡ್ನಿ ಸ್ಟಾನ್ಲಿಯನ್ನು ದೇಶದಿಂದ ಹೊರಗೆ ತಳ್ಳಬೇಕೆಂದು ಬರೆದಿವೆ. "ಸಂಡೇ ಪಿಕ್ಟೋರಿಯಲ್" ಅವನನ್ನು "ಅದ್ಭುತ ಅನೃತವಾದಿ, ಮೋಸಗಾರ, ಆದಾಯಕರ ಕೊಡದ ಕಳ್ಳ ಮತ್ತು ಪಕ್ಕಾ ದಿಲೆಂದರ್" ಎಂದು ವರ್ಣಿಸಿದೆ. ಆದರೆ "ಪೀಪಲ್" ಅವನ ಜೀವನ ಚರಿತ್ರೆಯನ್ನು ಪಡೆಯಲು ೧೦ ಸಾವಿರ ಪೌಂಡುಗಳನ್ನು ಕೊಟ್ಟಿದೆ ಮತ್ತು ಸಂಡೇ ಡಿಸ್ಪ್ಯಾಚ್" ಅವನ ಹೆಂಡತಿ ಅವನ ಬಗ್ಗೆ ಪ್ರೀತಿಯಿಂದ ಬರೆದ ದಿನಚರಿಯನ್ನು ಪ್ರಕಟಪಡಿಸುತ್ತದೆ.

ಅಂಥೋನಿ ಈಡನ್ನರು ಡೊಮಿನಿಯನ್ನುಗಳಲ್ಲಿ ಸಂಚರಿಸಲು ಹೊರಟದ್ದು ಹೊಸ ಟೋರಿ ಸಾಮ್ರಾಜ್ಯ ಕಟ್ಟುವ ವೈಭವಪೂರ್ಣ ಧೋರಣದ ತಳಹದಿಯೆಂದು ರಾಜಕೀಯ ವರ್ಗಗಳಲ್ಲಿ ಹೇಳಲಾಗುತ್ತಿದೆ. ಕೆಲವು ವಾರಗಳ ಹಿಂದೆ ಪ್ರಭಾವಶಾಲಿಯಾದ ಟೋರಿ ಪತ್ರಿಕೆಗಳ ನಾಯಕಮಣಿ ಲಾರ್ಡ ಬೀವರ್ ಬ್ರೂಕರು ಸಾಮ್ರಾಜ್ಯವನ್ನು ಟೋರಿಗಳು ಅಲಕ್ಷಿಸುತ್ತಿರುವ ಕಾರಣಕ್ಕಾಗಿ ರಾಜೀನಾಮೆಯಿತ್ತುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

ಗರತಿಯರ ಚಿಂತೆ

ರಾಜಕುಮಾರಿ ಎಲಿಜಬೆತ್ತಳಿಗೆ ಗೊಬ್ಬರ ಉಂಟಾದುದರಿಂದ ಇಂಗ್ಲೆಂಡಿನ ಗರತಿಯರಿಗೆಲ್ಲ ಚಿಂತೆ ಹಿಡಿದಿದೆ. ರಾಜಕುಮಾರನಿಗೇನಾದರೂ ಅದು ಅಂಟೀತೆಂದು ಅವರಿಗೆ ಹಗಲಿರುಳೂ ಗಾಬರಿ ಹಿಡಿದುಬಿಟ್ಟಿದೆ. ರಾಜವೈದ್ಯನೊಬ್ಬ ಮಗುವಿಗೆ ೧ ವರ್ಷವಾಗುವುದರೊಳಗೆ ಅದು ಗೊಬ್ಬರ ಹಿಡಿದ ತಾಯಿಯ ಬಳಿಯಿರುವುದು ಅಪಾಯಕರ ಎಂದು ಹೇಳಿದ್ದರಿಂದ ರಾಜಕುಮಾರಿ ಕಾಹಿಲೆಯ ಕಾಲವನ್ನು ಕೆಲಮಟ್ಟಿಗೆ ಏಕಾಕಿನಿಯಾಗಿಯೇ ಕಳೆಯಬೇಕಾಯಿತು.

× × ×

ಇನ್ನೂ ಒಂದು ಕ್ಷೇತ್ರದಲ್ಲಿ ರಾಜಕುಟುಂಬದ ಬಗ್ಗೆ ಅನೇಕ ಕಡೆ ಚರ್ಚೆಯೇಳುವಂತಾಗಿದೆ. ಕಂಜರ್‌ವೇಟಿವ್ ಪಕ್ಷವು ರಾಜಕುಟುಂಬವನ್ನು ಮುಂದಿನ ಚುನಾವಣೆಯಲ್ಲಿ ಸಿಕ್ಕಿಸಲು ಕೂಲಿಕಾರರು ಪ್ರಯತ್ನಿಸಿದ್ದಾರೆಂದು ದೂರಿಕೊಂಡಿತು. ೧೯೫೦ ಮೇಯಲ್ಲಿ ಚುನಾವಣೆ ನಡೆಯಬಹುದಾಗಿದೆ. ಒಂದು ಕೂಲಿಕಾರ ಪಕ್ಷದ ಹಸ್ತಪತ್ರಿಕೆಯಲ್ಲಿ ಡ್ಯೂಕ್ ಆಫ್ ಕೆಂಟ್ ಮಗುವಾಗಿದ್ದಾಗಿನ ಭಾವಚಿತ್ರವನ್ನು ಬಳಸಿಕೊಂಡದ್ದೇ ಕಂಜರ್‌ವೇಟೀವರ ಕ್ರೋಧಕ್ಕೆ ಕಾರಣ.

\+ + +

ಕೊನೆಮಾತು: ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದ ಜಾನನು ತಾಯ್ತಂದೆಯರು ವಿವಾಹವಿಚ್ಛೇದ ಮಾಡಿಕೊಳ್ಳಲು ನಿಶ್ಚಯಿಸಿದ್ದನ್ನು ಕೇಳಿ ತಾಯಿಯ ಹತ್ತಿರ ಹಾಗೆ ಮಾಡಕೂಡದೆಂದು ಗರ್ಜನೆ ಮಾಡಿದನು. ಅಂಥದ್ದು ಸಂಭವಿಸಿದರೆ ನೀನೇನು ಮಾಡುವೆ ಎಂದು ಆಕೆ ಕೇಳಿದರೆ "ನಾನು ನೀವಿಬ್ಬರೂ ನಾಚಿಕೆಗೆಟ್ಟವರೆಂದು ತಿಳಿದು ನಿಮ್ಮಿಬ್ಬರನ್ನೂ ಬಿಟ್ಟು ಅಜ್ಜಿಯ ಹತ್ತಿರ ಹೋಗಿ ಇರುತ್ತೇನೆ" ಎಂದನು.

ಜನೆವರಿ ೩೦ ರಲ್ಲಿ ಹೈದರಾಬಾದಿನಲ್ಲಿ ಪ್ರಾರಂಭವಾದ ಗಲಭೆಗಳಲ್ಲಿ ೩ ಜನರು ಸತ್ತು ೫ ಪೋಲೀಸರನ್ನೊಳಗೊಂಡು ೬೫ ಜನರಿಗೆ ಗಾಯವಾಗಿದೆ. ೫೦ ಜನರನ್ನು ಬಂಧಿಸಲಾಗಿದೆ.

ಸಾಂಗಲಿ ಪೇಟೆ

ಅರಿಸಿಣ	೧೧೫-೧೨೩
ಮೆಣಸಿನಕಾಯಿ	೧೩೦-೧೭೦
ಶೇಂಗಾ	೧೩೩ ೧೪೦
ಬೆಲ್ಲ	೪೦-೫೪

ಕರ್ಮವೀರ

[illegible] ಸೋಮವಾರ

ಆಹಾರದ ಅವ್ಯವಸ್ಥೆ

ಆಹಾರದ ಅಡಚಣೆಯಲ್ಲಿ ಕಂಡುಬರುತ್ತಿರುವ ಗಂಭೀರವಾದ ದೋಷಗಳ ಬಗ್ಗೆ ದೇಶದಲ್ಲಿ ಹುಟ್ಟಿದ ಉದ್ವೇಗವೇ—ಹಾಹಾಕಾರವೆಂದರೂ ಸಲ್ಲುವದು— ಕಳೆದ ವಾರ ಪಾರ್ಲಿಮೆಂಟಿನಲ್ಲಿ ನಡೆದ ಉಗ್ರ ಆಹಾರ ಚರ್ಚೆಯಲ್ಲಿ ಮೂರ್ತವಾಗಿತ್ತೆಂಬುದು ಖಂಡಿತ. ಸದಸ್ಯರ ಹಿಂದೆ ಸದಸ್ಯರು ಎದ್ದು ನಿಂತು ಸರಕಾರದ ಅಸಾಮರ್ಥ್ಯವನ್ನು ನಾನಾ ದೃಷ್ಟಿಕೋನಗಳಿಂದ ಕಟುವಾಗಿ ಟೀಕಿಸಿದರು. ಸರಕಾರದ ಧೋರಣವನ್ನು—ಧೋರಣವೆಂಬುದೊಂದಿದ್ದರೆ—ಸಮರ್ಥಿಸಲು ಯಾವನೊಬ್ಬನೂ ಮುಂದೆ ಬರಲಿಲ್ಲ. ನಿಜವಾಗಿ ನೋಡಿದರೆ, ಸ್ವತಃ ಆಹಾರಮಂತ್ರಿ ಜೈರಾಮದಾಸರು ಕೂಡ ತಮ್ಮನ್ನು ಸಮರ್ಥಿಸಿಕೊಳ್ಳಲು ಬಹಳ ಪ್ರಯತ್ನ ಪಡಲಿಲ್ಲ. ಅವರು ಹೇಳಿದುದು ಒಂದು ಬಗೆಯಲ್ಲಿ ತಮ್ಮ ಸರಕಾರದ ಧೋರಣದ ಖಂಡನೆಯೆ ಆಗಿತ್ತು. ಒಕ್ಕಲುತನಕ್ಕೆ ಪೂರ್ವಪ್ರಾಶಸ್ತ್ಯ ಕೊಡದೆ ಈ ಸಮಸ್ಯೆ ಬಿಡಲಾರದೆಂದೂ ಸರಕಾರದ ಉತ್ಪನ್ನದಲ್ಲಿ ಈಗ ಸಾವಿರದಲ್ಲಿ ಎಂಟಂಶ ಮಾತ್ರ ಒಕ್ಕಲುತನದ ಸಲುವಾಗಿ ವೆಚ್ಚವಾಗುತ್ತಿದೆಯೆಂದೂ ಒಕ್ಕಲುತನದ ಬಗ್ಗೆ ನಮ್ಮ ದೃಷ್ಟಿ ಬದಲಾಗಬೇಕೆಂದೂ ಅವರು ಹೇಳುವುದನ್ನು ಅರಿಯದವರು ಕೇಳಿದ್ದರೆ ಇವರು ವಿರೋಧಿ ಪಕ್ಷದ ಸದಸ್ಯರಿರಬಹುದೆಂದು ಬಗೆಯಬಹುದಾಗಿತ್ತೇನೋ. ಕೇಂದ್ರವೂ ಪ್ರಾಂತಗಳೂ ಒಗ್ಗಟ್ಟಾಗಿ ಒಕ್ಕಲುತನದ ಬಗ್ಗೆ ಸಂಯುಕ್ತ ಪ್ರಯತ್ನ ಮಾಡಬೇಕೆಂದು ಹೇಳಿದ ಅವರೇ ಪ್ರಾಂತಗಳೂ ಕೇಂದ್ರವೂ ಪರಸ್ಪರ ಸಹಕರಿಸುತ್ತಿಲ್ಲೆಂಬ ದೂರು ನಿರಾಧಾರವಾದುದೆಂದೂ ಹೇಳಿದ್ದಾರೆ. ಇದನ್ನೆಲ್ಲ ನೋಡಿದರೆ ಆಹಾರ ಮಂತ್ರಿಗಳು ಆತ್ಮನಿರೀಕ್ಷಣೆಯ ಸ್ವಗತ ಭಾಷಣದಲ್ಲಿ ಮಗ್ನರಾಗಿದ್ದಂತೆ ತೋರಿತು.

ಆಹಾರ ಅಡಚಣೆಯಲ್ಲಿ ಘೋರವಾದ ಪ್ರಮಾದಗಳಾಗುತ್ತಿವೆಯೆಂಬುದು ಕುರುಡನಿಗೂ ಕಾಣಿಸುವಷ್ಟು ಸ್ಪಷ್ಟವಾಗಿದೆ. ಕಳೆದ ಹದಿನಾಲ್ಕು ತಿಂಗಳುಗಳಲ್ಲಿ ಆಹಾರನಿಯಂತ್ರಣದ ವಿಷಯದಲ್ಲಿ ಸರಕಾರ ಹಾಕಿದ ಹಿಂಗರಣಿ ಮುಂಗರಣಿ ಲಾಗಗಳಿಂದ ಇಡಿ ಆಡಳಿತೆಯೇ ಅವ್ಯವಸ್ಥೆಗೀಡಾಗಿಬಿಟ್ಟಿದೆ. ಲಕ್ಷಗಟ್ಟಲೆ ಟನ್ ಧಾನ್ಯಗಳ ಆಯಾತದ ಸುದ್ದಿಗಳು ಬರುತ್ತಲೇ ಇದ್ದರೂ ಅವು ಪ್ರವಾಹದಲ್ಲಿ ಸುರಿದಂತೆ ಕಣ್ಮರೆಯಾಗಿ, ಕೊರತೆಯೇನೂ ಕಾಯ್ದೂ ಡಿಯೆ ಇಲ್ಲ. ನಮ್ಮ ವಿದೇಶವ್ಯಾಪಾರದ ಉಳಿತಾಯವನ್ನೆಲ್ಲ ಸುರಿದರೂ ಆಹಾರದ ಆಯಾತಕ್ಕೇ ಸಾಲದಾಗದೆ, ಮೇಲಾಗಿ ಕೋಟ್ಯಂತರ ರೂಪಾಯಿ ಅಂತರ್‌ರಾಷ್ಟ್ರೀಯ ಸಾಲಕ್ಕೆ ಕೈಯೊಡ್ಡಿದ್ದೇವೆ. ಇಂಥ ಸ್ಥಿತಿ ಬಹಳ ದಿನ ನಡೆಯಲಾರದು. ನಾವು ರಾಜಕೀಯ ಸ್ವಾತಂತ್ರ್ಯದ ಕಡೆಗೆ ಅತಿಶಯ ಲಕ್ಷ್ಯಕೊಟ್ಟು ಉಳಿದ ಅಂಶಗಳನ್ನು ಗೌಣವೆಂದು ಬಗೆದರೆ ಪಶ್ಚಾತ್ತಾಪ ಪಡಬೇಕಾದೀತು. ಜನತೆಯ ಮೂಲ ಅವಶ್ಯಕತೆಯನ್ನು ಅಸಾಮರ್ಥ್ಯದ ವೇದಿಕೆಯಲ್ಲಿ ಬಲಿಗೊಡದೆ ಮುಂದಾಳುಗಳು ಒಡನೆ ಕ್ರಮ ತೆಗೆದುಕೊಳ್ಳಲಿ. ಸರದಾರ ಪಟೇಲರು ಆಹಾರಶಾಖೆಯನ್ನು ವಹಿಸಿಕೊಳ್ಳಬೇಕೆಂದು ಸೂಚನೆ ಬಂದುದು ಗಮನಾರ್ಹವಾಗಿದೆಯೆಂದು ಎಲ್ಲ ಪ್ರಜೆಗಳೂ ದನಿಗೂಡಿಸದಿರರು. ಈಗಿನ ೧೨ ಔನ್ಸಿನ ಹುಳುಕು ಕಾಳುಗಳ ರೇಶನಿಂಗು ಜನರಲ್ಲಿ ಸಂತುಷ್ಟಿಯನ್ನು ದೀರ್ಘಕಾಲ ಉಳಿಸಲಾರದು. ಅತಿಪ್ರಸರಣದ ಕೂಗು ಇಷ್ಟು ಏಳುತ್ತಲೆ ಇದ್ದರೂ ಅದು ತನ್ನ ತಿಖಿಂವನ್ನು ಮುಟ್ಟಿ ಈಗ ಇಳಿಮುಖವಾಗತೊಡಗಿದೆ. ಬೇಗನೆ ಸರಕಾರಕ್ಕೆ ಅಪಪ್ರಸರಣವನ್ನು ಅರ್ಥಾತ್ ಉಬ್ಬರದ ಬದಲಿಗೆ ಇಳಿತದ ಮುಗ್ಗಟ್ಟನ್ನು ಎದುರಿಸುವ ಪ್ರಸಂಗ ಬರಬಹುದು. ಅದರೊಳಗೆ ನಮ್ಮ ಔದ್ಯಮಿಕ ಉತ್ಪಾದನೆಯನ್ನೂ ಕೃಷಿಯ ಉತ್ಪಾದನೆಯನ್ನೂ ಅನ್ಯೋನ್ಯಪೂರಕವಾಗಿ ಬೆಳೆಸಿಕೊಳ್ಳದಿದ್ದರೆ, ಮುಂದೆ ಪರಿಸ್ಥಿತಿ ಕೈಮೀರಿ ಹೋಗಬಹುದು. ಸರಕಾರ ಈ ಎಲ್ಲ ಸಂಗತಿಗಳನ್ನು ಪರಿಶೀಲಿಸಿ ಕಾಗದದ ಕುದುರೆಗಳ ಬದಲು ಕಾರ್ಯಗಳ ಕುದುರೆಗಳನ್ನೇರಲು ತ್ವರೆ ಮಾಡಬೇಕು. ಆರ್ಥಿಕ ಅವ್ಯವಸ್ಥೆಯನ್ನು ಸ್ಥಿಮಿತಕ್ಕೆ ತರುವ ಕೆಲಸ ಪ್ರಾರಂಭವೇ ಆಗಿಲ್ಲವೋ ಎನಿಸುತ್ತದೆ. ಆಗಿದ್ದರೂ ಹಲವು ಕಡೆ, ಪರಸ್ಪರ ವಿರುದ್ಧವಾಗಿ ಕೆಲಸ ಸಾಗಿದಂತಿದೆ. ಎಲ್ಲಾದರೊಂದು ಕಡೆ ಪ್ರಾರಂಭಮಾಡಿ ಒತ್ತರದಿಂದ ಕೆಲಸ ಮಾಡುವದೊಂದೇ ಈಗಿರುವ ಉಪಾಯ. ಬಹುಶಃ ಸಾರಿಗೆಯ ಸುವ್ಯವಸ್ಥೆಯಿಂದ ಕಾರ್ಯಾರಂಭವಾಗಬೇಕಾದೀತು. ಏಕೆಂದರೆ ನಮ್ಮ ಇಂದಿನ ತೊಡಕುಗಳಲ್ಲಿ ಮುಕ್ಕಾಲು ಮೂರ್ವೀಸಕ್ಕೆ ಸಾರಿಗೆಯ ಕೊರತೆಯೆ ಮೂಲವಾಗಿದೆ.

ಮದ್ರಾಸಿನಲ್ಲಿ ಮುಖ್ಯಸೇನಾಪತಿಗಳು

ಭಾರತದ ಮುಖ್ಯಸೇನಾಪತಿ ಜ. ಕಾರ್ಯಪ್ಪನವರು ಮದ್ರಾಸಿನಲ್ಲಿ ಸೈನಿಕರನ್ನು ಪರಿದರ್ಶಿಸುತ್ತಿರುವದು.

ವಾರದ ಸಿಂಹಾವಲೋಕನ

ನಿಜಾಮರ ಆಸ್ತಿತ್ಯಾಗ

ಜಗತ್ತಿನಲ್ಲಿಯೆ ಅತಿ ದೊಡ್ಡ ಖಾಸಗಿ ಸ್ಥಿರಾಸ್ತಿಯೆನಿಸಿದ ಹೈದರಾಬಾದ ನಿಜಾಮರ "ಸರ್ಫ್-ಇ ಖಾಸ" ಭೂಮಿಗಳನ್ನು ಅವರು ಬೇಗನೆ ಹೈದರಾಬಾದ ಸರಕಾರಕ್ಕೆ ಬಿಟ್ಟುಕೊಡುವದಾಗಿ ಹೊರಡಿಸಿದ ಫರ್ಮಾನು ಯೋಗ್ಯ ಸಂಸರ್ಗದಿಂದ ಔದಾರ್ಯಗುಣಕ್ಕೆ ಕಳೆಯೇರುವದೆಂಬದಕ್ಕೆ ನಿದರ್ಶನವಾಗಿದೆಯೆನ್ನಬಹುದು. ೭೦೦೦ ಚೌ. ಮೈಲನ್ನು ವ್ಯಾಪಿಸಿ ೨೦೦೦ ಹಳ್ಳಿಗಳನ್ನೊಳಗೊಂಡ ಈ ಅರಮನೆ ಆಸ್ತಿಯು ಔಚಿತ್ಯವು ಭೂಮಿಗೂ ಸರಕಾರದ ಸೇವೆಗೂ ತಳಕು ಇದ್ದ ಮಧ್ಯಯುಗದಲ್ಲಿ ಎಷ್ಟೇ ಇದ್ದಿರಲಿ, ಇಂದಿನ ಸುಧಾರಿತ ಯುಗದಲ್ಲಿ ಎಳ್ಳಷ್ಟೂ ಇಲ್ಲ, ಮಾತ್ರವಲ್ಲ, ಅದು ಪ್ರಗತಿಗೊಂದು ದೊಡ್ಡ ಕಾಲ್ತೊಡಕೇ ಸರಿ. ಈ ಆಸ್ತಿಯ ಉತ್ಪನ್ನ ಸರಾಸರಿ ವರ್ಷಕ್ಕೆ ೨॥ ಯಿಂದ ಮೂರು ಕೋಟಿಯ ವರೆಗೆ ಇರುತ್ತಿದ್ದು ಅಲ್ಲಿಯ ರೈತರ ಹಿತಕ್ಕೆ ಇದರಲ್ಲಿ ತೀರ ಕಡಿಮೆ ಹಣ ವೆಚ್ಚವಾಗುತ್ತಿತ್ತು. ಆದರಿಂದ ಅಸಂತುಷ್ಟರಾದ ರೈತರು ಕಮ್ಯುನಿಸ್ಟರಿಗೆ ಹುಲುಸಾದ ಕ್ಷೇತ್ರವಾಗಿದ್ದರು. ದಿವಾಣಿ ಆಡಳಿತೆಗೆ ಅದೀಗ ಬರುವ ಕಾರಣ ಭೂಸುಧಾರಣೆಗಳಿಗೆ ಅವಕಾಶವಾಗಿ ರೈತರಿಗೂ ಹಿತವಾಗುವದಲ್ಲದೆ ಸರಕಾರದ ಉತ್ಪನ್ನವೂ ಬೆಳೆಯುವದು. ನಿಜಾಮರ ಫರ್ಮಾನನ್ನು ಬಹಿರಂಗಗೊಳಿಸಿದ ಮಿಲಿಟರಿ ಗವರ್ನರ ಚೌಧರಿಯವರು ಹೇಳಿದಂತೆ ನಿಜಾಮರ ಔದಾರ್ಯದಿಂದ ಜಹಗೀರುದಾರರೇ ಮೊದಲಾದವರು ಮಾರ್ಗದರ್ಶನ ಪಡೆದು ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟರೆ ನೆಟ್ಟಗೆ. ಜಹಗೀರು ಮತ್ತು ತುಂಡು ಸಂಸ್ಥಾನಗಳ ವಿಸ್ತಾರ ೨೩೦೦೦ ಚೌ. ಮೈಲಿ ನಷ್ಟಿದೆ. ಕಾಲದ ಪ್ರವಾಹ ಅವನ್ನೂ ಕೊಚ್ಚಿಕೊಂಡು ಹೋಗಿಯೇ ತೀರುವದು. ನಿಜಾಮರ ಈ ತ್ಯಾಗಕ್ಕೆ ಪ್ರತಿಯಾಗಿ ಅವರ ಖಾಸಗಿ ವೆಚ್ಚಕ್ಕೆ ೫೦ ಲಕ್ಷ ರೂಪಾಯಿ ಕೊಡುತ್ತಿದ್ದುದನ್ನು ೧ ಕೋಟಿಗೆ ಏರಿಸಲಾಗುವದೆಂದು ತಿಳಿಯುತ್ತದೆ.

ಬಿಕ್ಕಟ್ಟು ಬಗೆಹರಿಯಿತು

ಹೈದರಾಬಾದ ಕಾಂಗ್ರೆಸ್ಸಿನಲ್ಲಿ ಉಂಟಾದ ಒಡಕು ಕೊನೆಗೊಮ್ಮೆ ಸರದಾರ ಪಟೇಲರ ಮಧ್ಯಸ್ಥಿಕೆಯಿಂದ ನಿವಾರಣೆಹೊಂದಿ ಸ್ವಾಮೀಜಿಯವರ ಪಂಗಡವೂ ಶ್ರೀ ಜನಾರ್ದನ ರಾಯರ ಪಂಗಡವೂ ಪುನಃ ಒಟ್ಟಾದುದು ಹೈದರಾಬಾದಿನ ಹಿತಚಿಂತಕರೆಲ್ಲರಿಗೂ ಸಂತೋಷವನ್ನುಂಟು ಮಾಡದಿರದು. ಒಡೆದು ಹೋದ ಕಾಂಗ್ರೆಸ್ ಸಂಸ್ಥೆ ಮೂಲಬಿಂಬದಲ್ಲೆ ಐಕ್ಯಹೊಂದಿ ಸ್ವಾಮೀಜಿಯವರ ನೇತೃತ್ವದಲ್ಲಿ ಕೆಲಸ ಮಾಡುವದು ಮತ್ತು ಅವರನ್ನೆಲ್ಲ ಸೇರಿಸಿಕೊಂಡು ಸ್ವಾಮೀಜಿಯವರು ಹೊಸ ಕಾರ್ಯಕಾರಿ ಮಂಡಳವನ್ನು ರಚಿಸುವರು. ಹೊಸ ಕಾಂಗ್ರೆಸ್ ಸದಸ್ಯರನ್ನು ಮಾಡಿಕೊಳ್ಳುವಾಗ ಉಭಯತರಿಗೆ ಒಪ್ಪಿಗೆಯಾಗುವಂತೆ ಸದಸ್ಯತ್ವದ ಫಾರ್ಮುಗಳನ್ನು ಸಿದ್ಧಗೊಳಿಸಬೇಕು. ವಿವಾದಾತ್ಮಕ ವಿಷಯಗಳನ್ನು ಸ್ವಾಮೀಜಿಯವರೂ ಶ್ರೀ ರಾಮಕೃಷ್ಣರಾಯರೂ ಬಿಡಿಸಬೇಕೆಂದು ಮೊದಲಾಗಿ ಒಪ್ಪಂದವಾಗಿದೆ. ಕಾಂಗ್ರೆಸ್ಸಿನೊಳಗಿನ ಈ ಒಡಕು ಸಂದು ಗೂಡಿದುದರಿಂದ ಸಂಸ್ಥಾನದ ರಾಜಕೀಯ ಪ್ರಗತಿಯ ಮಾರ್ಗ ತೆರವಾಗಿದೆ.

ಮುಖ್ಯಮಂತ್ರಿಗಳ "ಚಾಂದ್ರಾಯಣ"

ಉಚ್ಚ ಪದವಿಯಲ್ಲಿದ್ದವರ ಉಪದೇಶಕ್ಕಿಂತಲೂ ಆಚರಣೆಯು ಮೇಲ್ಪಂತಿ ಜನ ಮನವನ್ನು ಮುಟ್ಟುತ್ತದೆ. ಆಹಾರ ಕೊರತೆಯ ಈ ಕಾಲದಲ್ಲಿ ಭಾರತದ ಮುಖ್ಯ ಮಂತ್ರಿಗಳು ಸ್ವತಃ ಹಿಡಿದ "ಚಾಂದ್ರಾಯಣ" ವ್ರತವನ್ನು ಜನರು ಆನಂದದಿಂದ ಅನುಸರಿಸಬಹುದು. ಗೋದಿಯನ್ನುಳಿಸುವ ಸಲುವಾಗಿ ಗೋದಿ ಹಿಟ್ಟಿನೊಡನೆ ಗೆಣಸಿನ ಹಿಟ್ಟು ಸೇರಿಸಿದ ರೊಟ್ಟಿಯನ್ನು ತಾವು ಉಣ್ಣುತ್ತಿರುವದಾಗಿ ಅವರು ಮೊನ್ನೆ ಬಹಿರಂಗಪಡಿಸಿ ಜನರಿಂದ ಅದೇ ಬಗೆಯಾದ ವ್ರತವನ್ನು ಅಪೇಕ್ಷಿಸಿದರು. ಕೇಂದ್ರದ ಮತ್ತು ಪ್ರಾಂತದ ಮಂತ್ರಿಗಳೆಲ್ಲರೂ ಜವಾಹರಲಾಲರ ಶ್ರೇಷ್ಠ ಮಾರ್ಗದಲ್ಲಿ ನಡೆದು ತೋರಿಸಿದರೆ ಅದು "ಜನತೆಯ ಸಹಕಾರ"ಕ್ಕಾಗಿ ಮಾಡಲ್ಪಡುವ ಗ್ರಂಥಗಟ್ಟಲೆ ಭಾಷಣಗಳಿಗಿಂತ ಹೆಚ್ಚು ಪರಿಣಾಮಕರವಾದೀತೆಂದು ತೋರುತ್ತದೆ.

ಗುಜರಾಥದ ಬರಗಾಲ

ಅತಿವೃಷ್ಟಿ ಅನಾವೃಷ್ಟಿಗಳ ಕಾರಣದಿಂದ ಪ್ರತಿವರ್ಷವೂ ಭಾರತದ ಒಂದಲ್ಲ ಒಂದು ಭಾಗಕ್ಕೆ ಪೆಟ್ಟು ಬೀಳುತ್ತ, ಆಹಾರ ಪರಿಸ್ಥಿತಿಯನ್ನು ಅಂಕೆಗೆ ತರುವದು ಕಠಿನವಾಗುತ್ತಿರುವದು ದೊಡ್ಡ ದುರ್ದೈವ. ನಮ್ಮ ಪ್ರಾಂತದಲ್ಲಿ ಈ ವರ್ಷ ಗುಜರಾಥಕ್ಕೆ ಇಂಥ ದುರ್ಯೋಗ ಒದಗಿ ಬಂದಿದೆ. ಭಡೋಚ, ಅಹಮದಾಬಾದ ಜಿಲ್ಲೆಗಳ ಸುಮಾರು ೩೦೦೦ ಚೌ. ಮೈಲು ವಿಸ್ತಾರವಾದ ಭೂಮಿ ಅನಾವೃಷ್ಟಿಗೆ ತುತ್ತಾಗಿ ೬.೫ ಲಕ್ಷ ಜನರು ಪೀಡಿತರಾಗಿದ್ದಾರೆಂದು ಗೃಹಮಂತ್ರಿ ಮುರಾರಜಿಯವರು ಕಳೆದ ವಾರ ವಿವರಿಸಿದರು. ಅಲ್ಲಿಗೆ ನಿತ್ಯವೂ ೧೫೦ ವಾಗೀನು ಆಹಾರಧಾನ್ಯ, ಮೇವುಗಳನ್ನು ಕಳಿಸಲಾಗುತ್ತಿದೆಯಲ್ಲದೆ ೫ ಲಕ್ಷ ಜೀವಸತ್ವಗಳ ಗುಳಿಗೆಗಳನ್ನೂ ೬ ಸಾವಿರ ಪೌಂಡು ಹಾಲಿನ ಪುಡಿಯನ್ನೂ ಪೂರೈಸಲಾಗಿದೆ. ಬೋರಿಂಗ್ ಬಾವಿ ಮೊದಲಾಗಿ ಅನೇಕ ಬರಗಾಲದ ಕಾಮಗಾರಿಗಳನ್ನೂ ಚರಕ ಕೇಂದ್ರಗಳನ್ನೂ ಪರಿಹಾರಕೇಂದ್ರಗಳನ್ನೂ ಪ್ರಾರಂಭಿಸಲಾಗಿದೆ. ಬರಗಾಲದಿಂದ ಗುಜರಾಥದಲ್ಲಿ ಒಬ್ಬನೂ ಸಾಯದಂತೆ ನೋಡಲು ಸರಕಾರ ದೃಢಸಂಕಲ್ಪ ಮಾಡಿದ್ದರೂ ಕಾರ್ಯಕರ್ತರೂ ಧನಿಕರೂ ಆರ್ತ ಗುಜರಾಥದ ಕಡೆ ಮನಸು ಕೊಡುವದು ಅವಶ್ಯ. ಗುಜರಾಥಿಗಳು ಕರ್ನಾಟಕದ ಬರಗಾಲದ ಕಾಲದಲ್ಲಿ ಮಾಡಿದ ಸೇವೆಯನ್ನು ಈ ಕಾಲದಲ್ಲಿ ನಾವು ನೆನೆದುಕೊಳ್ಳಬೇಕು.

ಪಾಕಿಸ್ತಾನದ ರಾಜಕಾರಣ

ತಮ್ಮ ಕನಸಿನ ಪಾಕಿಸ್ತಾನವನ್ನು ತಾವೇ ಬಗೆದಿರದಷ್ಟು ಸುಲಭವಾಗಿ ಸಂಪಾದಿಸಿದ ಪಾಕಿಸ್ತಾನಿಗಳು ಈಗ ಸುಲಿಗೆಯನ್ನು ಪಾಲು ಮಾಡಿಕೊಳ್ಳುವ ವಿಷಯದಲ್ಲಿ ಕೇಶಾಕೇಶಿ ನಖಾನಖಿಗಳನ್ನು ಪ್ರಾರಂಭಿಸಿರುವಂತೆ ತೋರುತ್ತದೆ. ಅಲ್ಪಸಂಖ್ಯರ ಸಮಸ್ಯೆಯನ್ನು ಲಗುಡದಿಂದಲೇ ತೀರಿಸಿರುವ ಪಶ್ಚಿಮ ಪಾಕಿಸ್ತಾನದಲ್ಲೇ ಈ ಅಂತಃಕಲಹ ಹೆಚ್ಚಾಗಿರುವದು ಅರ್ಥಗರ್ಭಿತವಾಗಿದೆ. ಪಶ್ಚಿಮ ಪಂಜಾಬದ ಸ್ವಾಮಿತ್ವಕ್ಕಾಗಿ ಮಮತಾಜ ದೌಲತಾನಾ ಮತ್ತು ಮಮದೋತ ಖಾನರ ನಡುವೆ ಆಗುತ್ತಿದ್ದ ತಿಕ್ಕಾಟಗಳ ಫಲವಾಗಿ ಹಲವು ತಿಂಗಳುಗಳಿಂದ ಆಡಳಿತೆಯೇ ಕುಸಿದು ಬೀಳುವಂತಾದುದರಿಂದ ಗವರ್ನರರೇ ೯೩ ನೆಯ ಕಲಮು ಉಪಯೋಗಿಸಿ ಅಧಿಕಾರ ವಹಿಸಬೇಕಾಯಿತು. ಈ ಸಂಬಂಧದಲ್ಲಿ ಅವರು ಕೊಟ್ಟ ಹೇಳಿಕೆಯಲ್ಲಿ ವಿಭಜನೋತ್ತರ ನರಹತ್ಯೆಯ ನಂತರ ಪಾಕಿಸ್ತಾನದಲ್ಲಿ ಪ್ರಜಾತಂತ್ರ ದುರ್ಮಾರ್ಗದಲ್ಲಿ ಪ್ರಾರಂಭವಾಯಿತೆಂದು ಹೇಳಿದ್ದು ಪಾಕಿಸ್ತಾನಕ್ಕೆ ಭೂಷಣವಂತೂ ಅಲ್ಲ. ಸಿಂಧದಲ್ಲಿ ಹಿದಾಯತುಲ್ಲಾ-ಖುಹ್ರೋ, ಖುಹ್ರೋ-ಪೀರ ಇಲಾಹಿ ಎಳೆದಾಟಗಳ ಫಲವಾಗಿ ಹೊರಬಿದ್ದ ಮುಸ್ಲಿಂಲೀಗ ಹೊಲಸುಗಳಿಗೆ ಶಿಖರಪ್ರಾಯವಾಗಿ ಈಗ ಪೀರ ಇಲಾಹಿ ಮತ್ತು ಅವರ ಗುಂಪಿನವರು (೧೯೪೬) ಚುನಾವಣೆಯಲ್ಲಿ ನಡೆಸಿದ ಅಕ್ರಮಗಳು ಜಿ. ಎಂ. ಸಯ್ಯದರ ನಿಮಿತ್ತದಿಂದ ಹೊರಬಿದ್ದು ಹಲವರು ಶಾಸನಸಭಾಸದತ್ವಕ್ಕೆ ಎರವಾಗಿದ್ದಾರೆ. ಈ ಎಲ್ಲ ಅಕ್ರಮಗಳು ಮೊದಲೇ ಹೊರಬಿದ್ದಿದ್ದರೆ, ಸಿಂಧದಲ್ಲಿ ಬಹುಶಃ ಇಂದು ಜಿ. ಎಂ. ಸಯ್ಯದರವೇ ಕಾರಭಾರು ನಡೆಯುತ್ತಿದ್ದಿತಲ್ಲದೆ ಮುಸ್ಲಿಂ ಲೀಗ್ ಮತ್ತು ಪಾಕಿಸ್ತಾನದ ಹಣೆಬರಹವೂ ಬದಲಾಗುತ್ತಿದ್ದಿತೋ ಏನೋ.

ಗಾಡಿಯಲ್ಲಿ ತುಂಬ ದಟ್ಟಣೆಯಿತ್ತು. ಫ್ಯಾಶನ್ನಿನ ವೇಷಭೂಷೆ ಧರಿಸಿದ್ದ ಗರ್ವಿತಳಾದ ಹೆಂಗಸೊಬ್ಬಳ ಬಳಿ ಸ್ವಲ್ಪ ಮಾಸಿದ ಬಟ್ಟೆ ತೊಟ್ಟ ಹುಡುಗ ಕುಳಿತು ಸುರ್‌ಸುರ್‍ರೆಂದು ಆಗಾಗ್ಗೆ ಸುಂಬಳವನ್ನು ಮೇಲೆ ಸೇದಿಕೊಳ್ಳುತ್ತಿದ್ದ.

ಹೆಂಗಸು ಕೊನೆಗೆ ಸೈರಣೆ ಮೀರಿ ಕೇಳಿದಳು: "ನಿನ್ನ ಹತ್ತಿರ ಕರವಸ್ತ್ರವುಂಟೆ?"

ಹುಡುಗನ ಉತ್ತರ. "ಇದೆ, ಆದರೆ ಗುರುತಿಲ್ಲದವರಿಗೆ ಅದನ್ನು ಎರವು ಕೊಡಲಾರೆ!"

ಸೇವಾಗ್ರಾಮ ಶಾಂತಿವಾದಿ ಸಮ್ಮೇಲನ

ಶಾಂತಿಯಲ್ಲಿ ತೀವ್ರವಾದ ಆಸಕ್ತಿಯುಳ್ಳ ಕೆಲವರು ಭಾರತಕ್ಕೆ ಬಂದು ಮಹಾತ್ಮಾ ಗಾಂಧಿಯವರೊಡನೆ ಜಾಗತಿಕ ಶಾಂತಿಯ ಸಮಸ್ಯೆಗಳನ್ನು ಚರ್ಚಿಸಬೇಕೆಂದು ೧೯೪೭ ರಲ್ಲಿ ಸೂಚಿಸಲ್ಪಟ್ಟಿದ್ದಿತೆಂದು "ಹರಿಜನ"ದ ಓದುಗರಿಗೆ ತಿಳಿದೇ ಇದೆ. ಆದರೆ ಈ ಸಮ್ಮೇಲನವನ್ನು ೧೯೪೮ ರಲ್ಲಿ ಸೇರಿಸದೆ, ಬ್ರಿಟಿಶ ಸೈನ್ಯವನ್ನು ಭಾರತದಿಂದ ಪೂರ್ತಿಯಾಗಿ ಹಿಂತೆಗೆದುಕೊಂಡ ನಂತರವೇ ಸೇರಿಸಬೇಕೆಂದು ಮಹಾತ್ಮಾ ಗಾಂಧಿಯವರು ಅಭಿಪ್ರಾಯಕೊಟ್ಟದ್ದರಿಂದ, ೧೯೪೯ ಜನೆವರಿಯನ್ನು ಅದಕ್ಕಾಗಿ ಗೊತ್ತುಪಡಿಸಲಾಗಿತ್ತು. ದುರ್ದೈವದಿಂದ ಆ ಸಮ್ಮೇಲನ ಕೂಡುವ ಮೊದಲೇ ಮಹಾತ್ಮಾಜಿಯವರ ಕೊಲೆಯಾಯಿತು. ಆದರೂ ಈ ಉಪಕ್ರಮವನ್ನು ತೊರೆಯಬಾರದೆಂದೂ ಉಳಿದವರು ಅದನ್ನು ಮುಂದೆ ಸಾಗಿಸುವ ಆವಶ್ಯಕತೆ ಇನ್ನಷ್ಟು ಹೆಚ್ಚಾಗಿದೆಯೆಂದೂ ಭಾರತದಲ್ಲಿಯೂ ಹೊರಗೂ ಅಭಿಮತ ವ್ಯಕ್ತಗೊಳಿಸಲ್ಪಟ್ಟಿತು. ಅನೇಕ ಕಾರಣಗಳಿಂದ, ಆದರಲ್ಲಿಯೂ ನಾವು ಆಸನ್ನರ್ಥದಾಗಿದ್ದುದಲ್ಲದೆ ವಿದೇಶಗಳಿಂದ ಬರಲಿರುವ ಪ್ರತಿನಿಧಿಗಳಿಗೆ ಹಡಗಿನಲ್ಲಿ ಎಡೆ ದೊರಕಿಸಿಕೊಡಲು ಬಹಳ ಕಷ್ಟವಾದುದರಿಂದ ೧೯೪೯ ಜನೇವರಿ ಮಧ್ಯಕ್ಕೆಂದು ಗೊತ್ತುಪಡಿಸಲ್ಪಟ್ಟಿದ್ದ ಸಮ್ಮೇಲನವನ್ನು ಮುಂದೆ ತಳ್ಳಬೇಕಾಯಿತು. ಆದರೆ ಮುಂದೆ ತಳ್ಳಲಾದ ಜಾಗತಿಕ ಶಾಂತಿವಾದಿ ಸಮ್ಮೇಲನದ ಪೂರ್ವ ಸಿದ್ಧತೆಗಳನ್ನು ಪರ್ಯಾಲೋಚಿಸಲು ಆ ಹೊತ್ತಿಗೆ ಒಂದು ಪೀಠಿಕಾ ಸಮ್ಮೇಲನವನ್ನು ನೆರೆಸಲು ನಿರ್ಧರಿಸಲಾಯಿತು. ಈ ಸಮ್ಮೇಲನವೇ ಅತ್ಯಂತ ಉಚಿತ ಸ್ಥಾನವಾದ ಸೇವಾಗ್ರಾಮದಲ್ಲಿ ಮೊನ್ನೆ ಜನೇವರಿ ೨೬, ೨೭ ಮತ್ತು ೨೮ ಕ್ಕೆ ಕೂಡಿದ್ದು.

ಸಮ್ಮೇಲನದಲ್ಲಿ ವಿಚಾರಿಸಲ್ಪಟ್ಟ ಮೊದಲನೆ ಪ್ರಶ್ನೆಯೆಂದರೆ ಜಾಗತಿಕ ಸಮ್ಮೇಲನದ ದಿನವನ್ನೂ ಕಾರ್ಯಕ್ರಮವನ್ನೂ ಗೊತ್ತುಪಡಿಸುವದು. ಜಾಗತಿಕ ಸಮ್ಮೇಲನವನ್ನು ಎರಡು ಭಾಗಗಳಾಗಿ ಸೇರಿಸಬೇಕೆಂದು ತೀರ್ಮಾನಿಸಲಾಯಿತು— ಮೊದಲನೆ ಭಾಗ ಮೊಟ್ಟಮೊದಲು ಸಂಕಲ್ಪಿಸಲ್ಪಟ್ಟಂತೆ ಶಾಂತಿನಿಕೇತನದಲ್ಲಿ, ಎರಡನೆಯದು ಸೇವಾಗ್ರಾಮದಲ್ಲಿ. ಶಾಂತಿನಿಕೇತನದ ಸಮ್ಮೇಲನ ಡಿಸೆಂಬರ ೧ ರಿಂದ ೮ರ ವರೆಗೆ ನಡೆಯಬೇಕು. ಆ ಮೇಲೆ ಸಾಧಾರಣ ಮೂರು ವಾರಗಳ ವರೆಗೆ ಬಿಡುವು. ಈ ಬಿಡುವಿನ ಕಾಲದಲ್ಲಿ ಪ್ರತಿನಿಧಿಗಳು ದೇಶದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಜನಜೀವನವನ್ನೂ ಸಂಸ್ಕೃತಿಯನ್ನೂ ಕಾಣಬಹುದಲ್ಲದೆ, ಸಮ್ಮೇಲನದ ಉದ್ದೇಶಗಳನ್ನೂ ತಂತಮ್ಮೊಳಗೆ ಚರ್ಚಿಸಬಹುದು. ಕೊನೆಗೆ ಸೇವಾಗ್ರಾಮದಲ್ಲಿ ಮತ್ತೆ ಜನೆವರಿ ೧೯೫೦ ಪ್ರಥಮ ವಾರದಲ್ಲಿ ಅದು ಕೂಡಬಹುದು. ಈ ಆಶಯದ ಗೊತ್ತುವಳಿ ಸ್ವೀಕರಿಸಲ್ಪಟ್ಟದೆಯಲ್ಲದೆ, ಜಾಗತಿಕ ಸಮ್ಮೇಲನದ ಸನ್ನಾಹಗಳಲ್ಲಿ ನೆರವಾಗಲು ಸಾರ್ವಜನಿಕರಿಗೆ ಬಿನ್ನವಿಸುವ ಮತ್ತು ವರ್ಗ ವರ್ಗಗಳ ಹಾಗು ರಾಷ್ಟ್ರಗಳ ನಡುವಣ ತಿಕ್ಕಾಟದ ಪರಿಹಾರಕ್ಕಾಗಿ ಅಹಿಂಸೆಯ ತತ್ವಗಳನ್ನು ಯಾವ ಬಗೆಯಾಗಿ ಪ್ರಯೋಗಿಸಬಹುದೆಂದು ವಿಚಾರಿಸಲು ಸ್ಥಾನಿಕ ಗುಂಪುಗಳನ್ನಾಗಲಿ ಸಮಿತಿಗಳನ್ನಾಗಲಿ ರಚಿಸುವ ತೀರ್ಮಾನಗಳೂ ಆಗಿವೆ. ಏಶಿಯ, ಆಫ್ರಿಕ, ಯುರೋಪ, ಆಸ್ಟ್ರೇಲಿಯ ಮತ್ತು ಅಮೇರಿಕಗಳಿಂದ ಸುಮಾರು ಐವತ್ತು ಆಸಕ್ತ ಕಾರ್ಯಕರ್ತರನ್ನು ಶಾಂತಿವಾದಿಗಳ ಜಾಗತಿಕ ಸಭೆಗೆ ಆಮಂತ್ರಿಸಲಾಗಿದೆ. ಅಮೇರಿಕ ಇಂಗ್ಲಂಡುಗಳಂಥ ಕೆಲ ದೇಶಗಳಿಂದ ಬರುವ ಪ್ರತಿನಿಧಿಗಳ ವೆಚ್ಚಗಳನ್ನು ಆಯಾ ದೇಶಗಳೇ ನೋಡಿಕೊಳ್ಳುವವಾದರೂ ಭಾರತದಲ್ಲಿ ಸಮ್ಮೇಲನದ ಇತರ ವೆಚ್ಚಗಳಿಗಾಗಿ ಸುಮಾರು ೨॥ ಲಕ್ಷ ರೂಪಾಯಿಗಳು ಆಮಂತ್ರಕ ಸಮಿತಿಗೆ ಬೇಕಾಗಬಹುದಾದ ಕಾರಣ, ಜಗತ್ತಿನ ಶಾಂತಿಯಲ್ಲಿ ಆಸ್ಥೆಯುಳ್ಳ ಸಾರ್ವಜನಿಕರು ಉದಾರವಾಗಿ ಧನಸಹಾಯ ಮಾಡಿ ಈ ನಿಧಿಯನ್ನೆತ್ತುವಲ್ಲಿ ಸಹಕರಿಸಬೇಕೆಂದು ವಿಜ್ಞಾಪಿಸಲಾಗಿದೆ.

ಸಮ್ಮೇಲನವು ಎರಡು ದಿವಸಗಳ ವರೆಗೆ ಶಾಂತಿ ಸಮಸ್ಯೆಯ ವಿವಿಧ ಮುಖಗಳನ್ನು ಚರ್ಚಿಸಿತು. ಮುಖ್ಯವಾಗಿ ಅಹಿಂಸೆಯ ವ್ಯವಹಾರದಲ್ಲಿ ಪ್ರಯೋಗಿಸುವ ರೀತಿಯನ್ನೂ ಅದಕ್ಕೂ ಮಹಾತ್ಮಾ ಗಾಂಧಿಯವರು ಕಲ್ಪಿಸಿದ ರಚನಾತ್ಮಕ ಕಾರ್ಯವಿಧಾನಕ್ಕೂ ಇರುವ ಸಂಬಂಧವನ್ನೂ ವಿವೇಚಿಸಲಾಯಿತು. ಮಹಾತ್ಮಾ ಗಾಂಧಿಯವರಿಂದ ಸ್ಫೂರ್ತಿಪಡೆದು ಸ್ಥಾಪಿಸಲ್ಪಟ್ಟ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಗಳಾದ ಶ್ರೀ ಜೆ. ಸಿ. ಕುಮಾರಪ್ಪನವರು ಚರ್ಚೆಯನ್ನು ಪ್ರಾರಂಭಿಸಿದರು ಮತ್ತು ಕೊನೆಯಲ್ಲಿ, ಭಾರತದ ಸ್ವಾತಂತ್ರ್ಯ ಸಂಪಾದನೆಯಲ್ಲಿ ಅಹಿಂಸೆಗೆ ದೊರೆತ ಅಪೂರ್ವ ಯಶಸ್ಸನ್ನು ಪದೇ ಪದೇ ನೆನೆದುಕೊಂಡು ಜಟಿಲ ಸಮಸ್ಯೆಗಳನ್ನೂ ಪರಿಸ್ಥಿತಿಗಳನ್ನೂ ನಿವಾರಿಸಲು ಅಹಿಂಸಾತ್ಮಕ ಕ್ರಮಗಳನ್ನು ಹುಡುಕಬೇಕೆಂದು ಸರಕಾರಗಳಿಗೂ ಜನಾಂಗಗಳಿಗೂ ಕಳಕಳಿಯಿಂದ ಸೂಚಿಸುವ ಗೊತ್ತುವಳಿ ಅಂಗೀಕರಿಸಲಾಯಿತು. ಸಾಮಾನ್ಯವಾಗಿ ಎಲ್ಲ ಜನರಲ್ಲಿ ಮತ್ತು ವಿಶೇಷವಾಗಿ ಎಳೆಯ ಪೀಳಿಗೆಯಲ್ಲಿ ಶಾಂತಿಪ್ರಿಯತೆಯನ್ನು ಹಬ್ಬಿಸಲು ಅವಶ್ಯವಾದ ನಿರ್ದಿಷ್ಟ ಉಪಾಯಗಳನ್ನು ಕಂಡುಹಿಡಿಯುವದರಲ್ಲಿ ಸೌಹಾರ್ದಶಾಲಿಗಳಾದ ಎಲ್ಲ ವ್ಯಕ್ತಿಗಳೊಡನೆ ಒಗ್ಗೂಡಿ ಕೆಲಸ ಮಾಡುವ ಇಚ್ಛೆಯನ್ನು ಸಮ್ಮೇಲನ ವ್ಯಕ್ತಗೊಳಿಸಿತು. ಸತ್ಯ ಅಹಿಂಸೆಗಳನ್ನೇ ಆಧಾರವಾಗಿಟ್ಟುಕೊಂಡ ಒಂದು ಹೊಸ ಜಾಗತಿಕ ವ್ಯವಸ್ಥೆ, ಭಾರತದಲ್ಲಿ ಅಂಥ ವ್ಯವಸ್ಥೆಯುಳ್ಳ ಸಮಾಜದ ನಿರ್ಮಾಣ, ಗುಂಪುಗುಂಪುಗಳ ಮತ್ತು ರಾಷ್ಟ್ರರಾಷ್ಟ್ರಗಳೊಳಗಿನ ಘರ್ಷಣೆಗಳ ಕಾರಣಗಳನ್ನು ನಿವಾರಿಸುವ ಪ್ರಯತ್ನ, ಅಂತರ್‌ರಾಷ್ಟ್ರೀಯ ಸೌಹಾರ್ದ ಸಾಧನೆ, ಘರ್ಷಣೆಗಳನ್ನು ಸಫಲವಾಗಿ ಶಾಂತಗೊಳಿಸುವ ಸಲುವಾಗಿ ಅಲ್ಲಲ್ಲಿ ಸ್ಥಾನಿಕ ಶಾಂತಿಪಥಕಗಳ ಸ್ಥಾಪನೆ ಇವುಗಳನ್ನೇ ಉದ್ದೇಶವಾಗಿಟ್ಟುಕೊಂಡ ಒಂದು ಬಾಂಧವಮಂಡಲವನ್ನು ಭಾರತದಲ್ಲಿ ಸ್ಥಾಪಿಸಬೇಕೆಂದೂ ನಿರ್ಣಯಿಸಲಾಯಿತು.

ಸಮ್ಮೇಲನದಭಾರತೀಯಸದಸ್ಯರು ಭಾರತದಲ್ಲಿನ ಸ್ಥಿತಿಗತಿಯನ್ನು ಕುರಿತು ಚಿಂತೆಯನ್ನು ವ್ಯಕ್ತಗೊಳಿಸಿದ್ದರು. ಮಹಾತ್ಮಾ ಗಾಂಧಿಯವರ ಜನ್ಮಭೂಮಿಯೂ ಕರ್ಮಭೂಮಿಯೂ ಆದ ದೇಶದಲ್ಲಿ ಮಹಾತ್ಮರು ಉಪದೇಶಿಸಿ ಆಚರಿಸಿ ತೋರಿಸಿದ ಅಹಿಂಸೆಯ ತಾತ್ವವನ್ನು ಸರಿಸಲು ಸರಕಾರವೂ ಜನತೆಯೂ ಅಸಮರ್ಥವಾದುದು ವಿಲಕ್ಷಣವೆಂದು ಒಪ್ಪಿಕೊಂಡರು. ಶಿಕ್ಷಣ ಸಂಸ್ಥೆಗಳಲ್ಲಿ ಸೈನಿಕ ಶಿಕ್ಷಣ ಕೊಡುವ ಯೋಜನೆಗಳಿಂದಲೂ ಶಸ್ತ್ರಬಲಗಳ ವಿಸ್ತರಣ ಮತ್ತು ಬಲಕರಣೆಗಳಿಗಾಗಿ ಆಗುವ ವೆಚ್ಚದ ಹೆಚ್ಚಳದಿಂದಲೂ ಸ್ಪಷ್ಟವಾಗುತ್ತಿರುವ ಸೈನ್ಯಪ್ರಿಯ ಮನೋವೃತ್ತಿಯ ಬಗ್ಗೆ ವಿಷಾದನೆಯನ್ನು ವ್ಯಕ್ತಗೊಳಿಸಲಾಯಿತು. ಆದರೂ— ಅಹಿಂಸೆಯನ್ನು ಆಚರಣೆಗೆ ತರಲು ಅಸಮರ್ಥರಾದರೂ ಸರಕಾರದವರು ಮಹಾತ್ಮಾಜಿಯವರ ಉಪದೇಶಗಳನ್ನು ಗಮನದಲ್ಲಿಟ್ಟುಕೊಂಡಿದ್ದು, ಅಹಿಂಸೆಯಿಂದ ಲಬ್ಧವಾದ ಯಶಸ್ಸನ್ನು ಮುಂದಾಳುಗಳು ಯಾವಾಗಲೂ ನೆನವರಿಕೆಗೆ ತಂದುಕೊಳ್ಳುತ್ತಿರುವದರಿಂದ, ಸರ್ಕಾರ ಅವರನ್ನು ನಿರುಪಾಯರನ್ನಾಗಿ ಮಾಡಿದ ಪರಿಸ್ಥಿತಿಯನ್ನು ಎದುರಿಸಿ ಗೆಲ್ಲಲು ಅವರು ಸಮರ್ಥರಾಗಬಹುದೆಂದು ಹಾರೈಸಲಾಯಿತು.

ಭಾರತದ ಶಾಂತಿಪ್ರೇಮಿಗಳ ಮುಂದೆ ಈಗಿರುವ ಕೆಲಸವೆಂದರೆ, ಜಾಗತಿಕ ಸಮ್ಮೇಲನಕ್ಕೆ ಸನ್ನಾಹ ಮಾಡುವದು. ಇದಕ್ಕೆ ಅವಶ್ಯವಾದ ಹಣವನ್ನು ಸಂಗ್ರಹಿಸಬೇಕಾಗಿದೆ ಮತ್ತು ಅದಕ್ಕಿಂತಲೂ ಹೆಚ್ಚಾಗಿ, ಸಾರ್ವಜನಿಕವಾಗಿಯೂ ಗುಂಪುಗುಂಪಾಗಿಯೂ ಎಲ್ಲ ವರ್ಗದ ಜನರಲ್ಲಿ ಚರ್ಚೆಗಳನ್ನು ಏರ್ಪಡಿಸುವ ಮೂಲಕ ದೇಶದಲ್ಲಿ ಅವಶ್ಯಕ ವಾತಾವರಣವನ್ನು ಕಲ್ಪಿಸಬೇಕಾಗಿದೆ. ಇದಕ್ಕೆ ಒಗ್ಗೊಟ್ಟು ಎಲ್ಲ ದೇಶ ನಿವಾಸಿಗಳಲ್ಲಿ ಶಾಂತಿ ಸೌಹಾರ್ದವನ್ನು ಸ್ಥಾಪಿಸುವ ಮೂಲಕ ಜನರು ಆ ಮಹಾಗುರುವಿನ ಉಪದೇಶಗಳಲ್ಲಿ ತಮಗಿರುವ ಅಕುಂಠಿತ ವಿಶ್ವಾಸವನ್ನು ನಿದರ್ಶನಕ್ಕೆ ತಂದು ಕೊಡುವರೆಂದೂ ಆಶಿಸಲಾಗಿದೆ. ಹಾಗಾದರೆ ಆಹಿಂಸೆಯ ವಿಶಾಲತರ ಪ್ರಯೋಗಕ್ಕೆ ಹಾದಿಯಾಗುವದು.

೨—೨—೪೯ —ರಾಜೇಂದ್ರ ಪ್ರಸಾದ

ಅಸಹಾಯ ಶೂರತೆ

೧೯೪೧ ರಲ್ಲಿ ನಾನು ಸೆರೆಮನೆಯಲ್ಲಿ ಇದ್ದಾಗ ನನಗಾಗಿಯೂ ನನ್ನ ಸಹೋದ್ಯೋಗಿಗಳ ಬೇಡಿಕೆಗಾಗಿಯೂ ಅಹಿಂಸೆಯನ್ನು ಧರ್ಮವೆಂದು ತಿಳಿಯುವುದರಬಗ್ಗೆ ಕೆಲವಿಚಾರಗಳನ್ನು ಬರೆದೆ. ಕೃತಕನಾದ ಅಹಿಂಸಾ ಧೋರಣೆಗೆ ಅಪಜಯ ಸಿದ್ಧ ಎಂಬುದೇ ನನ್ನ ಎಲ್ಲ ವಾದಗಳ ಸಾರವಾಗಿತ್ತು. ಅದಕ್ಕೆ ಜಯ ಸಿಗುವುದಾದರೆ ಯಾವುದಾದರೊಂದು ಸಮಾಜವು ಅದನ್ನು ಧರ್ಮವೆಂದು ತಿಳಿದು ಆ ಪ್ರಕಾರ ಆಚರಿಸಿದಾಗ ಮಾತ್ರ. ಅಹಿಂಸೆಯ ಅರ್ಥವನ್ನು ಗಾಂಧಿಯವರೇ ಸ್ವತಃ ಬಿಡಿಸಿ ವಿವರಿಸಿದ್ದಾರೆ. ಆದರೆ ಇನ್ನೂ ಕೆಲಮಟ್ಟಿಗೆ ಅಸ್ಪಷ್ಟತೆ ಉಳಿದಿತ್ತು. ಅವರ ದಿಗ್ದರ್ಶನಾನುಸಾರ ಪಕ್ವರಾದ ಯಾರಾದರೂ ಸತ್ಯಾಹಿಂಸೆಗಳನ್ನು ಆಧರಿಸಿ ಸಂತ ಮತ್ತು ಗಾಂಧಿಯವರೇ ಎಣಿಸಿದಂತೆ ದುಷ್ಟ ಸತ್ವಗಳೊಡನೆ ಅಸಹಕಾರದಿಂದ ಇರುವುದರ ಒಂದು ಸಂಪೂರ್ಣ ಚಿತ್ರವನ್ನು ಜಗತ್ತಿನೆದುರು ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ಸಲಹೆ ಕೂಡ ಕೊಟ್ಟೆ. ನಾನು ಜೇಲಿನಿಂದ ಮುಕ್ತನಾದೊಡನೆಯೇ ಗಾಂಧಿಯವರ ಅವಗಾಹನೆಗೆಂದು ಹಸ್ತಪ್ರತಿಯನ್ನು ಕಿಶೋರಲಾಲಭಾಯಿಯವರ ಮೂಲಕ ಅವರಿಗೊಪ್ಪಿಸಿದೆ. ಅವರು ಮೆಚ್ಚಿ ಆದರ ಒಂದು ಭಾಗವನ್ನು ತಮ್ಮ ಮುನ್ನುಡಿಯೊಂದಿಗೆ ೧೯೪೨ ರ ಏಪ್ರಿಲ್ಲಿನ ಹರಿಜನದಲ್ಲಿ ಅದನ್ನು ಪ್ರಕಟಿಸಿದರು. ದಕ್ಷರಾದವರ ಭಾಷ್ಯಬೇಕೆಂಬ ನನ್ನ ಸಲಹೆಯ ಬಗ್ಗೆ ಅವರು ಅದನ್ನು ನಾನೇ ಮಾಡುವುದೊಳಿತೆಂದು ನನಗೆ ಹೇಳಿದರು. ಅನಂತರ ಮಹತ್ತರವಾದ ಆ "ಚಲೇಜಾವ" ಚಳವಳ ಪ್ರಾರಂಭವಾಯಿತು. ಮತ್ತೆ ನಾವೆಲ್ಲರೂ ಪುನಃ ಜೇಲನ್ನು ಹೊಕ್ಕೆವು.

ಕಳೆದ ೭ ವರ್ಷಗಳು ಒಂದೊಂದು ಶತಕಗಳಂತೆ ತೋರುತ್ತವೆ— ನಡೆದ ಸಂಗತಿಗಳು ಅಷ್ಟು ತೀವ್ರ ಗತಿಯವೂ ಜಗತ್ತನ್ನು ಅಲ್ಲೋಲಕಲ್ಲೋಲ ಮಾಡುವಂಥವೂ ಆಗಿವೆ. ವಸ್ತುಸ್ಥಿತಿ ಸಂಪೂರ್ಣವಾಗಿ ಬದಲಾದಂತೆ ತೋರುತ್ತದೆ. ಜರ್ಮನಿ ಜಪಾನುಗಳಂತಹ ಜಗತ್ ಪ್ರಮುಖ ದಕ್ಷ ರಾಷ್ಟ್ರಗಳು ನೋಡನೋಡುತ್ತ ಮಣ್ಣುಮುಕ್ಕಿ ಹೋದವು. ಬೇರೆ ರಾಷ್ಟ್ರಗಳು ಪ್ರಾಮುಖ್ಯಕ್ಕೆ ಬಂದವಲ್ಲದೆ, ಬೇರೆ ವರ್ಗಗಳೂ ಜನರ ತಲೆಗೆ ಅಂಟಿಕೊಂಡು ಬಿಟ್ಟವೆ. ಇನ್ನು ಅಹಿಂಸೆಯ ಮಾತೆತ್ತಿದರೆ ಬಾಯ್ಬಡಿಕತನದ ಅಣಿಯುಗ ಉದಯವಾಗಿಬಿಟ್ಟದೆ.

ಕಡೆಯ ವರೆಗೆ ಗಾಂಧಿಯವರು ತಮ್ಮ ತತ್ವಗಳಿಗನುಗುಣವಾಗಿ ವಜ್ರಸ್ಥಿರರಾಗಿದ್ದರು. ಆದರೆ ಬೇರೆಯವರಿಗೆ ಹೇಗೆನಿಸಿತೋ ನಾನರಿಯೆ. ಅವರ ಮರಣದ ಬಳಿಕ ಜಗತ್ತಿನ ಪ್ರತಿಯೊಂದು ದೇಶದಲ್ಲೂ (ಸತ್ಯ ಮತ್ತು ದುಃಸತ್ವದೊಡನೆ ಅಸಹಕಾರ ಇವುಗಳ ಬಗ್ಗೆ ಎಲ್ಲೂ ಅಷ್ಟು ಲಕ್ಷ್ಯ ಕೊಡುತ್ತಿಲ್ಲವೆಂದು ನಾನು ಕಂಡಿರುವೆನೆಂಬುದನ್ನು ಹೇಳಬಹುದಾದರೂ) ಮನುಷ್ಯ ಕುಲವನ್ನು ಉಳಿಸಬೇಕಾದರೆ ಅದು ಅಹಿಂಸೆಯ ಮೂಲಕವೇ ಎಂಬುದು ಸತ್ಯವಿದೆ. ಅದು ಬಹಳ ಮುಖ್ಯವಾದ ಸಂಗತಿ ಏಕೆಂದರೆ, ಗಾಂಧಿಯವರು ಆ ಮೂರೂ ಒಂದು ಇಡಿಯ ಅವ್ಯವಚ್ಛೇದ್ಯವಾದ ಭಾಗಗಳೆಂದು ತಿಳಿದಿದ್ದರು. ಒಂದೇ ಒಂದು ಭಾಗ ಸ್ವತಂತ್ರವಾಗಿ ಉಳಿದರೆ ಅದಕ್ಕೆ ಅವರ ಪಾಲಿಗೆ ಅರ್ಥವೇ ಇಲ್ಲ.

ಇದು ನಿಜವಾಗಿಯೂ ಒಂದು ವಿಲಕ್ಷಣ ಪ್ರಪಂಚ. ಮತ್ತೊಂದು ಜಾಗತಿಕ ಕಲಹದ ಸಂಭವ ಮತ್ತು ಅನಿವಾರ್ಯತೆಗಳ ಬಗ್ಗೆ ಹಲಕೆಲವರು ಭಯವನ್ನು ವ್ಯಕ್ತಪಡಿಸುತ್ತಿರುವಾಗ, ಅಹಿಂಸಾತತ್ವಕ್ಕೆ ಎಲ್ಲೆಲ್ಲೂ ಬೇರೆ ಬೇರೆ ಪ್ರಮಾಣದ ಸಾಕ್ಷ್ಯವೆ ಸಲ್ಲಿಸುತ್ತಿರುವಾಗ— ಪ್ರತಿಯೊಂದು ದೇಶವೂ ಸ್ವಸಂರಕ್ಷಣೆ ಮತ್ತು ಸ್ವಪಾಲನೆಗೇನಾಗಿ ಎಂದು ಹೇಳುತ್ತ ಕೈತುಂಬ ಶಸ್ತ್ರಗಳನ್ನು ಹಿಡಿದು ನಿಲ್ಲಲು ತೊಡಗಿದೆ ಮತ್ತು ಮನುಷ್ಯರುಗಳು ಜಗತ್ತಿನೆದುರು ಮರ್ಯಾದೆ ಒಗಬೇಕಾದರೆ ಮತ್ತು ಶಾಂತಿ ಸುರಕ್ಷಿತತೆಗಳನ್ನು ನಿಶ್ಚಿತವಾಗಿ ನೆಲೆಗೊಳಿಸಬೇಕಾದರೆ ಅದು ಶಸ್ತ್ರಬಲದಿಂದಲೇ ಎಂದು ಕಾರಸ್ವರದಿಂದ ಸಾರುತ್ತಾರೆ. ಹಿಂಸೆ ಬಲಾತ್ಕಾರಗಳನ್ನು ಉಚ್ಚಾಟನೆ ಮಾಡುವುದೇ ರಾಷ್ಟ್ರೀಯ ಧೋರಣದ ಒಂದು ಮುಖ್ಯಾಂಗ ಎಂದು ಘೋಷಿಸಲು ಸ್ವೀಕಾರ ಮಾಡುವ ರಾಷ್ಟ್ರವೊಂದೂ ಇಲ್ಲ. ತಮ್ಮ ಎಣಿಕೆಯು ಅಹಿಂಸೆಗೆ ಅತ್ಯವಶ್ಯವಿದ್ದುದು ಆವಶ್ಯಕತೆ ಮತ್ತು ನಿರ್ಭೀತಿಗಳು ಅವಶ್ಯಕ ಎಂದು ಗಾಂಧಿಯವರು ಪದೇ ಪದೇ ಹೇಳುತ್ತಿದ್ದರು.

—[illegible]

ಡಾ. ತೇಜಬಹದೂರ ಸಪ್ರು

[illegible] ನಲ್ಲಿ ಬಹಳ ಕಾಲ ಬದುಕಿ [illegible] ಬಹಾದೂರ ಸಪ್ರುರವರು [illegible] ಅಧಿಕಾರ [illegible] ವಾದರು. [illegible] ದೇಶದ ಸ್ವಾತಂತ್ರ್ಯಕ್ಕಾಗಿ [illegible] ಎನಿಸಿದ್ದರು. [illegible] ಹೋದ ಹಾಗೆ ಅವರ [illegible] ಪ್ರಾಮಾಣಿಕತೆ ಮತ್ತು [illegible] ಬಗ್ಗದ ಸ್ವತಂತ್ರ ಬುದ್ಧಿ [illegible] ಅವರ ಬಗ್ಗೆ ಸ್ನೇಹ ಗೌರವಗಳನ್ನು [illegible] ತಿಳಿದುಕೊಂಡವರು ಬಹಳ [illegible] ಅವರು ಬದುಕಿದ್ದಾಗ ಅವರನ್ನು [illegible] ತಿಳಿದುಕೊಂಡವರೇ ಬಹಳ. [illegible] ಇಂಗ್ಲೆಂಡಿನ [illegible] ಭಾರತಕ್ಕೆ ಬಂದಾಗ ಲಾರ್ಡ ರೀಡಿಂಗರು [illegible] ರನ್ನು ಹಿಡಿಯಬೇಕೆಂದು ಮಾಡಿದ [illegible] ವನ್ನು ಕೊನೆಯಲ್ಲಿ ಬದಲಿಸುವಂತೆ [illegible] ಅವರು ನಿರ್ಭಯವಾಗಿ ವಿರೋಧಿಸಿದ್ದು [illegible] ಜನರಿಗೆ ಗೊತ್ತಿಲ್ಲ. [illegible] ಸಾಮ್ರಾಜ್ಯ ಪರಿಷತ್ತನ್ನು [illegible] ದಾಗ, ಧೈರ್ಯಗುಂದದೆ [illegible] ಪ್ರತಿಭಟಿಸಿದವರು ಅವರೇ. [illegible] ಚಕ್ರಗೋಷ್ಠಿಯಲ್ಲಿ ಭಾರತ [illegible] ಸರ್ ಸ್ಯಾಮ್ಯುಯಲ್ ಹೋರನೂ [illegible] ದಲ್ಲಿ ಹೊಣೆಗಾರಿಕೆಯಿಲ್ಲದೆ ಪ್ರಾಂತಿಕ [illegible] ತ್ರಿತೆಯನ್ನು ದೇಶದ ಮೇಲೆ ಹೇರಬಯಸಿ [illegible] ಅವರು ಪ್ರತಿಭಟಿಸಿದ್ದೂ ಅಷ್ಟೇ [illegible] ವಾಗಿತ್ತು. ಅಸಹಕಾರದ ಪ್ರಕರಣದಲ್ಲಿ ಅವರು ಕಾಂಗ್ರೆಸ್ಸನ್ನು ಬಿಟ್ಟು ಭಾರತೀಯ [illegible] ವಾದಿಗಳ ಮಂಡಲಕ್ಕೆ ಸೇರಿದರು. [illegible] ಅವರ ವಿಚಾರ ಸ್ವಾತಂತ್ರ್ಯವು ಅವರನ್ನು ಅಲ್ಲಿಯೂ ನಿಲ್ಲಗೊಡಲಿಲ್ಲವಾಗಿ, ಅಲ್ಲಿಂದಲೂ ಕಡೆಯಲ್ಲಿ ಹೊರಬಿದ್ದರು.

ಅವರ ಸತ್ಯಪ್ರೇಮ ದೇಶಪ್ರೇಮಗಳು ಗಾಂಧಿಯವರಿಗೂ ಅವರಿಗೂ ಯಾವ [illegible] ತೀಯ ಮತಭೇದವೂ ಭಂಗಿಸಲಾರದ [illegible] ಸ್ನೇಹವನ್ನು ಬೆಸೆದವು. ಪ್ರತ್ಯಕ್ಷ [illegible] ಟದ ಬಗ್ಗೆ ಅವರಲ್ಲಿ ಭಿನ್ನಾಭಿಪ್ರಾಯವಿದ್ದರೂ ಗಾಂಧಿಯವರ ಜೀವನದಲ್ಲಿ ಸಂಕಟ ಒದಗಿದಾಗ ಡಾ. ಸಪ್ರುಗಳು ತಮ್ಮ [illegible] ಶಾಸುಸಾರ ಅದರ ನಿವಾರಣೆಗೆ ನೆರವಾಗದ ಸಂದರ್ಭವೇ ಇಲ್ಲ.

ಗಾಂಧೀಜಿಯ ಜೀವನವೃತ್ತಾಂತವನ್ನು ಬರೆಯುವದಕ್ಕೋಸ್ಕರ ಅವರ ಜೀವನದ ಕೆಲ ಘಟನೆಗಳ ವಿವರಗಳನ್ನು ಕೇಳಿ ಕೊನೆ [illegible] ನಾನು ಸಪ್ರು ಅವರಿಗೆ ಬರೆದಾಗ, [illegible] ಹಾಸಿಗೆ ಹಿಡಿದಿದ್ದರೂ ಆ ಕಾರ್ಯದಲ್ಲಿ [illegible] ಎಲ್ಲ ಸಹಾಯವನ್ನು ನೀಡುವದು [illegible] ಗೊಂದು ಅಭಿಮಾನದ ಸಂಗತಿ [illegible] ಕರ್ತವ್ಯಕರ್ಮವೂ ಆಹುದೆಂದು [illegible] ಉತ್ತರ ಬಂತು. ಗಾಂಧೀಜಿಯ [illegible] ನಿವ ಗಳ ಬಗ್ಗೆ ನನಗಿಂದ [illegible] ಹಿಂಗಿಸುವ ಸಲುವಾಗಿ ಅವರು [illegible] ಗಳ ವರೆಗೆ ಮಾತಾಡುತ್ತಿದ್ದರು [illegible] ನನಗೆ ಹೃದಯ ಉಕ್ಕಿ ಬಂತು. [illegible] ಮಾಂಸಖಂಡಗಳು [illegible] ನೆರವಿಲ್ಲದೆ ಹಾಸಿಗೆಯಲ್ಲಿ [illegible] ಮಾತ್ರವಲ್ಲ, ಮಲಗಲು ಸಹಿತ ಅವರಿಗೆ [illegible] ಯಿದ್ದಿಲ್ಲ; ಅವರ ಮಾತುಗಳೂ [illegible] ಕೊಡಲುತಿದ್ದುದರಿಂದ ಅರ್ಥ [illegible] ಬೇಕಾದರೆ ಅವರ [illegible] ಚಿತವಾದ ಕಿವಿಗಳ ಸಹಾಯವೇ [illegible] ತ್ತಿತ್ತು; [illegible] ಅವರ ಬುದ್ಧಿ [illegible] ಸ್ಫಟಿಕದಂತೆ ಶುಭ್ರವಾಗಿತ್ತು. [illegible] ಚಾತ್ರಶಕ್ತಿಯೂ ಸಮೈತನ್ಯವೂ [illegible] ಸ್ಮರಣ ಶಕ್ತಿಯು [illegible] ದ್ದಿಲ್ಲ. [illegible] ವಿವರಗಳು [illegible] ನೆನಪಿಗೆ ಬರುತ್ತಿದ್ದವು. [illegible] ಕಾಗದಗಳನ್ನು [illegible] ಅವರು [illegible] ಗೋಗತೊಳ್ಳುತು [illegible]

([illegible])

ಮಹಾತ್ಮಾ ಗಾಂಧಿ ಕೊಲೆ ಖಟ್ಲೆಯಲ್ಲಿ

ಗೋಡಸೆ, ಆಪಟೆಯವರಿಗೆ ಗಲ್ಲು

ಸಾವರಕರರ ಬಿಡುಗಡೆ

ಉಳಿದ ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಮಹಾತ್ಮಾ ಗಾಂಧಿಯವರ ಕೊಲೆ ಒಳಸಂಚಿನ ಖಟ್ಲೆಯ ತೀರ್ಪನ್ನು ದಿಲ್ಲಿ ವಿಶೇಷ ನ್ಯಾಯಾಲಯದ ನ್ಯಾ. ಆತ್ಮಚರಣರು ತಾ. ೧೦ ಗುರುವಾರ ೧೧॥ ಗಂಟೆಗೆ ಓದಿ ಎಂಟು ಆರೋಪಿಗಳಲ್ಲಿ ಗಾಂಧೀಜಿಯ ಕೊಲೆಗಡಕನಾದ ನಥೂರಾಮ ಗೋಡಸೆಗೂ ಅವನ ಸಂಗಡಿಗನಾದ ನಾರಾಯಣ ಆಪಟೆಗೂ ಗಲ್ಲಿನ ಶಿಕ್ಷೆಯನ್ನು ವಿಧಿಸಿದ್ದರು. ವಿನಾಯಕ ದಾಮೋದರ ಸಾವರಕರರನ್ನು ನಿರ್ದೋಷಿಗಳೆಂದು ತೀರ್ಮಾನಿಸಲಾಯಿತು. ಉಳಿದ ೫ ಆರೋಪಿಗಳಾದ ಗೋಪಾಲ ಗೋಡಸೆ, ಮದನಲಾಲ ಪಹವಾ, ಡಾ. ದತ್ತಾತ್ರೇಯ ಪರಚುರೆ, ಶಂಕರ ಕೃಷ್ಣಯ್ಯಾ ಹಾಗು ವಿಷ್ಣು ರಾಮಚಂದ್ರ ಕರಕರೆ ಇವರಿಗೆ ಜೀವಾವಧಿ ಕಾರಾಗೃಹ ಶಿಕ್ಷೆ ಕೊಡಲ್ಪಟ್ಟಿದೆ.

ಮಾಫಿ ಸಾಕ್ಷಿದಾರನಾದ ದಿಗಂಬರ ಬಡಗೆಯನ್ನು ಬಿಡುಗಡೆಮಾಡಲಾಯಿತು.

ಶಿಕ್ಷೆಗೊಳಗಾದವರಲ್ಲಿ ಬಡಗೆಯ ಸೇವಕನಾದ ಶಂಕರ ಕೃಷ್ಣಯ್ಯನ ಶಿಕ್ಷೆಯನ್ನು ಜೀವಾವಧಿಯಿಂದ ೭ ವರ್ಷದ ಕಠಿನ ಶಿಕ್ಷೆಗಿಳಿಸಬಹುದೆಂದು ನ್ಯಾಯಾಧೀಶರು ಶಿಫಾರಸು ಮಾಡಿದ್ದಾರೆ.

ಆರೋಪಿಗಳು ತೀರ್ಪನ್ನು ಕೇಳಿದ ನಂತರ ಆರೋಪಿ ಪಂಜರದಿಂದ ಹೊರಗೊಯ್ಯಲ್ಪಡುವ ಮುಂಚೆ "ಹಿಂದೂ ಧರ್ಮಕೀ ಜಯ!" "ತೋಡಕೆ ರಹೇಂಗೇ ಪಾಕಿಸ್ತಾನ!" "ಹಿಂದೀ ಹಿಂದೂ ಹಿಂದುಸ್ತಾನ" ಮುಂತಾಗಿ ಘೋಷಣೆಗಳನ್ನು ಮಾಡಿದರು.

ನ್ಯಾಯಾಧೀಶರು ಆರೋಪಿಗಳಿಗೆ ಅಪೀಲು ಮಾಡಿಕೊಳ್ಳಲು ೧೫ ದಿನದ ಅವಧಿ ಕೊಟ್ಟಿದ್ದಾರೆ.

ತೀರ್ಪಿನ ಮುಖ್ಯಾಂಶಗಳು

ಫೂಲ್ಸ್‌ಕೇಪ ಆಕಾರದ ಟೈಪು ಮಾಡಿದ ೨೦೪ ಪುಟಗಳಷ್ಟು ಉದ್ದವಾದ ತೀರ್ಪಿನಲ್ಲಿ ನ್ಯಾಯಾಧೀಶರು ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಲು ಒಳಸಂಚು ನಡೆದುದು ಸಿದ್ಧವಾಗಿದೆಯೆಂದು ಹೇಳಿದ್ದು ಪ್ರತಿಯೊಬ್ಬ ಆರೋಪಿಯ ಮೇಲಿನ ಕೊಲೆ, ಕೊಲೆಗೆ ಕುಪ್ರೇರಣೆ, ಸಹಾಯ, ಒಳಸಂಚು, ಶಸ್ತ್ರಾಸ್ತ್ರ ನಿಯಮೋಲ್ಲಂಘನೆಯೇ ಮೊದಲಾದ ವಿವಿಧ ಆರೋಪಗಳನ್ನು ಒಂದೊಂದಾಗಿ ಉಲ್ಲೇಖಿಸಿ ಅವುಗಳಲ್ಲಿ ಸಿದ್ಧ–ಅಸಿದ್ಧ ಆರೋಪಗಳನ್ನು ಪೃಥಕ್ಕರಿಸಿದ್ದು ಸಿದ್ಧ ಆರೋಪಗಳಿಗಾಗಿ ಬೇರೆ ಬೇರೆಯಾಗಿ ಶಿಕ್ಷೆ ವಿಧಿಸಿದ್ದಾರೆ. ಆ ಎಲ್ಲ ಶಿಕ್ಷೆಗಳೂ ಏಕಕಾಲದಲ್ಲಿ ನಡೆಯಬೇಕೆಂದೂ ಕಾಣಿಸಲಾಗಿದೆ.

ವಿನಾಯಕ ದಾಮೋದರ ಸಾವರಕರರ ಮೇಲಿನ ಆರೋಪ ಮಾತ್ರ ಕೇವಲ ಬಡಗೆಯ ವಾಜ್ಮೂಲದ ಮೇಲೆ ಆಧರಿಸಿದ್ದು ಅದಕ್ಕೆ ಸರಿಯಾದ ಅನುಷಂಗಿಕ ಪ್ರಮಾಣಗಳಿಲ್ಲದುದರಿಂದ ಅವರನ್ನು ನಿರ್ದೋಷಿಯೆಂದು ಸಾರಿದರು.

ಮಾಫಿ ಸಾಕ್ಷಿದಾರನಾದ ದಿಗಂಬರ ಬಡಗೆಯ ನಿರ್ಭಯವಾದ ಸಾಕ್ಷಿಯ ಬಗ್ಗೆ ನ್ಯಾಯಾಧೀಶರು ಪ್ರಶಂಸೆಯನ್ನುವ್ಯಕ್ತಗೊಳಿಸಿ ದೀರ್ಘಕಾಲದ ಅಡ್ಡಸವಾಲನ್ನು ತಡವರಿಸದೆ ಎದುರಿಸಿ ಎಲ್ಲಿಯೂ ತಪ್ಪದೆ ಇದ್ದ ಅವನ ಮಾತುಗಳನ್ನು ನಂಬದಿರಲು ಯಾವ ಕಾರಣವೂ ಇಲ್ಲವೆಂದು ಹೇಳಿದ್ದಾರೆ.

ಪೋಲೀಸರನ್ನು ಜರೆಯುತ್ತ ನ್ಯಾಯಾಧೀಶರು, ಬಾಂಬು ಒಗೆದೊಡನೆ ಸಿಕ್ಕಿಬಿದ್ದಿದ್ದ ಮದನಲಾಲನು ಕೊಟ್ಟ ಹೇಳಿಕೆಯಿಂದಲೂ ಮುಂಬಯಿಯ ಗೃಹಮಂತ್ರಿ ಶ್ರೀ ಮುರಾರಜಿಯವರಿಗೆ ಪ್ರೊ. ಜೈನರು ಒಳಸಂಚಿನ ವಿಷಯದಲ್ಲಿ ಒದಗಿಸಿದ ವೃತ್ತಾಂತದಿಂದಲೂ ಪ್ರಯೋಜನ ಪಡೆಯಲು ಪೋಲೀಸರು ತಪ್ಪಿದರೆಂದೂ ಅವರು ಆಗಲೆ ಯೋಗ್ಯಕ್ರಮವನ್ನು ಕೈಕೊಂಡಿದ್ದರೆ ಕೊಲೆಯಾಗುವದನ್ನು ತಡೆಯಬಹುದಾಗಿತ್ತೆಂದೂ ಅಭಿಪ್ರಾಯಪಟ್ಟಿದ್ದಾರೆ.

ನ್ಯಾಯಾಧೀಶ ಆತ್ಮಚರಣರು ಮೊದಲೇ ಪ್ರಕಟಿಸಿದಂತೆ ತಾ ೧೦ ದಿನ ಸರಿಯಾಗಿ ೧೧॥ ಗಂಟೆಗೆ ಕೆಂಪುಕೋಟೆಯಲ್ಲಿ ತೀರ್ಪನ್ನು ಓದಿದರು. ನ್ಯಾಯಸ್ಥಾನದಲ್ಲಿ ಅಕ್ರಮ ವರ್ತನೆಯಾಗದಂತೆ ಎಲ್ಲ ವಿಧದ ಸಂರಕ್ಷಣೋಪಾಯಗಳನ್ನು ಕೈಕೊಳ್ಳಲಾಗಿತ್ತು. ಅನೇಕ ಬಿಗಿಯಾದ ನಿಯಮಗಳನ್ನು ಹೊರಿಸಿದ್ದರೂ ನ್ಯಾಯಸ್ಥಾನದಲ್ಲಿ ಪ್ರೇಕ್ಷಕರು ಸಾಸಿವೆ ಕಾಳು ಎಡೆಯುಳಿಯದಂತೆ ಕಿಕ್ಕಿರಿದಿದ್ದರು. ಪ್ರೇಕ್ಷಕರನ್ನು ಒಳಗೆ ಬಿಡಬೇಕಾದರೆ ಮುಂಚಿನ ದಿನವೇ ಪರವಾನಗಿ ಪತ್ರಗಳನ್ನು ಪಡೆಯಬೇಕೆಂದು ನಿಯಮಮಾಡಿದ್ದು, ಆ ಪರವಾನಗಿಯಲ್ಲಿ ಅದನ್ನು ಪಡೆದವನ ಛಾಯಾಚಿತ್ರವನ್ನು ಅಂಟಿಸಿ ದುರುಪಯೋಗಕ್ಕೆ ಅವಕಾಶವಿಲ್ಲದಂತೆ ಮಾಡಲಾಗಿತ್ತು. ಹೆಂಗಸರು ಹಣದ ಚೀಲವನ್ನು ತರಬಾರದೆಂದು ಸೂಚಿಸಲಾಗಿತ್ತಲ್ಲದೆ ಫೋಟೊ ಕೆಮರಾಗಳನ್ನು ಕೂಡ ತರಲು ಅಪ್ಪಣೆಯಿದ್ದಿಲ್ಲ. ಪ್ರವೇಶಿಸುವ ಮೊದಲು ಎಲ್ಲರನ್ನೂ ಸೂರ್ಣ ಜಡತಿಮಾಡಿಯೆ ಒಳಬಿಡಲಾಗುತಿತ್ತು.

ಪ್ರಕರಣದ ಕಥೆ

ಈ ಖಟ್ಲೆ ವಿಚಾರಣೆಯು ೧೯೪೮ ನೇ ಮೇ ೨೭ ಕ್ಕೆ ಪ್ರಾರಂಭವಾಗಿ ಆರೋಪಿಗಳಿಗೆ ಅವರವರ ಆರೋಪ ಪತ್ರಗಳನ್ನು ಕೊಡಲಾಯಿತು. ಸರಕಾರಿ ಮುಖ್ಯ ವಕೀಲರಾದ ಶ್ರೀ ಸಿ. ಕೆ. ದಫ್ತರಿಯವರು ಜೂನ ೨೨ ಕ್ಕೆ ತಮ್ಮ ವಾದವನ್ನು ಪ್ರಾರಂಭಿಸಿದರು. ಸಾಕ್ಷಿ ತೆಗೆದುಕೊಳ್ಳುವದು ಜೂನ ೨೪ ಕ್ಕೆ ಪ್ರಾರಂಭವಾಗಿ ೮೪ ದಿನಗಳ ವರೆಗೆ ನಡೆಯಿತು.

ಸರಕಾರೀ ಪರವಾಗಿ ೧೪೯ ಸಾಕ್ಷಿಗಳು ಸಾದರಪಡಿಸಲ್ಪಟ್ಟವು. ಅವರು ಹೇಳಿದ ಸಾಕ್ಷಿಯ ವಿವರವು ಟೈಪುಹೊಡೆದ ೭೯೭ ಫುಲ್‌ಸ್ಕೇಪ ಹಾಳೆಗಳಷ್ಟಾಗಿವೆ. ಸರಕಾರೀಪರವಾಗಿ ೩೫೪ ಕಾಗದಪತ್ರಗಳೂ ಆರೋಪಿಪರವಾಗಿ ೧೧೮ ಕಾಗದಪತ್ರಗಳೂ ಹಾಜರಮಾಡಲ್ಪಟ್ಟವು. ೮೦ ವಸ್ತುಗಳನ್ನು ಕೋರ್ಟಿನಲ್ಲಿ ಪ್ರದರ್ಶಿಸಲಾಯಿತು.

ಮಹಾತ್ಮಾ ಗಾಂಧಿಯವರ ಕೊಲೆಯ ಸಂಬಂಧದಲ್ಲಿ ೧೨ ಜನರ ಮೇಲೆ ಆಪಾದನೆ ಇಟ್ಟು ಶ್ರೀ ಆತ್ಮಚರಣರ ವಿಶೇಷ ನ್ಯಾಯಾಲಯದಲ್ಲಿ ಖಟ್ಲೆ ಹಾಕಲಾಗಿತ್ತು. ಈ ೧೨ ಆರೋಪಿಗಳಲ್ಲಿ ದಿಗಂಬರ ರಾಮಚಂದ್ರ ಬಡಗೆ ಇವನು ವಿಚಾರಣೆಯ ಪ್ರಾರಂಭದಲ್ಲಿ ಮಾಫೀ ಸಾಕ್ಷಿದಾರನಾದುದರಿಂದ ಅವನನ್ನು ಕ್ಷಮಿಸಿ ಬಿಡುವ ಆಜ್ಞೆ ಮಾಡಲಾಗಿತ್ತು. ಆರೋಪಿಗಳಾದ ಗಂಗಾಧರ ಎಸ್. ದಂಡವತೆ, ಗಂಗಾಧರ ಜಾಧವ ಮತ್ತು ಸೂರ್ಯದೇವ ಶರ್ಮಾ ಇವರು ಫರಾರಿ ಇದ್ದು ಪೋಲೀಸರಿಂದ ಬಂಧಿಸಲ್ಪಟ್ಟಿದ್ದಿಲ್ಲ. ಉಳಿದ ಆರೋಪಿಗಳು ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದರು. ಅವರ ಹೆಸರ ಮತ್ತು ಅವರ ಮೇಲೆ ಹೊರಿಸಲ್ಪಟ್ಟಿದ್ದ ಆರೋಪಗಳು ಇಂತಿವೆ.

೧ ನಥುರಾಮ ವಿನಾಯಕ ಗೋಡಸೆ, ವಯಸ್ಸು ೩೭. ಇವನ ಮೇಲೆ ಕೊಲೆ, ಕೊಲೆಯ ಒಳಸಂಚು, ಅಕ್ರಮವಾಗಿ ಸ್ಫೋಟಕದ್ರವ್ಯ ಹಾಗೂ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡ ಆರೋಪವಿಡಲಾಗಿತ್ತು.

೨ ನಾರಾಯಣ ದತ್ತಾತ್ರೆಯ ಆಪಟೆ, ವಯಸ್ಸು ೩೪, ಇವನ ಮೇಲೆ ಕೊಲೆಗೆ ಕುಪ್ರೇರಣೆ ಮಾಡಿದ, ಕೊಲೆಯ ಒಳಸಂಚುಮಾಡಿದ ಮತ್ತು ಅಕ್ರಮವಾಗಿ ಶಸ್ತ್ರಾಸ್ತ್ರ ಮತ್ತು ಸ್ಫೋಟಕ ದ್ರವ್ಯಗಳನ್ನು ಇಟ್ಟುಕೊಂಡ ಆರೋಪವಿಡಲಾಗಿತ್ತು.

೩ ವಿಷ್ಣು ರಾಮಚಂದ್ರ ಕರಕರೆ, ವಯಸ್ಸು ೩೫. ಇವನ ಮೇಲೆ ಕೊಲೆಗೆ ಕುಪ್ರೇರಣೆ, ಕೊಲೆಯ ಒಳಸಂಚು ಮಾಡಿದ ಹಾಗೂ ಅಕ್ರಮವಾಗಿ ಶಸ್ತ್ರಾಸ್ತ್ರ, ಸ್ಫೋಟಕ ದ್ರವ್ಯವನ್ನು ಇಟ್ಟುಕೊಂಡ ಆರೋಪವಿಡಲಾಗಿತ್ತು.

೪ ಮದನಲಾಲ ಕಾಶ್ಮೀರಿಲಾಲ ಪಹವಾ, ವಯಸ್ಸು ೨೦. ಇವನ ಮೇಲೆ ಕೊಲೆಗೆ ಕುಪ್ರೇರಣೆ, ಕೊಲೆಯ ಒಳಸಂಚು, ಅಕ್ರಮವಾಗಿ ಸ್ಫೋಟಕ ದ್ರವ್ಯ ಹಾಗೂ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡದ್ದು, ಹಾಗೂ ಜೀವಕ್ಕೆ ಮತ್ತು ಆಸ್ತಿಗೆ ಅಪಾಯ ಸಂಭವಿಸುವ ರೀತಿಯಲ್ಲಿ ಸ್ಫೋಟ ಮಾಡಿದ್ದು ಈ ಆರೋಪಗಳನ್ನಿಡಲಾಗಿತ್ತು.

೫ ಶಂಕರ ಕ್ರಿಷ್ಟಯ್ಯಾ, ವಯಸ್ಸು ೨೦ ಇವನ ಮೇಲೆ ಕೊಲೆಗೆ ಕುಪ್ರೇರಣೆ, ಕೊಲೆಯ ಒಳಸಂಚು, ಅಕ್ರಮವಾಗಿ ಶಸ್ತ್ರಾಸ್ತ್ರ, ಸ್ಫೋಟಕ ದ್ರವ್ಯಗಳನ್ನು ಇಟ್ಟುಕೊಂಡ ಆರೋಪವಿಡಲಾಗಿತ್ತು.

೬ ಗೋಪಾಲ ವಿನಾಯಕ ಗೊಡಸೆ, ವಯಸ್ಸು ೨೭, ಇವನ ಕೊಲೆಗೆ ಕುಪ್ರೇರಣೆ, ಕೊಲೆಯ ಒಳಸಂಚು, ಅಕ್ರಮವಾಗಿ ಶಸ್ತ್ರಾಸ್ತ್ರ ಹಾಗೂ ಸ್ಫೋಟಕ ದ್ರವ್ಯಗಳನ್ನು ಇಟ್ಟುಕೊಂಡ ಆರೋಪವಿಡಲಾಗಿತ್ತು.

೭ ವಿನಾಯಕ ದಾಮೋದರ ಸಾವರಕರ, ವಯಸ್ಸು ೬೫. ಇವರ ಮೇಲೆ ಕೊಲೆಗೆ ಕುಪ್ರೇರಣೆ, ಕೊಲೆಯ ಒಳಸಂಚು ಈ ಆರೋಪಗಳನ್ನು ಇಡಲಾಗಿತ್ತು.

೮ ದತ್ತಾತ್ರಯ ಸದಾಶಿವ ಪರಚುರೆ, ೪೯. ಇವನ ಮೇಲೆ ಕೊಲೆಯ ಕುಪ್ರೇರಣೆ ಕೊಲೆಯ ಒಳಸಂಚು, ಶಸ್ತ್ರಾಸ್ತ್ರಗಳನ್ನು ಸಾಗಿಸಲು ಸಹಾಯ ಮಾಡಿದ ಆರೋಪಗಳನ್ನಿಡಲಾಗಿತ್ತು.

ನಥುರಾಮಗೋಡಸೆ ಇವನು ಮೊದಲು ಸಿಂಪಿ ಕೆಲಸ ಮಾಡುತ್ತಿದ್ದನು. ೧೯೪೭ ರಲ್ಲಿ ಇವನು ಹಿಂದೂ ಮಹಾಸಭೆಯ ಅಧ್ಯಕ್ಷರಾಗಿದ್ದ ಸಾವರಕರರ ಸಂಪರ್ಕದಲ್ಲಿ ಬಂದು ಅವರ ಖಾಸಗಿ ಕಾರ್ಯದರ್ಶಿಯಾಗಿ ಹಿಂದು ಮಹಾಸಭೆಯ ಪ್ರಚಾರಾರ್ಥವಾಗಿ ದೇಶದಾದ್ಯಂತ ಅವರ ಸಂಗಡ ಪ್ರವಾಸ ಮಾಡಿದನು. ಮೊದಲು ಇವನು ಆರ್. ಎಸ್. ಎಸ್ ದಲ್ಲಿದ್ದನು. ಮುಂದೆ ಆರ್. ಎಸ್. ಎಸ್ ದೊಡನೆ ಮತಭೇದವುಂಟಾದ್ದರಿಂದ ಅದರಿಂದ ಹೊರಗೆ ಬಂದು ೧೯೪೨ ರಲ್ಲಿ ಹಿಂದು ರಾಷ್ಟ್ರದಲ ಎಂಬ ಹೊಸ ಸಂಘಟನೆ ಮಾಡಿದನು.

೧೯೪೪ ರಲ್ಲಿ ಇವನು ಅಗ್ರಣಿ ಎಂಬ ಮರಾಠಿ ವೃತ್ತಪತ್ರಿಕೆಯದ್ದು ಹೊರಡಿಸಿದನು. ಮುಂದೆ ಅದನ್ನು ನಿಲ್ಲಿಸಿ ಹಿಂದೂ ರಾಷ್ಟ್ರ ಎಂಬ ಹೆಸರಿನ ಬೇರೆ ಪತ್ರಿಕೆಯನ್ನು ತೆಗೆದನು.

ನಾರಾಯಣ ಡಿ. ಆಪ್ಟೆ, ಬಿ. ಎಸ್‌ಸಿ. ಬಿ. ಟಿ; ಮೊದಲು ಅಹಮ್ಮದನಗರದಲ್ಲಿ ಒಂದು ಶಾಲೆಯಲ್ಲಿ ಮಾಸ್ತರನಿದ್ದ ರೈಫಲ್ ಕ್ಲಬ್ಬನ್ನು ಪ್ರಾರಂಭಿಸಿದನು. ನಥುರಾಮ ಗೋಡಸೆಯ ಎರಡು ಪತ್ರಿಕೆಗಳಲ್ಲಿ ಇವನ ಸಹಕಾರವಿತ್ತಲ್ಲದೆ ಇವನ ಸಹಕಾರದಿಂದಲೆ ಹಿಂದೂ ರಾಷ್ಟ್ರದಲವನ್ನು ಗೋಡಸೆ ಸ್ಥಾಪಿಸಿದ್ದನು.

ವಿಷ್ಣು ರಾಮಚಂದ್ರ ಕರಕರೆ ಇವನು ಅಹಮ್ಮದನಗರದವನಿದ್ದು ಅಲ್ಲಿ ಒಂದು ಹೋಟಲನ್ನಿಟ್ಟಿದ್ದನು. ಅಹಮ್ಮದನಗರದಲ್ಲಿ ೧೯೪೦ ನೇ ಇಸ್ವಿಯಲ್ಲಿ ರೈಫಲ್ ಕ್ಲಬ್ಬನ್ನು ಸ್ಥಾಪಿಸಲು ಆಪ್ಟೆನಿಗೆ ಸಹಾಯ ಮಾಡಿದನು.

ಮದನಲಾಲ ಪಹವಾ ಪಾಕಿಸ್ತಾನದಲ್ಲಿಯ ಪಶ್ಚಿಮ ಪಂಜಾಬದ ಒಬ್ಬ ನಿರಾಶ್ರಿತನಿದ್ದು ಮಹಾತ್ಮಾ ಗಾಂಧಿಯವರ ಕೊಲೆಯಾದ ದಿನಕ್ಕಿಂತ ೧೦ ದಿನ ಪೂರ್ವದಲ್ಲಿ ಜಾನೇವರಿ ೨೦ ಕ್ಕೆ ಮಹಾತ್ಮರ ಪ್ರಾರ್ಥನಾಸಭೆಯಲ್ಲಿ ಅವರಿಂದ ೫೦ ಯಾರ್ಡು ಅಂತರದ ಮೇಲ ಬಾಂಬ ಸ್ಫೋಟವಾದ ಕೂಡಲೇ ಬಂಧಿಸಲ್ಪಟ್ಟನು.

ಶಂಕರ ಕಿಷ್ಟಯ್ಯ ಇವನು ಬಡಗೆಯ ಮನೆಯಲ್ಲಿ ಜೀತದಾಳಾಗಿದ್ದನು.

ಗೋಪಾಲ ವಿನಾಯಕ ಗೋಡಸೆ ನಾಥುರಾಮನ ತಮ್ಮ. ಕಳೆದ ಯುದ್ಧದಲ್ಲಿ ಹಿಂದೀ ಸೈನ್ಯವನ್ನು ಸೇರಿದ್ದನು. ನಂತರ ಪುಣೆಯ ಸತ್ತರ ಇರುವ ಖಡಕಿ ಮದ್ದಿನ ಕಾರಖಾನೆಯಲ್ಲಿ ನೌಕರಿ ಮಾಡುತ್ತಿದ್ದನು.

ದತ್ತಾತ್ರೆಯ ಸದಾಶಿವ ಪರಚುರೆ ಗ್ವಾಲ್ಹೇರದಲ್ಲಿಯ ಓರ್ವ ಡಾಕ್ಟರ ಮತ್ತು ಸುಪ್ರಸಿದ್ಧ ಮಹಾಸಭಾ ಕಾರ್ಯಕರ್ತರು.

ಅಸಹಾಯ ಶೂರತೆ

(೯ನೆಯ ಪುಟದಿಂದ)

ಜನರನ್ನು ಗಾಂಧಿಯವರ ಮಾದರಿಯ ಅಹಿಂಸಾಮನಸ್ಕರನ್ನಾಗಿ ಮಾಡಲು ದೇಹಮನಗಳ ಉಜ್ಜ್ವಶಿಕ್ಷಣ ಬೇಕು. ಕೆಂಡ ಗಳಿಗೆಯಲ್ಲಿ ಅಹಿಂಸಾತ್ಮಕ ಸಮಾಜವನ್ನು ಯಾರೂ ಸೃಜಿಸಿ ಬಿಡಲಾರರು. ಲಿಖಿತೇತಿಹಾಸದ ಉಷಃಕಾಲದಿಂದ ಇಂದಿನವರೆಗೂ ಮಾನವರು ಹಿಂಸೆಯನ್ನು ಹೊಗಳುತ್ತ ಬಂದಿದ್ದಾರೆ ಮತ್ತು ಧೀರರ ಅಹಿಂಸೆ ಮತ್ತು ಅದರೊಟ್ಟಿಗೇ ಇರಬೇಕಾದ ದೌರ್ಜನ್ಯದೊಡನೆ ಅಸಹಕಾರ ಇವಕ್ಕೆ ಅತ್ಯಲ್ಪ ಪ್ರೋತ್ಸಾಹ ಕೂಡ ಸಿಕ್ಕಿಲ್ಲ.

ನಿಃಶಸ್ತ್ರೀಕರಣದ ಮಾತುಗಳೆಲ್ಲ ವ್ಯರ್ಥವಾಗುತ್ತಿರುವುದನ್ನು ಎಣಿಸಿದರೆ ದುಃಖವಾಗುತ್ತದೆ. ಯಾವ ರಾಷ್ಟ್ರವೂ ಏಕಪಕ್ಷೀಯ ನಿಃಶಸ್ತ್ರೀಕರಣದ ಅಪಾಯಕರ ಸನ್ನಿವೇಶವನ್ನು ತಂದುಕೊಳ್ಳಲು ಸಿದ್ಧವಿಲ್ಲ ಮತ್ತು ಸರ್ವಾನುಮತಿಯಿಂದ ಜಾಗತಿಕ ನಿಃಶಸ್ತ್ರೀಕರಣವಾಗುವುದು ಬಯಲಾಸೆ ಎಂದೇ ತೋರುತ್ತದೆ.

ನಮಗೇ ನಾವು ಸತ್ಯವಂತಿಕೆಯಿಂದ ನಡೆದುಕೊಳ್ಳಬೇಕೆಂದರೆ, ನಾವು ಸಂಕಟಕರವಾದ ವಿಕಲ್ಪವನ್ನು ಎದುರಿಸಬೇಕೆಂದು ನನ್ನ ಎಣಿಕೆ. ಜಾಗತಿಕ ಸರ್ವಾನುಮತಿ ಅಶಕ್ಯವಾದಲ್ಲಿ, ನೈತಿಕ ಮತ್ತು ಭೌತಿಕ ವಿನಾಶದಿಂದ ಮಾನವ ಕುಲವನ್ನು ಬದುಕಿಸಲು ಇರುವ ಒಂದೇ ಒಂದು ಮಾರ್ಗವೆಂದರೆ ಗಾಂಧೀ ನಿರ್ದಿಷ್ಟಮಾರ್ಗ ಎಂದು ಯಾವುದಾದರೊಂದು ದೇಶವು ನಿಷ್ಠೆಯಿಂದ ನಂಬಿದ್ದೇ ಆದರೆ, ಆಗ ಅದು ತಾನೊಂದೇ ಆ ದಾರಿಯಲ್ಲಿ ಹೋಗಬೇಕಾಗಿ ಬಂದರೂ ಆ ಅಪಾಯಕರ ಸನ್ನಿವೇಶದಲ್ಲಿ ಹೊಕ್ಕು ಅದಕ್ಕನುಸಾರವಾಗಿ ತನ್ನ ನಾಗರಿಕರಿಗೆ ಶಿಕ್ಷಣಕೊಡಲು ತಕ್ಕ ಕ್ರಮಗಳನ್ನು ಕೈಕೊಳ್ಳಬೇಕು. ಅದೇನೂ ಅಷ್ಟು ಸರಳವಾದ ಕೆಲಸವಲ್ಲ. ನಾವು ಸದ್ಯದ ಸಮಾಜದ ರಚನೆಯನ್ನು ಪುನಃ ರಚಿಸಿ ರೂಪಿಸಬೇಕು. ನಮ್ಮ ಯೋಗ್ಯಾಯೋಗ್ಯವಿವೇಕ ಆಮೂಲಾಗ್ರವಾಗಿ ಬದಲಾಗಬೇಕು. ನಮ್ಮ ಆರ್ಥಿಕ ಪ್ರಗತಿಯ ಕಲ್ಪನೆ ಪುನಃಪರಿಶೀಲಿತವಾಗಬೇಕು. ನಿಜವಾಗಿಯೂ ಅದೊಂದು ಅದ್ಭುತ ಕಾರ್ಯ, ಅತ್ಯಂತ ಧೈರ್ಯದ ಕೆಲಸ. ಅದನ್ನು ಮಾಡಲು ನಾವು ಸಿದ್ಧರಿಲ್ಲದಿದ್ದರೆ ನಾವು ಅಹಿಂಸಾ ದೇವತೆಯನ್ನು ಪವಿತ್ರಾಹ್ವಾನದಿಂದ ಪೂಜಿಸುತ್ತ ಕುಳಿತಿರುವುದರಿಂದ ಬಹಳ ಪ್ರಯೋಜನವಾಗಲಾರದೆಂದು ಕಾಣುತ್ತದೆ. ವಸ್ತುತಃ ಅದು ಕೇವಲ ಅಪ್ರಯೋಜಕವಾದೀತಲ್ಲದೆ ಕಪಟವಾಗಿಯೂ ಕಂಡೀತು.

ತಮ್ಮ ಕನಸಿನ ಅಹಿಂಸಾತ್ಮಕ ಸಮಾಜದ ಸಂಪೂರ್ಣ ಚಿತ್ರ ಗಾಂಧಿಯವರೆದುರಿತ್ತು ಎಂದು ನನ್ನ ಊಹೆ. ಅಂಥ ಸಮಾಜದಲ್ಲಿ ಸಾಧ್ಯ ಸಾಧನಗಳು ಒಟ್ಟೊಟ್ಟಾಗಿಯೇ ಸಾಗಬೇಕು. ಅಹಿಂಸೆಯು ಪರಪೀಡಾ ಲಭ್ಯವಾದ ಗುರಿಗಳನ್ನು ಬಿಡುವುದಷ್ಟೇ ಅಲ್ಲದೆ, ಅನೃತ ಮತ್ತು ಹಿಂಸಕ ಸಾಧನಗಳ ಬಳಕೆಯನ್ನು ಹೊರಗಿಟ್ಟಿದೆ. ಯಾವ ರೂಪದಲ್ಲೇ ಆಗಲಿ, ಒಮ್ಮೆ ನಾವು ಹಿಂಸೋಪಯೋಗಕ್ಕೆ ಅವಕಾಶ ಕೊಟ್ಟೆವೆಂದರೆ, ಆಗ ಅಷ್ಟರ ಮಟ್ಟಿಗೆ ನಾವು ಸಾತ್ವಿಕ ಸಾಧನಗಳ ಪಾವಿತ್ರ್ಯಕ್ಕೆ ತಿಲತರ್ಪಣ ಕೊಟ್ಟಂತಾಗುವುದು. ಹಿಂಸೆ ಎಲ್ಲೂ ಸ್ವಲ್ಪಕ್ಕೆ ನಿಲ್ಲದು, ಅದು ಸರ್ವಭಕ್ಷಕನಾಗುವುದೇ ಸೈ.

—ಕೈಲಾಸನಾಥ ಕಟಜು

ಡಾ. ತೇಜಬಹದೂರ ಸಪ್ರು

(ಒಂಬತ್ತನೆಯ ಪುಟದಿಂದ)

ಆಗ ೧೯೦೫ ರಿಂದಾರಂಭಿಸಿ ತಮ್ಮ ಎಲ್ಲ ಪತ್ರವ್ಯವಹಾರಗಳ ರಾಶಿಯೂ ನನಗೆ ಲಭ್ಯವಾಗುವದೆಂದೂ ಹೇಳಿ ಕಳಿಸಿದರು. ಇತರರು ನನಗೆ ಕೊಡಲರದ ಎಷ್ಟೋ ವಸ್ತುಗಳನ್ನು ಅವರು ಒದಗಿಸಿ ಕೊಡಬಹುದೆಂದು ಆಶಿಸಿದ್ದೆ. ಆದರೆ ಅದು ಕೈಗೂಡಲಿಲ್ಲ. ಜನವರಿ ೨೦ ನೆ ದಿನ ಸಂಜೆ ನಾನು ಕೊನೆಯ ಬಾರಿ ಅವರನ್ನು ಕಂಡಾಗ ಅವರ ಕಣ್ಣಲ್ಲಿ ಗುರುತು ಹಿಡಿದ ಬಗೆ ಮುಂದ ಕಾಂತಿ ಮಾತ್ರ ಕಾಣಿಸಿತು. ಆದರೆ ಮರಣದ ಕೆಲವೇ ತಾಸುಗಳ ಮುಂಚಿತವಾಗಿ, ಅಂದು ರಾತ್ರಿ, ಅವರು ಪುನಃ ಶಕ್ತಿಸಂಗ್ರಹ ಮಾಡಿಕೊಂಡು, ತಮಗೆ ಗಾಂಧೀಜಿ ಹೋದಲ್ಲಿ ಹೋಗುವ ಆಸೆಯಿದೆ, ಏಕೆಂದರೆ ಅಲ್ಲಿ ಯಾವ ನೋವುಗಳೂ ಇಲ್ಲವೆಂದು ಹೇಳಿದ ಸಂಗತಿ ಆ ಮೇಲೆ ನನ್ನ ಕಿವಿಗೆ ಮುಟ್ಟಿತು.

ಅಸಹಕಾರ ಕಾಲಕ್ಕಿಂತ ಹಿಂದಿನ ನಮ್ಮ ಮುಂದಾಳುಗಳು ಬ್ರಿಟಿಶ ಲಿಬರಲ್ ಪರಂಪರೆಯಲ್ಲಿ ಬೆಳೆದವರಾಗಿದ್ದರು. ಅವರಲ್ಲಿ ಡಾ. ಸಪ್ರು ಅವರು ಶ್ರೇಷ್ಠತಮ ವ್ಯಕ್ತಿಗಳೆನ್ನಲಡ್ಡಿಯಿಲ್ಲ. ಸಪ್ರು ಅವರ ವ್ಯಕ್ತಿತ್ವದಲ್ಲಿ ಮೂರ್ತವಾದ ಮತ್ತು ರಚನಾತ್ಮಕ ಮುತ್ಸದ್ದಿತನಕ್ಕೆ ಅತ್ಯವಶ್ಯವಾದ ಉದಾರ ಮತಪ್ರಣಾಲಿಯ ಆ ಘನತರ ಸಾಧನೆಗಳನ್ನು–ಸ್ಪುಟ ವಿಚಾರ, ತೂಕವಾದ ನಿರ್ಣಯಶಕ್ತಿ, ನ್ಯಾಸಂಗೆ, ಉದ್ಯೋಗಶೀಲತೆ, ಪೂರ್ವ ಪರಂಪರೆಯ ಬಗ್ಗೆ ಗೌರವ ಇವೆಲ್ಲ ಗುಣಗಳನ್ನು ಈಚೆಗೆ ಕ್ರಾಂತಿಕಾರಕಪುರುಷರು ಮೂಲೆಗೊತ್ತಿಬಿಟ್ಟಿದೆ. ಅವರ ಉದಾಹರಣೆಯನ್ನು ಅನುಸರಿಸಿ ಇಂದು ರಾಷ್ಟ್ರಕ್ಕೆ ಅತ್ಯಗತ್ಯವಾಗಿರುವ ಆ ಗುಣಗಳ ಸಾಧನೆಗೆ ಇಂದಿನ ಯುವ ಜನಾಂಗವು ಮುಂದಾಗಲೆಂದು ಹಾರೈಸೋಣ.

ಹರಿಜನ ವಸತಿ
ಕಿಂಗ್ಸವೇ
ದಿಲ್ಲಿ ೨೭.೧.೪೯

—ಪ್ಯಾರೇಲಾಲ

ಮಹಿಳಾ ಲೋಕ

ತಾಯ್ತಂದೆತನ

ಸ್ಕಾಟ್ ಶಿಕ್ಷಣದ ವಿಷಯವಾಗಿ ಜರಿವಲ್ಲಿ ಜೋಧಪುರದ ಸ್ಕಾಟ್ ಕಮಿಶನರಾದ ಡಾ ಕೆ. ಎಸ್. ಕಿಣಿಯವರು, "ಸಾಮಾನ್ಯ ಹಿಂದೀಯ ಮಗು ಸಾಧುವೂ ನಿರ್ಲಕ್ಷ್ಯ ಬುದ್ಧಿಯುಳ್ಳದ್ದೂ ಆಗಿದೆ ಮತ್ತು ಸಾಮಾನ್ಯ ಹಿಂದೀಯ ತಾಯ್ತಂದೆಯರು ತಮ್ಮ ಮಗುವಿನ ಪ್ರತಿಭಟನಾಬುದ್ಧಿ, ರಚನಾತ್ಮಕ ಪ್ರವೃತ್ತಿ, ಕುತೂಹಲಭಾವ, ಹೆಮ್ಮೆ, ಸಾಮೂಹಿಕ ಜೀವನದ ಆಸೆ, ಆತ್ಮ ಸಮರ್ಥನೆ, ಸಂಗ್ರಹಣಬುದ್ಧಿ ಅನುಕರಣ ಪ್ರವೃತ್ತಿ ಮತ್ತು ಕ್ರೀಡಾಪೇಕ್ಷೆಗಳನ್ನು ಬಲಾತ್ಕಾರದಿಂದ ಹತ್ತಿಕ್ಕುತ್ತಾರೆ. ಮಕ್ಕಳಲ್ಲಿಯ ಸ್ವಾಭಾವಿಕ ಪ್ರವೃತ್ತಿಗಳನ್ನು ಕೊಲ್ಲದೆ ಇಡೀ ಮಾನವನನ್ನು ನಿರ್ಮಿಸುವ ಅವನ್ನು ಸಂಸ್ಕರಿಸಿ ಉದಾತ್ತಗೊಳಿಸಲು ಪ್ರಯತ್ನಿಸುವಂತೆ ತಾಯ್ತಂದೆಯರಿಗೆ ಎಲ್ಲಕ್ಕಿಂತ ಮೊದಲು ವಿದ್ಯಾಭ್ಯಾಸ ಮಾಡಿಸಬೇಕು" ಎಂದು ಹೇಳಿರುವುದು ಅತಿ ಮಹತ್ವದ ಮಾತು. ಈ ಮಾತನ್ನು ಗಮನಕ್ಕೆ ತಂದುಕೊಳ್ಳುವವರು ಬಹಳ ವಿರಳ—ಇಲ್ಲವೆಂದೇ ಹೇಳಬೇಕು. ತಾಯ್ತಂದೆತನವೆಂದರೆ ಬಹಳ ಸುಲಭದ ಕೆಲಸ; ಮಕ್ಕನ್ನು ತಮ್ಮ ಇಷ್ಟ ಬಂದ ರೀತಿಯಲ್ಲಿ ಉಣಿಸಿ ಉಡಿಸಿ ಸಾಲೆಗಟ್ಟಿಬಿಟ್ಟರೆ ತಮ್ಮ ಕೆಲಸ ಮುಗಿಯಿತು ಎಂದು ತಿಳಿದಿರುವ ಮೂರ್ಖರ ಸಂಖ್ಯೆ ಹೆಚ್ಚಿರುವುದು ಅತ್ಯಂತ ದುಃಖದ ಸಂಗತಿ. ಹಿಂದುಸ್ಥಾನದ ಮಕ್ಕಳ ಸಂಘಟನೆಗಳ ಮುಖಂಡರು ಈ ವಿಷಯದಲ್ಲಿ ತಾಯ್ತಂದೆಯರಿಗೆ ಅವರ ಅತಿ ಮುಖ್ಯವೆನಿಸುವ ಕರ್ತವ್ಯನ್ನು ಬೋಧಿಸುವುದು ಅನಿವಾರ್ಯವಾಗಿದೆ.

ಮಕ್ಕಳ ದೇಹ ಮತ್ತು ಮನಸ್ಸುಗಳ ದುರ್ಬಲತೆಯನ್ನು ಅಲಕ್ಷಿಸಿ ಇಲ್ಲವೆ ತಂತಮ್ಮ ಅವಿವೇಕಕ್ಕೆ ಯೋಗ್ಯವೆನಿಸಿದಂತೆ ಬಲಾತ್ಕರಿಸಿ ಅವರ ಭವಿತವ್ಯತೆಯನ್ನು ಅಂದಗೆಡಿಸುವ, ಅಯಶಸ್ವಿಯಾಗಿಸುವ ತಾಯ್ತಂದೆತನಕ್ಕಿಂತ ಹೆಚ್ಚಿನ ಪಾಪವನ್ನು ಮನುಷ್ಯಜಾತಿ ಮಾಡಲಾರದು. ಮಕ್ಕಳ ಹಿತದತ್ತ ಲಕ್ಷ್ಯ ಕೊಡದುದರಿಂದಲೇ ಆಧುನಿಕ ದಾಂಪತ್ಯಜೀವನ ಅದೃಢವೂ ಅತೃಪ್ತಿಕರವೂ ಆಗಲು ಕಾರಣವಾಗಿದೆ. ಧರ್ಮದೃಷ್ಟಿ ಮಕ್ಕಳ ಜೀವಿತದತ್ತ ಹರಿದರೆ ದಂಪತಿಗಳ ಪ್ರೇಮ ಶುದ್ಧಿ, ಆತ್ಮ ಶುದ್ಧಿ, ಕರ್ತವ್ಯ ದೃಷ್ಟಿಯ ಉದಯ, ಸಜ್ಜನಿಕೆ ಮತ್ತು ಔದಾರ್ಯ ಸಹಜವಾದ ಆನಂದ ಈ ಎಲ್ಲವೂ ಸಾಧಿಸುವುವೆಂಬುದು ಮನಃಶಾಸ್ತ್ರಸಿದ್ಧವಾದ ಮಾತು.

ಮನುಷ್ಯಜಾತಿಯ ಸುಖವಿರುವುದು ಬುದ್ಧಿವಿಕಾಸದಲ್ಲಿ; ಬುದ್ಧಿವಿಕಾಸವೇ ಸರ್ವ ವಿಕಾಸಕ್ಕೂ ಆದಿ ಕಾರಣ. ಆದುದರಿಂದ ಶರೀರಕ್ಕೇ ಪೋಷಣೆ ಕೊಡುವುದಕ್ಕಿಂತ ಮನಸ್ಸಿಗೆ ಪೋಷಣೆ ಕೊಡುವುದು ಮುಖ್ಯವೆಂಬುದನ್ನು ತಾಯ್ತಂದೆಯರು ತಿಳಿದುಕೊಳ್ಳುವುದು ನಾಡಿನ ಹಿತದ ದೃಷ್ಟಿಯಿಂದಲೂ ಸ್ವತಃ ಅವರದೇ ಹಿತಕ್ಕಾಗಿಯೂ ಅತ್ಯವಶ್ಯಕ

ಎಲ್ಲಾದರೂ ಒಂದೆರಡು ಹುಡುಗಿಯರ ಶಾಲೆಯಲ್ಲಿ ಶಿಶುಪಾಲನೆಯನ್ನು ಒಂದು ವಿಷಯವೆಂದು ಅರ್ಧಜ್ಞರಾದ ಮೇಡಂಗಳು ಹೇಳಿ ಕೊಡುತ್ತಿರುವುದನ್ನು ನೋಡಬಹುದಲ್ಲದೆ, ಮತ್ತೆಲ್ಲೂ ಶಿಶುವಿನ ಮನಃ ಪೋಷಣೆಯ ವಿಜ್ಞಾನವನ್ನು ಮಹತ್ವ ಕೊಟ್ಟು ಪ್ರಸಾರ ಮಾಡುವ ವ್ಯಕ್ತಿ, ಸಂಘ, ಸಂಸ್ಥೆ ಯಾವುದೂ ಕಾಣಸಿಗುವುದಿಲ್ಲ ಸರಕಾರದ, ಸಮಾಜದ ಬಲ್ಲಿದರು ವಿದ್ಯಾಶಾಸ್ತ್ರವಿಶಾರದರು ಮತ್ತು ಉಪಾಧ್ಯಾಯರು ಇತ್ತ ಲಕ್ಷ್ಯ [illegible] ತರುಣ ತರುಣಿಯರಿಗೆ ಬೋಧಿಸಲು ತಕ್ಕ ಸಾಹಿತ್ಯ, ಭಾಷಣ, ರೇಡಿಯೋ ವ್ಯವಸ್ಥೆ ಪತ್ರ ಪುಸ್ತಕ, ಚಲಚ್ಚಿತ್ರ ಇತ್ಯಾದಿ ಸಾಧನಗಳನ್ನು ಒದಗಿಸಲು ನೆರವಾಗುವುದು ಸ್ವತಂತ್ರ ಹಿಂದುಸ್ಥಾನದ ಪ್ರಜಾಹಿತ ದೃಷ್ಟಿಯಿಂದ ಅತ್ಯಂತ ಪ್ರಾಥಮಿಕವೂ ಮಹತ್ವಪೂರ್ಣವೂ ಎನಿಸಿದ ಸಾಮಾಜಿಕ ಕರ್ತವ್ಯ.

—ಹಿರಿಯಕ್ಕ

ಕರುಣಾಪಾತ್ರತೆ

ಮಹಿಳೆಯರ ಬಾಳು ನಿಜವಾಗಿಯೂ ಕರುಣಾಸ್ಪದ ಎಂಬುದನ್ನು 'ಜಯಂತಿ' ಯ ಫೆಬ್ರುವರಿ ಸಂಚಿಕೆಯಲ್ಲಿ ಶ್ರೀಮತಿ ಇಂದಿರಮ್ಮನವರು ಬರೆದ ಪತ್ರ ಓದಿದ ನಂತರ ಮಹಿಳೆಯಾದ ನನಗೆ ಸಾಕ್ಷಾತ್ಕಾರವಾಯಿತು. ಗೆಳತಿಯರೇ, ಕಲಿತ ಹೆಂಗಸರ ಸಹವಾಸದಿಂದ ತಂದೆ, ಗಂಡ, ಮಕ್ಕಳ ಅಪ್ರೀತಿಯನ್ನು ಗಳಿಸುವುದಲ್ಲದೆ ಅವರೆದುರು ಉಪಹಾಸ್ಯತೆಗೂ ಗುರಿಯಾಗುವುದು ನಿಜವೆಂದು ಮೇಲಿನ ಅಮ್ಮನವರ ಬರಹ ಓದಿ ನೀವೆಲ್ಲ ಒಮ್ಮಿಂದೊಮ್ಮೆ ತೀರ್ಮಾನಿಸಿಬಿಡಬಹುದು. ಏಕೆಂದರೆ, ಸಹೃದಯರೂ, ಉದಾರರೂ ಪರೇಂಗಿತಜ್ಞರೂ ಜ್ಞಾನಿಗಳೂ ಆದ ಕರುಣಹೃದಯಿಗಳಾದ ಗಂಡಸರು ಹೆಣ್ಣನ್ನು ಹೊಗಳಿದ ಹತ್ತಾರು ಮಾತುಗಳನ್ನು ನಿಜವೆಂದೇ ನಂಬಿ ಸ್ತ್ರೀ ಜಾತಿಗನ್ನಿಸಿ ಹೇಳಿಕೊಂಟ ದುರಹಂಕಾರವಲ್ಲದೆ ಗಂಡಸರ ಉಪಕಾರ, ಮೇಧಾವಿತ್ವ, ಸಹಾನುಭೂತಿಗಳನ್ನು ಸ್ಮರಿಸುವ ಒಂದು ವಾಕ್ಯವಾದರೂ ಇಲ್ಲ ಇದರ ಮೇಲೆ, "ಉತ್ತಮ ಸಾಹಿತಿಯಾದವನು ಸಹೃದಯ, ದಯಾನ್ವಿತ, ಕರುಣಾಳುವಾಗಿರಲೇಬೇಕು. ಈ ಎಲ್ಲ ಗುಣಗಳನ್ನು ನಾವು ಹೆಣ್ಣಿನಲ್ಲಿ ಕಾಣುತ್ತೇವೆ" ಎಂಬ ಈ ಮಹಾಶಯರಿಗೆ ರಸಿಕ ಗಂಡಸಿದ್ದಿದ್ದರೆ 'ಎಲ್ಲೇ, ಕಾಳಿದಾಸನದು, ಶೇಕ್ಸ್‌ಪಿಯರನದು ಸ್ತ್ರೀಲಿಂಗವೆಂದು ತೋರುತ್ತದೆ' ಎಂದು ನಕ್ಕು ಕನಿಕರ ತಾಳದೆ ಇರುತ್ತಿರಲಿಲ್ಲ. ಸ್ವಲ್ಪ ಸಿಟ್ಟು ಬಂದರೆ "ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ" ಎಂದೂ ಬೈದೂ ಬಿಡುತ್ತಿದ್ದ,— ಎನಿಸುವುದಿಲ್ಲವೆ? ಇಂಥ ಛಲದಂಕಮಲ್ಲಿಯರ ಮತ್ಸರ ಬುದ್ಧಿ ಮತ್ತು ಅತಾರ್ಕಿಕತೆ ತಾಯ್ತನದ ಹಿರಿಮೆ ಗಳಿಸಿದ ಸ್ತ್ರೀಯರಲ್ಲಿ ನೀವೆಂದಾದರೂ ಕಂಡಿದ್ದೀರಾ? ಆದರೆ ಬರಹಗಾರ್ತಿಯರ ಒಂದು ಮಾತು ನಿಜ: ನಾವೆಲ್ಲ ಸೋಮಾರಿಗಳು. ಆ ಸೋಮಾರಿತನವನ್ನು ದಯವಿಟ್ಟು ಬಿಟ್ಟು ಬರೆಯುವುದರ ಮೊದಲು ಚೆನ್ನಾಗಿ ಸಾಹಿತ್ಯ, ವೇದಾಂತಾದಿ ವಾಙ್ಮಯವನ್ನು ಅಭ್ಯಾಸ ಮಾಡಿ ಮುಂದಡಿಯಿಡಬೇಕೆಂದು ನಮ್ರ ವಿನಂತಿ.

---ಸುಭದ್ರೆ

ಆಸ್ಟ್ರೇಲಿಯದ ಗೃಹಿಣಿಯರು

ಆಸ್ಟ್ರೇಲಿಯದ ಮೆಲ್ಬೋರ್ನ್ ಚರ್ಚಿನ ಮುಖ್ಯ ಗುರು ರೆವರೆಂಡ್ ರೋಸೀ ವಿಲ್ಸನ್ನರು ತಮ್ಮ ವಿಶಾಲ ಅನುಭವದಿಂದ ಅರಿದ ಸತ್ಯವನ್ನು ಸಭೆಯೊಂದರ ಮುಂದೆ ಮಂಡಿಸಿದಾಗ ಇಂದಿನ ಹುಡುಗಿಯರು ಶಠರೂ ಅಜ್ಞರೂ ಆಗುತ್ತಿರುವುದನ್ನು ತಾವು ಬಹಳ ಕಡೆ ಕಂಡಿರುವುದಾಗಿ ಹೇಳಿದರು.

ಈ ಮಾತು ಬಿಳಿಯರಲ್ಲಿ ವಿಶೇಷತಃ ಸತ್ಯವಿದೆ. ಸಾಕ್ಷರರಾದವರೆಲ್ಲ ವಿದ್ಯಾವತಿಯರೆಂಬುದು ದಡ್ಡತನ. ನಿರಕ್ಷರರಿಗಿಂತ ಆ ಅರ್ಧಜ್ಞೆಯರು ಭಯಂಕರರು. 'ಸಾಕ್ಷರಾ ವಿಪರೀತಾ ಶ್ಚೇತ್ ರಾಕ್ಷಸಾ ಏವ ಕೇವಲಂ' ಎಂಬ ಮಾತು ಇಂಥವರಿಗೆ ಹೆಚ್ಚಾಗಿ ಅನ್ವಯಿಸುತ್ತದೆ ಇಂಥ ಗೃಹಿಣಿಯರು ಗೃಹಿಣಿಯ ಕರ್ತವ್ಯವನ್ನೂ ತಿಳಿಯರು, ಗೃಹಸ್ಥನ ಕರ್ತವ್ಯವನ್ನೂ ಅರಿತಿರುವುದಿಲ್ಲ- ಕೇವಲಾದಿಗಳಾದ ಬಕಾಸುರೀ ವೃತ್ತಿಯವರಾಗಿ ಇವರು ಯಾವ ಕೌಟುಂಬಿಕ ಹೊಣೆಯನ್ನು ಹೊರಲೂ ಒಲ್ಲದೆ ಹಟಮಾರಿಗಳೂ ತಪ್ಪೊಪ್ಪಿಕೊಂಬ ಧೈರ್ಯವಿಲ್ಲದ ಒರಟರೂ ಆಗುತ್ತಿರುವರು. ಮನಬಂದಂತೆ ಇರಬೇಕೆಂಬ ಇವರಿಗೆ ಧರ್ಮವೂ ಇಲ್ಲ ಕಾಯಿದೆಯ ಬಗ್ಗೆ ಮರ್ಯಾದೆಯೂ ಇಲ್ಲ, ತಮ್ಮ ಯೋಗ್ಯತೆಯ ಮತ್ತು ಭಾವೀ ಜೀವನದ ಗುರಿಯ ಅರಿವೂ ಇಲ್ಲ. ಬಟ್ಟೆ ಬರೆ ಮುಂತಾದ ಅಲಂಕರಣದ ಸಾಮಗ್ರಿಗೆ ದೀಪಕ್ಕೆ ಪತಂಗ ಮುತ್ತಿದಂತೆ ಮುತ್ತಿ ಮನೆ ಹಾಳರಾಗುತ್ತಾರೆ. ಆಹಾರ, ಪಾಕ, ಆರೋಗ್ಯ, ಶಿಶುಸಂಗೋಪನ ಇವಾವುದರ ಬಗ್ಗೂ ಆಸಕ್ತಿ ಮತ್ತು ಜ್ಞಾನವಿಲ್ಲದೆ ಈ ಗೃಹಣಿಯರು ಗೃಹಣೀ ಶಬ್ದಕ್ಕೆ ಅವಮಾನವಾಗಿ ಬಾಳುತ್ತಿರುವರಂತೆ!



ಕೆಲದಿನಗಳ ಹಿಂದೆ ಕಾಬೂಲಿನ ಒಂದು ವಿದ್ಯಾನಿಲಯದಲ್ಲಿ ಸಂಸ್ಕೃತ ಭಾಷೆಯನ್ನು ನಿರ್ಬಂಧದಿಂದ ಕಲಿಸುವ ಏರ್ಪಾಡು ಮಾಡಲಾಗಿದೆಯೆಂದು ಸುದ್ದಿ ಬಂದಿತ್ತು. ಭಾರತದಲ್ಲಿಯ ಮುಸ್ಲಿಮರಲ್ಲನೇಕರು ಅರಬ್ಬೀಮಯ ಉರ್ದುವಿಗೆ ಅಂಟಿಕೊಳ್ಳುವ ಹಟ [illegible] ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಸುವ ಕೆಲಸಕ್ಕೆಳಿಯುದು. ಅನೇಕರನ್ನು ಆಶ್ಚರ್ಯಗೊಳಿಸಿರಬಹುದು. ಭಾರತದಲ್ಲಿ ಅಫಗಾಣಿಸ್ತಾನದ ರಾಯಭಾರಿಗಳು ಈ ಬಗ್ಗೆ ವಿವರಿಸುತ್ತ ಅಫಗಾಣಿಸ್ತಾನದಲ್ಲಿರುವ ಪ್ರಕೃತೀ ಭಾಷೆ ಸಂಸ್ಕೃತ ಕುಲದ ಭಾಷೆಯಾಗಿದ್ದು ಆ ಪ್ರಾಚೀನ ಭಾಷೆಯ ಅಭ್ಯಾಸದಿಂದ ಪ್ರಸ್ತುತದ ಬೆಳವಣಿಗೆಗೆ ಅನುಕೂಲವಾದೀತೆಂದು ಅಭಿಪ್ರಾಯಪಟ್ಟದ್ದರು.

ಅಫಗಾಣಿಸ್ತಾನವೆಂದರೆ ಭಾರತಕಾಲದ ಗಾಂಧಾರವೆಂದು ಎಲ್ಲರಿಗೂ ಗೊತ್ತು. ನಿಜವಾಗಿ ಕೇಳಿದರೆ, ಆಕ್ಸಸ್ ನದಿಯ ವರೆಗಿನ ಪ್ರದೇಶ ಮೊಗಲರ ಕಾಲದ ವರೆಗೂ ಭಾರತದ ಭಾಗವಾಗಿತ್ತು. ಅಷ್ಟೇಕೆ, ಇರಾಣದಲ್ಲಿ ಕ್ಯಾಸ್ಪಿಯನ್ ಅಥವಾ ಕಶ್ಯಪ ಸಮುದ್ರದ ವರೆಗೂ ಸಂಸ್ಕೃತದ ಪ್ರಭಾವವಿದ್ದು ಪರ್ಶಿಯನ್ ಮತ್ತು ಸಂಸ್ಕೃತ ಭಾಷೆಗಳು ತೀರ ಸಮೀಪವಾಗಿದ್ದವು. ಇಸ್ಲಾಮದ ವಿಸ್ತರಣದ ನಂತರವೇ ಅರಬ್ಬಿ ಪ್ರಭಾವದಿಂದ ಪರ್ಶಿಯನ್ ಮತ್ತು ಪುಶ್ತೊ ಭಾಷೆಗಳು ತಮ್ಮ ಸಂಸ್ಕೃತ ಸಾಮೀಪ್ಯವನ್ನು ಬಹಳ ಮಟ್ಟಿಗೆ ಕಳೆದುಕೊಂಡವು. ಅಫಗಾಣಿಸ್ತಾನದ ಕಾಬೂಲ ನದಿ ವೇದಕಾಲದ ಕುಭಾ ನದಿಯೆಂದೂ ಗೊಮೆಲ ನದಿ ಗೋಮತಿ ನದಿಯೆಂದೂ ಡಾ. ರಘುವೀರರು ಹೇಳುತ್ತಾರೆ.

ಭಾರತದಲ್ಲಿ ಸಂಸ್ಕೃತದ ಅಪಭ್ರಂಶಗಳು ನಾನಾ ರೂಪ ಧರಿಸಿರುವಂತೆ ಪುಶ್ತೊ ಭಾಷೆಯಲ್ಲಿ ಉಳಿದಿರುವ ಅನೇಕ ಸಂಸ್ಕೃತಶಬ್ದಗಳೂ ವಿಕೃತವಾಗಿವೆ. ಆದರೂ ಅವುಗಳ ಮೂಲವನ್ನು ಈಗಲೂ ಸುಲಭವಾಗಿ ಕಂಡುಹಿಡಿಯಬರುವಂತಿದೆ. ಉದಾಹರಣೆಗಾಗಿ "ಕಶ್ಯಪ" (ಆವೆ) ಶಬ್ದ ಪುಶ್ತೊವಿನಲ್ಲಿ ಕಶ್ಪ ಅಥವಾ ಕಶಪ ಆಗಿ ಉಳಿದಿದೆ. ಸಂಸ್ಕೃತದ "ಕುಬ್ಜ" ಅಂದರೆ ಗೂನು ಬೆನ್ನಿನವ ಎಂಬದು "ಕೋಝು" ಎಂದಾಗಿದೆ

[illegible] ಉಲ್ಲೇಖಿಸಬಹುದು. [illegible] "[illegible]" ಎಂದರೆ [illegible] ಆದರ ಸಂಸ್ಕೃತ [illegible] "[illegible]" ಸಂಸ್ಕೃತದ "[illegible]" ([illegible]) ವಾಗಿದ್ದರೆ ಸಂಸ್ಕೃತದ "[illegible]" "ಮೇಢು" ಆಗಿದೆ. [illegible] ಎಂದೇ ಪ್ರಕೃತಿ ಶಬ್ದ "[illegible]" ಎಂದೂ "ಸೀಮಾ" ಎಂಬದೆ [illegible] ಎಂಬರ್ಥದಲ್ಲಿ "ಸಿಮ್" ಎಂದೂ [illegible] ಎಂಬರ್ಥದಲ್ಲಿ "ಕ್ಷೇಲ್" ಎಂದೂ "ಜ್ಯಾ" (ಬಿಲ್ಲಿನ ಹೆದೆ) ಎಂಬುದು [illegible] ಎಂದೂ "ಪಯ" (ಹಾಲು) [illegible] ಎಂದೂ "ಬಂಧನ್" ಎಂಬುದ [illegible] ದಲ್ಲಿ "ವಾಂಡನಯ್" ಎಂದೂ [illegible] "ಮಯೂರ" "ಮ್ಯುವರ್" ಎಂದೂ [illegible] ಟ್ಟಿವೆ.

ಶರೀರದ ಅಂಗಗಳ [illegible] ಬಹಳ ಸಾಮ್ಯವನ್ನು ಕಾಣುತ್ತೇವೆ. [illegible] ಜಂಘಾ= ಝುಂಗನ್ [illegible] ಚರ್ಮನ್=ಚರ್ಮನ್, [illegible] ಕಕ್ಷ ಕ್ರ:

ಡಾ. ರಘುವೀರರು ಇನ್ನೂ [illegible] ಗಳನ್ನೂ ಧಾತುಗಳನ್ನೂ ಉದಾಹರಿಸಿ [illegible] ಸಂಸ್ಕೃತದ "ವ್ಯಯ" ಪುಶ್ತೊವಿನ [illegible] ವಾಗಿದೆ. ಉಚ್ಚ= ಉಚತ್. [illegible] ತಮಸ್= ತಮು, ತುಲ್ಯ= ತ್ಮಲ. [illegible] ಗಳಲ್ಲಿ ರ ಎಂಬ ವ್ಯಂಜನ ಲ ಆಗಿ [illegible] ವದುಂಟು. ದೇವರ= ಲೇವೈ [illegible] ನರ್ದ= ನರಲ (ಕೂಗು) ಎಂದಾ[illegible] ಹೋಗಿ ಮ್ರಾಮವಾಗಿದ್ದರೆ [illegible] ವೇಶವಾಗಿದೆ. ಸಂಸ್ಕೃತದ [illegible] ನಲ್ಲಿ ಕಾಳಲವಾಗಿ ವಿಪರ್ಯಸ್ತವಾಗಿದೆ.

ಈ ಪ್ರಕಾರ ಭಾಷಾಸಾಮ್ಯ [illegible] ದವುಗಳನ್ನು ಅರಿತುಕೊಂಡರೆ [illegible] ಹೊರೆಯ ರಾಷ್ಟ್ರಗಳೊಡನೆ [illegible] ಬಂಧನದಿಗಿಯಾಗಲು ಅನು[illegible]

ಹೈದರಾಬಾದ ಸಂಸ್ಥಾನ[illegible] ಕಾರರನ್ನು ಬಂಧಿಸಿ [illegible] ಗಿದೆ. ಇದಲ್ಲದೆ ೨೦೦೧ [illegible] ಮುಂಬೈ ಪ್ರಾಂತದ [illegible] ಸಲಾಗಿದೆ, ಇವರೆಲ್ಲರ ಪ್ರಕ[illegible] ಲಿಸಲಾಗುತ್ತಿದೆ. ಇವರ ಮೇಲಿರು[illegible] ಗಳ ಬಗ್ಗೆ ಸಾಕಷ್ಟು ಸಾಕ್ಷಿ ಪು[illegible] ದಿದ್ದರೆ ಅಂಥವರನ್ನು ಬಿಡುಗಡೆ [illegible] ಗುತ್ತದೆ. ಉಳಿದವರನ್ನು [illegible] ಲಯದ ಮುಂದೆ ನಿಲ್ಲಿಸಲ[illegible] ರಜಾಕಾರನನ್ನಾದರೂ [illegible] ಪಾರುಮಾಡಿಲ್ಲ. ಎಂದು ಸರ[illegible] ಹಿರಿಯೋಲಗದಲ್ಲಿ ತಿಳಿಸಿದ[illegible]

ಗೋಪಾಲಕೃಷ್ಣ ಗೋಖಲೆ

[illegible]

ಗುರುಲಾಭ

[illegible] ದೊರೆತ್ತುದು ಒಂದು ಭಾಗ್ಯ. ಆ ... ಮಹದೇವ ಗೋವಿಂದ ರಾನಡೆ ... [illegible]

... ಸಹಿತೆಯವರು ಗೋಖಲೆಯವರನ್ನು [illegible] ನಿಯುಕ್ತರನ್ನಾಗಿ ಮಾಡಿದರು. ಆ ಸಭೆಯ ಪ್ರತಿನಿಧಿಯಾಗಿ ಸರಕಾರದೆದುರು ... ಪಕ್ಷ ಮಂಡಿಸುತ್ತಿತ್ತು. ಈ ಹೊಣೆಯ ಕಾರ್ಯವು ಗೋಖಲೆಯವರ ... ಬಂದಿತು. ಸಾರ್ವಜನಿಕ ಕಾರ್ಯದ [illegible] ಮೊದಲಾಯಿತು. ಗೋಖಲೆಯವರ ... ಜನಿಕ ಸೇವೆ.

... ಸಮಯಕ್ಕೆ ಒಂದು ಘಟನೆ ಒದಗಿತು. ೧೮೮೭–೮೮ ಕಾಲವದು. ಡೆಕ್ಕನ ಎಜ್ಯುಕೇಶನ್ ಸೊಸಾಯಿಟಿಯ ಹಿರಿ ಸದಸ್ಯರಾದ ತಿಲಕ–ಅಗರಕರ ಇವರಲ್ಲಿ ತೀವ್ರ ಮತಭೇದವಾಯಿತು. ಅದರ ಪರಿಣಾಮವಾಗಿ ತಿಲಕ ಮತ್ತು ಅವರ ಇನ್ನೊಬ್ಬ ಸಹಾಯಕ ನಾಮಜೋಶಿ ಇವರು ಸೊಸಾಯಿಟಿಯಿಂದ ಹೊರಬಿದ್ದರು. ತಿಲಕರು ಅಲ್ಲಿ ಗಣಿತಶಾಸ್ತ್ರ ಕಲಿಸುತ್ತಿದ್ದರು. ನಾಮಜೋಶಿಯವರು ಧನ ಸಂಗ್ರಹಿಸುವಲ್ಲಿನ ಸಂಘಟನೆ ಮಾಡುತ್ತಿದ್ದರು. ಈ ಇಬ್ಬರು ಪ್ರಭಾವಿ ಸದಸ್ಯರು ಹೊರಬಿದ್ದ ಕೂಡಲೆ, ಆ ಹೊಣೆಯುಳ್ಳ ಸ್ಥಳಕ್ಕೆ ಗೋಖಲೆಯವರೆ ಯೋಗ್ಯರೆಂದು ಅವರನ್ನು ಕೆಲಸಕ್ಕೆ ಹಾಕಲಾಯಿತು. ತಾನಾಗಿಯೆ ಒದಗಿದ ಯಾವ ಪ್ರಸಂಗದಿಂದಲೂ ಎಂದೂ ಹಿಂಜರಿಯದ ರೀತಿ ಗೋಖಲೆಯವರದು. ಹೊಣೆ ಬೇಕಾದಷ್ಟಿರಲಿ, ತಮ್ಮಲ್ಲಿ ಅದಕ್ಕೆ ತಕ್ಕ ಯೋಗ್ಯತೆ ಇರಬೇಕೆಂದು ತಿಳಿದು ಅದನ್ನು ಗಳಿಸುತ್ತಿದ್ದರೇ ಹೊರತು, ಕೈಲಾಗದು ... [illegible]

ಬಹುಮುಖ ಜೀವನ

ತಿಲಕ, ನಾಮಜೋಶಿ ಅವರು ಹೊರಬಿದ್ದ ನಂತರ ಉಳಿದ ಹಿರಿಯರು ಅಗರಕರರು. [illegible] ಗೋಖಲೆಯವರ ಮೇಲೆ ಬಹುವಾಗಿತ್ತು. ಅವರು ಸುಧಾರಕರು. "ಸುಧಾರಕ" ಎಂಬ ಪತ್ರಿಕೆ ನಡೆಸುತ್ತಿದ್ದರು. ಗೋಖಲೆಯವರಿಗೆ ದಿನದಿನಕ್ಕೆ ಹೊಣೆ ಹೆಚ್ಚತೊಡಗಿತು. ಕಾಲೇಜದಲ್ಲಿ ಕಲಿಸಬೇಕು ಸಾರ್ವಜನಿಕ ಸಭೆಯ ಕಾರ್ಯದರ್ಶಿತ್ವ, ಡಿ. ಇ. ಸೊಸೈಟಿಯ ಕಾರ್ಯದರ್ಶಿತ್ವ, "ಸುಧಾರಕ"ದಲ್ಲಿ ಬರೆವುದು–ಸಂಘಟನೆ ಮಾಡುವುದು ಇತ್ಯಾದಿ ಮಾಡುವುದಕ್ಕೆ ಅವರಿಗೆ ಉತ್ಸಾಹ ಎಲ್ಲಿಂದ ಬರುತ್ತಿತ್ತೋ ತಿಳಿಯದು. ಅದರೆ ಹೆಚ್ಚು ಕೆಲಸವಾಯಿತೆಂದು ಯಾವುದರಲ್ಲಿಯೂ ಜಾರಿಹೋಗುವ ಪ್ರಯತ್ನವಿದ್ದಿಲ್ಲ. ಜಾರಿಹೋಗುವುದಾದರೂ ಹೇಗೆ ರಾನಡೆಯಂತಹ ಗುರುಗಳ ದಕ್ಷ ನೋಟದಿಂದ? ಅವರು ಸಾರ್ವಜನಿಕ ಕಾರ್ಯವನ್ನೆಲ್ಲ ಗೋಖಲೆಯವರಿಂದ ಮಾಡಿಸುತ್ತಿದ್ದರಲ್ಲದೆ, ಸರಕಾರಕ್ಕೆ ಮನವಿ ಒಪ್ಪಿಸುವಂಥ ಮುಂತಾದ ಬೌದ್ಧಿಕ ಕಾರ್ಯಗಳನ್ನೂ ಮಾಡಿಸುತ್ತಿದ್ದರು

ಗೋಖಲೆಯವರ ಕಾರ್ಯ ಸಮಾಜದ ಮುಂದೆ ಬರತೊಡಗಿತು. ಸಾಮಾಜಿಕ ಮನ್ನಣೆ ಬರತೊಡಗಿತು. ಅದರ ಮೂಲಕ ಆಗಿನ ಕಾಂಗ್ರೆಸದಲ್ಲಿ(೧೮೯೦) ಒಂದು ಗೊತ್ತುವಳಿಯ ಪರವಾಗಿ ಮಾತನಾಡಲು ಔತಣ ಬಂದಿತು. ಪಕ್ಷಮಂಡನೆಯ ಕಾರ್ಯವನ್ನು ಬಹು ಯಶಸ್ವಿಯಾಗಿ ಮಾಡಿದರು. ಈ ಸಂದರ್ಭವು ಇನ್ನೊಬ್ಬ ಹಿರಿಯರ ಸಂಬಂಧ ತಂದಿತು. ಆ ಹಿರಿಯರೇ ದಾದಾಭಾಯಿ ನವರೋಜಿ.


ಗೋಖಲೆ ಇನ್ನು ತಮ್ಮ ಶಕ್ತಿಯಿಂದಲೇ ಮುಂದೆ ಬರಲೆಂದು ಹಾರೈಸಿಯೋ ಏನೋ ಎನ್ನುವಂತೆ ೧೯೦೧ ರಲ್ಲಿ ರಾನಡೆಯವರು ತಮ್ಮ ಶಿಷ್ಯನನ್ನು ಹರಸಿ ಕಾಲವಾದರು. ಅದು ಗೋಖಲೆಯವರಿಗೆ ತುಂಬಿಬಾರದ ನಷ್ಟ. ಹೊಣೆ ಹೆಚ್ಚಿದಂತೆಲ್ಲ ಕಾಲೇಜದಿಂದ ರಜೆ ಪಡೆಯಬೇಕಾಗಿ ಬರತೊಡಗಿತು. ಸಾರ್ವಜನಿಕ ಕಾರ್ಯವೇ ಹೆಚ್ಚಾಗತೊಡಗಿದುದರಿಂದ ೧೯೦೨ ರಲ್ಲಿ ಫರ್ಗೂಸನ್ ಕಾಲೇಜದಿಂದ ೧೮ ವರುಷದ ಸೇವೆಯನಂತರ ನಿವೃತ್ತರಾದರು.

೧೯೦೫ ರಲ್ಲಿ ಅವರು ಕಾಂಗ್ರೆಸ ಅಧ್ಯಕ್ಷಪದ ಅಲಂಕರಿಸಿದರು. ಅವರ ಜೀವನದಲ್ಲಿ ಈ ವರುಷವು ಅತ್ಯಂತ ಮಹತ್ವದ್ದು. ದೇಶಸೇವಕರಿಗೆ ಉಚ್ಚ ಪದವಿ ಕಾಂಗ್ರೆಸ ಅಧ್ಯಕ್ಷಪದ. ಅದು ಬಾಳಿನಲ್ಲಿಯ ಪ್ರತಿಫಲ. ತಮ್ಮ ಕಾರ್ಯವು ಮುಂದುವರಿಯಬೇಕಾದರೆ, ಭಾರತಕ್ಕೆ ಸೇವಕರ ಅಗತ್ಯವಿದೆ ಎಂದು ಅದೇ ವರುಷ "ಭಾರತ ಸೇವಕ ಸಮಾಜ" ಸ್ಥಾಪಿಸಿದರು. ಆಗ ಒಬ್ಬರು ಇವರಿಗೆ ಅಂದರು; "ಇನ್ನೂ ನೀವು ಮಾಡುವ ಕಾರ್ಯ ಬಹಳವಿದೆ ಎಂದು." ಅಹುದು ಊಟಕ್ಕೆ ಕೂತಾಗ ಪೂರ್ಣ ಹೊಟ್ಟೆತುಂಬುವ ಮುನ್ನವೇ ಏಳಬೇಕು. ಅತಿಥಿಯಾದಾಗ ಒಂದು ದಿನ ಮೊದಲೆ ಆತಿಥ್ಯದ ಮುಕ್ತಾಯ ಮಾಡಿಕೊಳ್ಳಬೇಕು" ಎಂದು ಉತ್ತರ ಕೊಟ್ಟರು.

ಶಾಸನ ಸಭೆಗಳಲ್ಲಿಯು ಅವರ ಕಾರ್ಯ ಸರ್ವಶ್ರುತವಿದೆ. ಉಪ್ಪಿನ ಕರದ ಬಗ್ಗೆ ಅವರು ಮಾಡಿದ ಭಾಷಣ ಸುಪ್ರಸಿದ್ಧವಿದೆ. ಜನತೆಯ ಪಕ್ಷ ಮಂಡಿಸಲು ಇಂಗ್ಲಂಡದ ತನಕ ಹೋಗಿ ಸಾಕ್ಷಿ ಕೊಟ್ಟು ಬಂದುದು, ಅದರ ಪರಿಣಾಮ ಮಿಂಟೋ ಸುಧಾರಣೆಗಳಲ್ಲಿ ಮೂಡಿದೆ. ಸೇವೆಯ ಕರೆ ಎಲ್ಲಿಂದಲೇ ಬರಲಿ ಅಲ್ಲಿ ನಿಸ್ಸಂದೇಹವೆಂಬುದು ಅವರ ಹಂಬಲು. ಅದಕ್ಕಾಗಿ ೧೯೧೨ರಲ್ಲಿ ದಕ್ಷಿಣ ಆಫ್ರಿಕೆಗೆ ಹೋಗಿಬಂದರು. ಅಲ್ಲಿಯೇ ಗಾಂಧಿ ಅವರ ಗುರುವಾದುದು. ಇಷ್ಟೇ ಅಲ್ಲ, ಆ ದರ್ಶನದಲ್ಲಿಯೇ ಗಾಂಧಿಯವರು ಇವರನ್ನು ರಾಜಕೀಯ ಗುರುವೆಂದು ಮಾಡಿಕೊಂಡರು. ಗಾಂಧೀಜಿಯ ಬಗ್ಗೆ ಗೋಖಲೆ ಹೀಗೆ ಅಂದಿದ್ದಾರೆ. "ನನ್ನ ಗುರು ರಾನಡೆ, ಹಿರಿಯ ನವರೋಜಿ. ಇವರಂತೆ ಮತ್ತೆ ಯಾರಾದರೂ ನನ್ನ ಮೇಲೆ ಆಧ್ಯಾತ್ಮಿಕ ಪರಿಣಾಮ ಮಾಡಿದ್ದರೆ ಅವರು ಗಾಂಧಿ" ಎಂದು.

ಗಾಂಧೀಜಿಯಂತಹ ಧುರೀಣರನ್ನು ರಾಜಕೀಯದಲ್ಲಿ ಕೊಟ್ಟುದು, ಭಾರತ ಸೇವಕ ಸಮಾಜದಂಥ ಸಂಸ್ಥೆಯನ್ನು ಸಮಾಜಕ್ಕೆ ಕೊಟ್ಟುದು ಗೋಖಲೆಯವರ ಜೀವ. ಅವೆರಡರ ಫಲ ನಮಗೆ ಸಿಕ್ಕಿದಾಗ ಗೋಖಲೆಯವರ ಜೀವನದ ಹಿರಿಮೆ ತಿಳಿಯುವುದು.





ರೂಪರಂಗ

ಕಲೆಯ ಪ್ರಯೋಜನ

ಕಲೆ ಆನಂದಕ್ಕಾಗಿ ಎಂಬುದು ನಿರ್ವಿವಾದವಾದುದು, ಆದರೆ ಯಾರ ಆನಂದಕ್ಕಾಗಿ? ಎಲ್ಲರ ಆನಂದಕ್ಕಾಗಿಯೂ ಹೌದೇ? ಎಲ್ಲರಿಗೂ ಒಂದು ಕಲಾಕೃತಿಯಿಂದ ಆನಂದವಾದೀತೆ? ಅಥವಾ ಬಹು ಜನರು ಆನಂದಪಟ್ಟಾಕ್ಷಣ ಒಂದು ಆಕೃತಿ ಕಲಾಕೃತಿಯೆನಿಸೀತೆ? ಆನಂದದಿಂದ ಏನು ಪ್ರಯೋಜನ? ಸತ್ಪ್ರವೃತ್ತಿಯ ಪ್ರಚೋದನವೋ ದುಷ್ಪ್ರವೃತ್ತಿಯದೋ? ದುಷ್ಪ್ರವೃತ್ತಿಯನ್ನು ಪ್ರಚೋದಿಸುವ, ಮನಸ್ತೃಪ್ತಿ, ಆನಂದ, ಸಮಾಧಾನಗಳನ್ನು ಕೊಡುವ ಕಲಾಕೃತಿಯಲ್ಲಿರುವುದು ಕಲೆಯೇ? ಅದು ಕಲೆಯೇ ಆಗಿದ್ದರೆ ಅಂಥದನ್ನು ನಾವು ಬೆಳೆಯಗೊಡಬೇಕೆ? ಅದಕ್ಕೆ ಸ್ವಾತಂತ್ರ್ಯ ಕೊಡಬೇಕೆ? ಎಂಬ ಪ್ರಶ್ನೆಗಳಿಗೆ ಉತ್ತರ ಕೊಟ್ಟುಕೊಂಡಿರುವ ಕಲೆಗಾರ ಕಲೆಗಾರ್ತಿಯರು ಬೆರಳಿನಿಂದ ಎಣಿಸುವಷ್ಟು ಜನರು ಇರಬಹುದು. ಸಾಮಾಜಿಕರಲ್ಲಿ ಕೆಲ ಜನರಿಗೆ ನಷ್ಟಪಟ್ಟ ಮೇಲಾದರೂ ಮೇಲಿನ ಒಂದೆರಡು ಪ್ರಶ್ನೆಗಳು ಅವಗತವಾಗಿರಬಹುದು.

ಈಗ ಸಂಗೀತ ನರ್ತನಾದಿ ಎಲ್ಲ ಕಲೆಗಳನ್ನೂ ಸಾಮಾಜಿಕರ ಶಿಕ್ಷಣ ಸಾಧನಗಳೆಂದು ತಿಳಿಯಲಾಗುತ್ತಿದೆ. ಇದೊಂದು ಪ್ರಬೋಧ ಚಂದ್ರೋದಯವೆಂದೇ ತಿಳಿಯಬೇಕು. ಆದರೆ ಸ್ವಾಚ್ಛಂದ್ಯವನ್ನು ಸ್ವಾತಂತ್ರ್ಯವೆಂಬ ಕೆಲ ವೈತಂಡಿಕ ಕಲಾವಿಲಾಸಿಗಳು ಹೇಳುವುದು ಮತ್ತು ನಡೆದುಕೊಳ್ಳುವುದು ನಂಬಲರ್ಹವಾದುದು, ವಿಚಾರಪರಿಪ್ಲುತವಾದುದು, ಶ್ರೇಷ್ಠ ಎಂದುಕೊಂಡು ಕಲಿತವರೂ ದೂರದೃಷ್ಟಿ ರಹಿತರಾಗಿ ಸಭ್ಯತೆಯನ್ನು ಮಡಿವಂತಿಕೆ, ಸನಾತನ ಗೊಡ್ಡುತನ ಎಂದು ವಿಡಂಬಿಸಿ ಎಳೆಮನಗಳನ್ನು ಹದಗೆಡಿಸುತ್ತಿರುವುದರತ್ತ ತಂತಮ್ಮ ಕುಲದ, ಮನೆತನದ ಗೌರವದ ಬಗ್ಗೆ ಆಸಕ್ತಿಯುಳ್ಳ ಸ್ತ್ರೀ ಪುರುಷರು ಗಮನಕೊಡದಿರುವುದು ಆಶ್ಚರ್ಯಕರವಾಗಿದೆ

ನಿಜವಾದ ಕಲೆಯೆಂದರೆ ಯೋಗವೊಂದೇ. ಯೋಗವೆಂದರೆ ಕರ್ಮಕೌಶಲ. ಆ ಕರ್ಮ ಕುಶಲತೆ ವಿನಾಶಕಾರಕ ಕೆಲಸದಲ್ಲಿ ಪ್ರಯುಕ್ತವಾಗಿದೆಯೋ ರಚನಾತ್ಮಕ ಕಾರ್ಯದಲ್ಲಿ ಪ್ರಯುಕ್ತವಾಗಿದೆಯೋ ಎಂಬುದನ್ನು ವಿವೇಚಿಸಿ ಮಾರ್ಗದರ್ಶನಮಾಡುವ ಸದ್ಗುರುವೇ ಋಷಿ, ಕವಿ, ಕಲಾವಿದರ ಕಣ್ಣು ತೆರೆಸುವ ಮಹಾಕಲಾವಿದ. ಅಂಥ ಮಹಾಕಲಾವಿದರು ಮಹಾ ಕವಿಗಳಲ್ಲದೆ ಅನ್ಯರಾರೂ ಆಗಲಾರರು ಮಹಾ ಕವಿಗಳ ಮಾತನ್ನಷ್ಟೇ ನೋಡದೆ ಅವರು ಜೀವಿಸಿರುವ ಕಾಲದಲ್ಲಿ ಅವರ ಜೀವನವನ್ನು ಕಂಡು ಅವರ ಪ್ರಾಮಾಣಿಕತೆ ಸಮಾಧಾಯಕವಾದರೆ ಅವರಿಗೆ ಪೂಜ್ಯತೆ ಸಲ್ಲಿಸಬೇಕು. ಅಂಥವರಿಂದ ಜಗತ್ಕಲ್ಯಾಣವಾಗದಿರದು. ಮನೋವಾಕ್ಕಾಯಕರ್ಮಗಳಲ್ಲಿ ಯೋಗ (Harmony) ಇಲ್ಲದ ಜೀವಿಗಳು ತೋರಿಕೆಗೆ ಮಾತ್ರ ಮಹಾಕವಿಗಳು. 'ಯುಕ್ತ' ರಿಗೆ ಮಾತ್ರ ಪ್ರೋತ್ಸಾಹ ಕೊಡುವ ನಿಜರಸಿಕತೆಯುಳ್ಳ ಜನತೆಯೊಂದೇ ನಿಜವಾಗಿ ಮಾನವ ಕುಲದ ಮುಕುಟಮಣಿ ಎನಿಸಬಲ್ಲದು.

ಗಾಂಧಿಯವರ ಗದ್ಯವು ಎಷ್ಟೋ ಸಾಮಾನ್ಯ ಮಹಾಕವಿಗಳ ಪದ್ಯಕ್ಕಿಂತ ಹೆಚ್ಚು ಅರ್ಥಗರ್ಭಿತವೂ ಭಾವಪರಿಪೂರ್ಣವೂ ದೈವೀಸಂಪತ್ತೆನಿಸುವ ರಸಾವೇಶಭರವೂ ಆಗಿದೆ ಎಂಬುದನ್ನು ಕಾಣದ ಭಾರತೀಯನಿಗೆ ಕಲೆಯ ಹೆಸರನ್ನೆತ್ತಲು ಕೂಡ ಅಧಿಕಾರವಿಲ್ಲ. ಅವರ ಸತ್ಯಶೋಧನವೊಂದು ಆಧುನಿಕ ಭಗವದ್ಗೀತೆ, ಐದನೆಯ ವೇದ, ನಾಗರಿಕತೆಗೆ ಕಳಸವಿಡುವ ಕಲಾಕೃತಿ ಎಂದು ಯಾರ ಹೃದಯಕ್ಕೆ ತಿಳಿಯುವುದೋ ಅವರೇ ನಾಳಿನ ಭಾರತವನ್ನು ನಾಗರಿಕವಾಗಿ ಕಟ್ಟಬಲ್ಲರು, ಮನುಷ್ಯಜನ್ಮಕ್ಕೆ ಮರ್ಯಾದೆಯನ್ನು ತಂದಾರು. ವೇದ [illegible] ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದಾರೆ. ವೇದವೊಂದು ಅದ್ವಿತೀಯ ಮಹಾಕಾವ್ಯವೆಂಬುದನ್ನು ಎಷ್ಟು ಜನ ಭಾರತೀಯರು ಬಲ್ಲರು? ವೇದದ ಮೂಲದ್ರಷ್ಟಾರರು ಸ್ವತಃ ಸುಂದರರು, ಸುಂದರಜೀವನ ನಾಗಿಸಿ, ಸುಂದರ ಭಾವಗಳನ್ನು ಸುಂದರವಾದ ಮಾತುಗಳಲ್ಲಿ ಮೂಡಿಸಿದರು. ಅದೇ ಮೇರೆಗೆ ಗಾಂಧಿಯವರು ಕವಿಜೀವನದಿಂದ ಸ್ವತಃ ಕಾವ್ಯವೆನಿಸಿ, ಕವಿಯೆನಿಸಿ, ಸಾಮಾಜಿಕರೂ ಎನಿಸಿ ಸಾಕ್ಷಾತ್ಕಾರ ಪಡೆದ ದಿವ್ಯಕಲಾವಿದರು. ಕಲೆಯ ಪ್ರಯೋಜನವೇನೆಂಬುದನ್ನು ಅವರೇ ಒಮ್ಮೆ ರವೀಂದ್ರನಾಥ ಠಾಕೂರರಿಗೆ ಕೊಟ್ಟ ಧೀರೋದಾತ್ತ ಉತ್ತರದಲ್ಲಿ ತಿಳಿಸಿದ್ದಾರೆ. ಜೀವನವನ್ನು ಭೌತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಪರಿಪೂರ್ಣಗೊಳಿಸಲು ನೆರವಾಗದ ಕಲೆ ಕಲೆಯೇ ಅಲ್ಲ. ಸಹಜೀವಿಗಳ ಹೊಟ್ಟೆ ಮತ್ತು ತಲೆಗಳಿಗೆ ಆನಂದ ಕೊಡಲು ಮಾಡುವ ನಿಃಸ್ವಾರ್ಥಬುದ್ಧಿಯ ದೈಹಿಕ, ವಾಚಿಕ ಮತ್ತು ಮಾನಸಿಕ ಕಾರ್ಯಗಳಲ್ಲಿ ತೋರುವ ಕೌಶಲಕ್ಕಿಂತ ಹೆಚ್ಚಿನ ಕಲೆ ಇಲ್ಲ. ಇಂಥ ಕಲೆಯೇ ನಿಜವಾದ ಕಲೆ. ಅದರ ಪ್ರಯೋಜನ ಅದರ ಕರ್ತೃಗಳಿಗೂ ಕರ್ಮಗಳಿಗೂ ತಾನೇ ತಾನಾದ ಆನಂದರೂಪದಲ್ಲಿ ಲಭಿಸುತ್ತದೆ. ಕರ್ಮಗಳೆಲ್ಲರೂ (ಸೇವ್ಯರು) ಆಗ ಕರ್ತೃ (ಸೇವಕ)ಗಳಾಗಿ ಅನುಭವಿಸುವುದನ್ನು ತಾವೇ ತಾವಾಗಿ ಕಲಿತು ಸರ್ವೋದಯಕ್ಕೆ ಕಾರಣರಾಗುತ್ತಾರೆ. ಸರ್ವೋದಯವಲ್ಲದೆ ಕಲೆಗಿನ್ನಾವ ಪ್ರಯೋಜನ, ಪುರುಷಾರ್ಥಗಳಿವೆ? ಧರ್ಮಾರ್ಥ ಕಾಮಮೋಕ್ಷಗಳು ಸಾಮಾಜಿಕರಿಗೆ (ಸಮಾಜ ಜೀವಿಗಳಿಗೆ) ವೈಯಕ್ತಿಕವಾಗಿ ಎಂದೂ ಲಭ್ಯವೆನಿಸವು. ಅವು ಸದಾ ಸಾಮಾಜಿಕ ಎಂಬ ತತ್ವವನ್ನು ವ್ಯಕ್ತವಾದವೇ ತಿರುಳಾಗಿ ಉಳ್ಳ ಭಾರತೀಯ ತತ್ವಜ್ಞಾನದ ಭಕ್ತರು ಚೆನ್ನಾಗಿ ಮನನಮಾಡಬೇಕು. ಇದು ಗಾಂಧೀದರ್ಶನವು ಹಿಂದು ದರ್ಶನಗಳಿಗೆ ಕೊಟ್ಟ ಕಾಣಿಕೆ. ವಿದ್ವಾಂಸರು ಮಾನವನ ಬಾಳಿನ ಸಮಸ್ಯೆಯನ್ನು ಬಿಡಿಸುವಾಗ ಈ ಅಂಶವನ್ನು ಮರೆತರೆ ಕೆಟ್ಟರು.

—ಬ. ಹೆ. ಶ್ರೀ

ಕರ್ನಾಟಕ

ಧಾರವಾಡ

ಒಕ್ಕಲುತನದ ಹುಟ್ಟುವಳಿ ಮಾರ್ಕೆಟ್ ಕಮಿಟಿಯ ಕಾಯದೆಯ ಪ್ರಕಾರ ಹುಬ್ಬಳ್ಳಿ ಮಾರ್ಕೆಟ್ ಕಮಿಟಿಯಿಂದ ಲೈಸೆನ್ಸ ಪಡೆದು ಕೊಳ್ಳದೆ ಹತ್ತಿ ಅರಳೆ ವ್ಯಾಪಾರವನ್ನು ಮಾಡಿದ್ದರಿಂದ ಹುಬ್ಬಳ್ಳಿಯ ಫಸ್ಟ್‌ಕ್ಲಾಸ್ ರೆಸಿಡೆಂಟ್ ಮ್ಯಾಜಿಸ್ಟ್ರೇಟರು ವೀರನಗೌಡ ರುದ್ರಗೌಡ ಪಾಟೀಲ ಸಾ॥ ಕೊಂಕಣಕುರಟ್ಟಿ ಇವರಿಗೆ ೫ ರೂ. ದಂಡ ಹಾಕಿರುತ್ತದೆ.

ಸುಖದಿಂದ ನಡೆದಿರುವ ಧಾರವಾಡ ಕುರುಬರ ಬೋರ್ಡಿಂಗ್ ಕಟ್ಟಡದ ಸಲುವಾಗಿ ಶ್ರೀಮಂತ ಚೆನ್ನಬಸಪ್ಪಣ್ಣ ಅಲದಕಟ್ಟಿ ಬಂಕಾಪುರ ಇವರು ಈ ವರ್ಷವೂ ೧೦೫೫ ರೂ ಕಳಿಸಿದ್ದಕ್ಕೆ ಗದುಗಿನ ಕುರುಬರಸಂಘ ಕೃತಜ್ಞತೆಯನ್ನು ತಿಳಿಸುತ್ತದೆ.

ಸರಕಾರದವರು ಪ್ರಚಲಿತ ವರ್ಷದ ಮಟ್ಟಿಗೆ ಗಿಡ್ಡ ಭತ್ತವನ್ನು ಮಧ್ಯಮ ಭತ್ತವೆಂದು ಗಣಿಸಿ ೧೯೪೮ ರ ಅಕ್ಟೋಬರ ೧೬ ರಿಂದ ಅವುಗಳಿಗೆ ಆ ರೀತಿ ಬೆಲೆ ಕೊಡಲು ಅಪ್ಪಣೆ ವಿಧಿಸಿದ್ದಾರೆಂದು ಕಲೆಕ್ಟರರು ಪ್ರಕಟಿಸುತ್ತಾರೆ. ೧೯೪೮-೪೯ ರ ಬಗ್ಗೆ ಮಾರಾಟದ ದರ: ಸಾವಿ, ನವಣೆ, ಬರಗ ಒಂದು ಬಂಗಾಲಿ ಮಣಕ್ಕೆ ರೂ. ೫ ೫-೦ ತೂಕದಿಂದ ಸ್ಟ್ಯಾಂಡರ್ಡ ಚೀಲಕ್ಕೆ ೧೪-೭-೦ ರೂ. ಕಿರುಕುಳ ಮಾರಾಟದರ ೧ ಪೌಂಡಿಗೆ ೧ ಆಣೆ ೨ ಪೈ.

ಕುಂದಗೋಳ ತಾಲೂಕು ರೈತ ಪರಿಷತ್ತಿನ ಕಾರ್ಯಕಾರಿ ಮಂಡಲದ ಸಭೆ ಕುಂದಗೋಳದಲ್ಲಿ ಕಳೆದ ೨೮ ರಲ್ಲಿ ಸೇರಿ, ಕುಂದಗೋಳವನ್ನು ಮಹಾಲ ಮಾಡಲು ಮುಂಬಯಿ ಸರಕಾರಕ್ಕೆ ಸೂಚಿಸುವುದು ಮುಂತಾದ ೩-೪ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ತಾವಾಗಿಯೇ ಮೈಸೂರು ಸಂಸ್ಥಾನದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯನ್ನು ಅಂಗೀಕರಿಸಿ ಕಾರ್ಯಕಾರಿಯನ್ನಾಗಿ ಮಾಡಿದ ಮೈಸೂರ ಅರಸರು ಮುಂದೆ ಹೋಗಿ ಮೈಸೂರನ್ನು ಭಾರತದಲ್ಲಿ ಲೀನಗೊಳಿಸಬೇಕೆಂದು ಹಿಂದುಸ್ತಾನದ ಕೇಂದ್ರ ಶಾಸನ ಸಭೆಯ ಹಿಂದಿನ ಸದಸ್ಯರಾದ ಶ್ರೀ. ದ. ಪ. ಕರಮರಕರರು ಧಾರವಾಡದಿಂದ ಒಂದು ಪ್ರಕಟನೆ ಹೊರಡಿಸಿದ್ದಾರೆ.

ಧಾರವಾಡದ ಶ್ರೀ ಮುರುಘರಾಜೇಂದ್ರ ಮಠಾಂಗಣದಲ್ಲಿ ಅ. ಭಾ. ಶಿವಾನುಭವ ಸಮ್ಮೇಲನದ ೫ ನೆಯ ಅಧಿವೇಶನವು ಮೈಸೂರಿನ ಶ್ರೀ. ಮ. ನಿ. ಪ್ರ. ಪಂಡಿತ ಗೌರೀಶಂಕರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ ೫ ರಲ್ಲಿ ನೆರವೇರಿತು.

ಧಾರವಾಡ ಜಿಲ್ಲಾ ಮಧ್ಯಮ ತರಗತಿಯ ಪ್ರಾ. ಶಿಕ್ಷಕರ ಮುಂದೆ ಹಾಕಲಾದ ಸಭೆ ಇದೇ ತಾ ೧ ರಲ್ಲಿ ಸೇರಿತ್ತು. ಅದ ಅನ್ಯಾಯವನ್ನು ಸರಿಪಡಿಸಿ ಕೊಡಲು ಶಾಸನಸಭಾ ಸದಸ್ಯ ಶ್ರೀ ನೇಸ್ವಿಯವರನ್ನು ವಿನಂತಿ ಮಾಡಿಕೊಂಡು ಸರಕಾರದ ಕಡೆ ಕಳಿಸಿ ಕೊಡಬೇಕೆಂದು ಗೊತ್ತಾಯಿತು. ಅದರ ಮತ್ತು ಇತರ ಅನ್ಯಾಯಗಳಿದ್ದರೆ (ಅವನ್ನು ತಾ ೧೫ ರೊಳಗೆ ತಿಳಿಸಿದರೆ) ಅವುಗಳ ತಿದ್ದುಪಡಿ ಮಾಡಿಸಲು ತಾ ೧೫ ರೊಳಗೆ ಶ್ರೀ ನಾ. ಗ. ಸಾಲಿಮಠ ಮಂಗಳವಾರ ಪೇಟೆ ಇವರಿಗೆ ಕಳಿಸಬೇಕೆಂದು ಸದರಿಯವರು ತಿಳಿಸುತ್ತಾರೆ.

ಧಾರವಾಡ ತಾಲೂಕು ವತನದಾರ ಕುಲಕರ್ಣಿಯವರ ಸಭೆಯು ಶ್ರೀ ಡಿ. ಆರ್. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ತಾ ೧ ರಂದು ಸೇರಿ ಸಂಘ ಸ್ಥಾಪನೆ ಮಾಡಿ ಅದಕ್ಕೆ ಸಭಾಧ್ಯಕ್ಷರನ್ನೇ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಪ್ರಾಂತಿಕ ಸಂಘ ತೀರ್ಮಾನಿಸಿದಂತೆ ಕುಲಕರ್ಣಿಗಳೆಲ್ಲ ಬೇಗನೆ ರಾಜೀನಾಮೆ ಕೊಡಬೇಕೆಂದು ಗೊತ್ತಾಯಿತು.

ಕೋಗನೂರು ಗ್ರಾಮವು ಕರ್ನಾಟಕದ ಹುತಾತ್ಮರಾದ ಮಹಾದೇವ ಮೈಲಾರ, ವೀರಯ್ಯ, ತಿರುಕಪ್ಪ ಈ ಮೂವರಲ್ಲಿ ೨ ಮತ್ತು ಮೂರನೆಯವರ ಜನ್ಮಸ್ಥಳ. ಇಲ್ಲಿ ಗ್ರಾಮ ಸೇವಾ ಸಂಘವೊಂದನ್ನು ಮೇಲಿನವರ ಸ್ಮರಣಾರ್ಥವಾಗಿ ಸ್ಥಾಪಿಸಲಾಗಿದೆ. ಇದರ ಮೂಲಕ ಸ್ವಾವಲಂಬಿ ಹಳ್ಳಿಗಳನ್ನು ನಿರ್ಮಿಸಬೇಕೆಂದಿದೆ. ಎಲ್ಲ ರಾಷ್ಟ್ರಪ್ರೇಮಿಗಳೂ ಗ್ರಾಮೋದ್ಧಾರದ ಬಗ್ಗೆ ಆಸ್ಥೆಯುಳ್ಳ ಪ್ರತಿಯೊಬ್ಬ ಬಂಧುಭಗಿನಿಯೂ ಬಡವ ಬಲ್ಲಿದನೂ ಮುಂದೆ ಬಂದು ಈ ವೀರರ ಸ್ಮಾರಕ ಸಂಸ್ಥೆಗೆ ಉದಾರ ಹಸ್ತದಿಂದ ಸಹಾಯ ಮಾಡಿ ಕೃತಕೃತ್ಯರಾಗಬೇಕೆಂದು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಾಬುರಾವ ತಿಮ್ಮಪ್ಪ ಹಂಡೆ ಬಂಕಾಪುರ ಇವರು ಪ್ರಕಟಿಸುತ್ತಾರೆ.

ವಿಜಾಪುರ

೧೯೪೮ ನೆಯ ಇಸವಿಯ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಮುದ್ದೇಬಿಹಾಳ ಕೇಂದ್ರವು ಮುಚ್ಚಲ್ಪಟ್ಟಿದ್ದು ಆ ಕೇಂದ್ರಕ್ಕೆ ಕೊಡಲು ಅರ್ಜಿ ಮಾಡಿದ ಉಮೇದುವಾರರು ಬಾಗಿಲುಕೋಟೆಯ ಕೇಂದ್ರದಲ್ಲಿ ಪರೀಕ್ಷೆಗೆ ಕೊಡತಕ್ಕದ್ದು ಎಂದು ಡೆಪ್ಯುಟಿ ಎಜ್ಯುಕೇಶನ್ ಇನ್‌ಸ್ಪೆಕ್ಟರರು ಪ್ರಕಟಿಸುತ್ತಾರೆ.

ಕರ್ನಾಟಕ ಚಾಕ್ಷುಷ ಶಿಕ್ಷಣೋಪಕರಣಗಳ ಪ್ರದರ್ಶನವನ್ನು ಈ ಸಲ ಫೆಬ್ರುವರಿ ೨೨ ರಿಂದ ೨೮ ರವರೆಗೆ ವಿಜಾಪುರದಲ್ಲಿ ಕರ್ನಾಟಕ ಮಾಧ್ಯಮಿಕ ಶಿಕ್ಷಕರ ತೃತೀಯ ಪರಿಷತ್ತಿನ ಸಂಗಡ ಏರ್ಪಡಿಸುವ ಬಗ್ಗೆ ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ಶ್ರೀ ಸಾನೆಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಶಿಕ್ಷಣಾಧಿಕಾರಿಗಳು, ಶಿಕ್ಷಕರು ಮತ್ತು ನಾಗರಿಕರನ್ನೊಳಗೊಂಡ ಹಲವು ಸಮಿತಿಗಳು ರಚಿತವಾದವು.

ಈ ಮೊದಲು ಪ್ರಸಿದ್ಧಿಸಿದಂತೆ ವಿಜಾಪುರದಲ್ಲಿ ಈಗ ಸೀದಾ ಜಾರಿಗೆ ತರಲು ಸಾಧ್ಯವಿಲ್ಲ; ಏಕೆಂದರೆ ಗುದಾಮುಗಳಿಗೆ ಕಳಿಸಲು ಸಾಕಷ್ಟು ಧಾನ್ಯಸಂಗ್ರಹ ಇಲ್ಲ— ಎಂದು ವಿಜಾಪುರ ಜಿಲ್ಲೆಯ ಕಲೆಕ್ಟರರು ಶ್ರೀ ಸಾಲಭಾಣ ಅವರು ಸುದ್ದಿಗಾರರ ಸಭೆಯಲ್ಲಿ ಸಾರಿದರು.

ವಿಜಾಪುರ ತಾಲೂಕಿನ ೩ ಕನ್ನಡ ಹಳ್ಳಿಗಳನ್ನೂ ಇಂಡಿ ತಾಲೂಕಿನ ಯಾಳಗಿ ಎಂಬ ಕನ್ನಡ ಹಳ್ಳಿಯನ್ನೂ ಸಾಂಗಲಿ ಜಿಲ್ಲೆಗೆ ಸೇರಿಸಿದ್ದನ್ನು ಖಂಡಿಸಲು ವಿಜಾಪುರದ ಆನರರಿ ಮ್ಯಾಜಿಸ್ಟ್ರೇಟರಾದ ಶ್ರೀ ಸಿದ್ದನಗೌಡ ಪಾಟೀಲ ಬಬಲಾದರ ಮನೆಯಲ್ಲಿ ಸಭೆ ಸೇರಿ ಆ ಬಗ್ಗೆ ತಮ್ಮ ತೀವ್ರ ವಿರೋಧವನ್ನು ಪ್ರಕಟಪಡಿಸಿದರು.

ಪ್ರತಿವರ್ಷದಂತೆ ಈ ವರ್ಷವಾದರೂ ಶ್ರೀ ಬಸವಣ್ಣದೇವರ ಜಾತ್ರೆಯು ತಾ ೧೩ ರಲ್ಲಿ ಪ್ರಾರಂಭವಾದದ್ದು ೧೯ ರ ವರೆಗೆ ಬಾಗಿಲುಕೋಟೆಯಲ್ಲಿ ನಡೆಯುವುದು. ಶ್ರೀ ಬಸವೇಶ್ವರ ಸಂಸ್ಥೆ ಮತ್ತು ವಿಜಾಪುರ ಜಿಲ್ಲಾ ಗ್ರಾಮೋದ್ಧಾರ ಸಮಿತಿ ಇವುಗಳು ಒಕ್ಕಲುತನ, ಉದ್ಯಮ ಮತ್ತು ದನಗಳ ಪ್ರದರ್ಶನವನ್ನು ಏರ್ಪಡಿಸುವವು. ರೈತ ಬಾಂಧವರು ಉತ್ತಮ ಬೆಳೆ, ಬೀಜ, ಹಣ್ಣು, ಕಾಯಿಪಲ್ಲೆ ಕೈಗಾರಿಕೆ ಸಾಮಾನು, ಎತ್ತು, ಹೋರಿ, ಆಕಳು ಮುಂತಾದವನ್ನು ತರಬೇಕು.

ವಿಲೀನಗೊಂಡ ದಕ್ಷಿಣ ಸಂಸ್ಥಾನಗಳ ನೇಕಾರರ ಮತ್ತು ನೇಕಾರ ಸಹಕಾರಿಗಳ ಪರಿಷತ್ತಿನಲ್ಲಿ ಗೊತ್ತಾದ ಪ್ರಕಾರ ಅಧ್ಯಕ್ಷ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು (ಬನಹಟ್ಟಿಯಲ್ಲಿ) ಶ್ರೀ ಮಹಾಲಿಂಗಪ್ಪ ಹನಗಂಡಿ ಮುಂತಾದ ೭ ಜನರನ್ನು ಕಾರ್ಯಸಮಿತಿಗೆ ಆರಿಸಿಕೊಂಡಿದ್ದಾರೆ.

ವಿಜಾಪುರದ ಸಂಗೀತಸೇವಾ ಸಮಿತಿಯು ಸಂಗೀತವನ್ನು ಏಳಿಗೆಗೆ ತರಲು ಶಾಲೆ ತೆರೆಯುವ, ಮಾಸಪತ್ರಿಕೆ ಹೊರಡಿಸುವ ಮುಂತಾದ ಧ್ಯೇಯಗಳನ್ನಿಟ್ಟುಕೊಂಡಿದೆಯೆಂದೂ ೨೫ ರೂ. ಕೊಟ್ಟರೆ ಮಹಾಪೋಷಕರಾಗಲು, ೧೦ ಕೊಟ್ಟರೆ ಪೋಷಕರಾಗಲು, ೫ ಕೊಟ್ಟರೆ ಸಹಾಯಕರಾಗಲು ೪ ಆಣೆ ಕೊಟ್ಟರೆ ಸದಸ್ಯರಾಗಲು ಬರುತ್ತದೆಂದೂ ತಿಳಿಯುತ್ತದೆ.

ಬೆಳಗಾವಿ

ಇದೇ ೧ ನೆಯ ತಾರೀಕಿನಿಂದ ಧಾನ್ಯದ ಖರೀದಿ ಮತ್ತು ಮಾರಾಟದ ಗುತ್ತಿಗೆಯನ್ನು ಸರಕಾರ ವಹಿಸಿದ್ದರಿಂದ ಅಧಿಕಾರಿಗಳು ಗೋಕಾಕದ ಲಾಯಸೆನ್ಸದಾರರಲ್ಲಿಯ ಶೋಧ ನಡೆಸಿದ್ದು ಅನೇಕರ ಹತ್ತಿರ ಧಾನ್ಯ ದೊರೆತಿದೆ.

ಮುಂಬಯಿ ಸರಕಾರದ ಉಪಮಂತ್ರಿ ಶ್ರೀ ಪಾಂಡ್ರೇಕರರು ತಾ ೨ರ ಮುಂಜಾವ ಹುಕ್ಕೇರಿ ರೋಡಿನ ಕರ್ನಾಟಕ ಹೆಲ್ತ ಇನ್‌ಸ್ಟಿಟ್ಯೂಟಗೆ ಭೆಟ್ಟಿಯಿತ್ತು ಅಲ್ಲಿಯ ಪ್ರಯೋಗಶಾಲೆ, ಕ್ಷಕಿರಣದ ಕೋಣೆ, ಶಸ್ತ್ರಚಿಕಿತ್ಸಾಶಾಲೆ, ಮೊದಲಾದವನ್ನು ಪರಾಂಬರಿಸಿದರು.

ಪಾಚ್ಛಾಪುರದಲ್ಲಿ ಕಟ್ಟಿರುವ ಗಾಂಧಿಸ್ವರಾಜ್ಯ ಭವನದ ಶಂಕುಸ್ಥಾಪನೆಯ ಸಮಾರಂಭವು ಕಳೆದ ೩೦ ರಲ್ಲಿ ಬೈಲಹೊಂಗಲದ ಶ್ರೀ ಶಂಕರರಾವ ಕಾಮತರ ಹಸ್ತದಿಂದ ನೆರವೇರಿತು. ಅವರು ಕಟ್ಟಡಕ್ಕೆ ೧೦೦೧ ರೂ. ಕೊಡುವುದಾಗಿ ಜಾಹೀರ ಮಾಡಿದರು.

ಬಳ್ಳಾರಿ

ಮುಂಬಯಿ ಸರಕಾರದ ಸಹಕಾರ ಖಾತೆಯ ಮಂತ್ರಿಗಳಾದ ಮಾನ್ಯ ಕೆ. ಚಂದ್ರಶೇಖರಯ್ಯನವರು ತಾ. ೩ರಲ್ಲಿ ಬಳ್ಳಾರಿಗೆ ಹೋಗಿ ಕೈನ ಜವಳಿ ಪೇಟೆ ಮತ್ತು ಸಹಕಾರಿ ಕಟ್ಟಡ ಸಂಸ್ಥೆಯ ಶಂಕುಸ್ಥಾಪನೆ ನೆರವೇರಿಸಿ, ಸಹಕಾರಿ ಪ್ರಾಥಮಿಕ ಸ್ಟೋರಿನಲ್ಲಿ ಡಾ. ಪಟ್ಟಾಭಿಯವರ ಭಾವಚಿತ್ರದ ಅನಾವರಣಮಾಡಿ, ಹರಿಜನ ವಸತಿಗೆ ಭೆಟ್ಟಿಕೊಟ್ಟು ಹೊಸಪೇಟೆಗೆ ತೆರಳಿದರು. ಸಹಕಾರೀಕಟ್ಟಡ ಸಂಸ್ಥೆಯ ರಜತಮಹೋತ್ಸವವು ಡಾ. ಪಟ್ಟಾಭಿಯವರ ಸುಕ್ಕಳಾದ ಶ್ರೀ ಭೋಗರಾಜು ಅವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಬೆಳಗಲ್ಲುಗ್ರಾಮದಕರಣಮರಾದ ವೆಂಕೋಬರಾವ ಇವರು ಕೋರ್ಟಿನ ಕೆಲಸ ಮುಗಿಸಿಕೊಂಡು ಸಂಜೆ ತಮ್ಮ ಊರಿಗೆ ಹೊರಟಾಗ ಹಾದಿಯಲ್ಲಿ ಯಾರೋ ಅವರ ಕೊಲೆ ಮಾಡಿದರು. ಇವರ ಇಬ್ಬರು ಸಂಗಡಿಗರಿಗೆ ಗಾಯವಾಗಿದೆ. ಹೆಣವೂ ಗಾಯಾಳುಗಳೂ ಆಸ್ಪತ್ರೆಯಲ್ಲಿ ಇದ್ದಾರೆ.

ಬಳ್ಳಾರಿ ಜಿಲ್ಲಾ ಪತ್ರಿಕೋದ್ಯೋಗಿಗಳ ೧೪ ನೆಯ ವಾರ್ಷಿಕೋತ್ಸವವು ಕಳೆದ ೩೧ ರಲ್ಲಿ ದ. ಭಾ. ಪತ್ರಿಕೋದ್ಯೋಗಿಗಳ ಮಹಾಮಂಡಲದ ಕಾರ್ಯದರ್ಶಿಗಳಾದ ಶ್ರೀ ವಿ. ಕೆ. ನರಸಿಂಹನ್ನರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ದಕ್ಷಿಣ ಕನ್ನಡ

ತಾ ೫ ರ ಸಂಜೆ ಮಂಗಳೂರಲ್ಲಿ ಶ್ರೀಗಳಾದ ಕೆ. ಕೆ. ಶೆಟ್ಟಿ ಮತ್ತು ಎಸ್. ಎಸ್. ಕಿಲ್ಲೆಯವರ ಸಂಪಾದಕತ್ವದಲ್ಲಿ ಹೊರಟ ಸರ್ವೋದಯವೆಂಬ ವಾರಪತ್ರಿಕೆಯ ಉದ್ಘಾಟನ ಸಮಾರಂಭವು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ನೆರವೇರಿತು.

ಉಡುಪಿಯಲ್ಲಿ ಕರ್ನಾಟಕ ಕವಿಕುಲ ತಿಲಕ ಮುದ್ದಣನ ಪುಣ್ಯ ದಿನಾಚರಣೆಯು ಕಳೆದ ತಾ ೨೩ ರಲ್ಲಿ ಉಡುಪಿ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಮುದ್ದಣನ ಜೀವನ ಚರಿತ್ರೆಯನ್ನು ಅವನ ಸಮಕಾಲೀನರಾದ ಶ್ರೀ ಎಸ್. ರಾಜಗೋಪಾಲ ಕೃಷ್ಣರಾಯರು ತಮ್ಮ ಭಾಷಣದಲ್ಲಿ ವಿವರಿಸಿದರು.

ಮಂಗಳೂರಿನ ರುಜಾರಿಯೋ ಹೈಸ್ಕೂಲಿನ ಕನ್ನಡ ಸಂಘದಲ್ಲಿ ಜನಾಬ್ ಬಿ. ಎಂ. ಇದಿನಬ್ಬರು "ಆಧುನಿಕ ಕನ್ನಡ ಕವಿತೆಯೂ ಜನಜೀವನವೂ" ಎಂಬ ವಿಷಯವನ್ನೆತ್ತಿಕೊಂಡು ಪುಟ್ಟಪ್ಪ, ಬೇಂದ್ರೆ ಮೊದಲಾದವರ ಕವನಗಳಲ್ಲಿ ಅದರ ನಿದರ್ಶನವನ್ನು ತೋರಿಸಿದರು.

ಉತ್ತರ ಕನ್ನಡ

ಕಾರವಾರ ಸರ್ಕ್ಯುಲರ್ ಹಿಡಿಂಗ್ ಏರ್ಪಾಡಾದ ಶ್ರೀ ಎಸ್. ವಿ. ರಾಮಚಂದ್ರಯ್ಯನವರು ಮಹಾಲೇಖಕೆಗೆ ಮುಂಬಯಿ ಕೊಂಡಗರು ಕಾಯದೆಯ ಅನ್ವಯ ರುಜುವಿಲ್ಲದ ಪುಸ್ತಕದ ಕಿತಾಬುಕೊಟ್ಟರು.

ಕಾರವಾರ ಜಿಲ್ಲೆಯ ಸೈನಿಕರ ಕುಟುಂಬ ಇಷ್ಟದೆಯೆಂಬುವರ ಕಲ್ಯಾಣವೇ ಪರಮ ಗುರಿಯೆಂದೂ ಈ ಸಂಸ್ಥೆಯ ಲಾಭ ಪಡೆಯಲು ಬೇಕಾಗುವಂತೆ ಸರಕಾರವು ಯೋಗ್ಯ ವ್ಯವಸ್ಥೆ ಕೈಕೊಳ್ಳುವುದು ಎಂದು ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು, ಕಾರವಾರ ಜಿಲ್ಲಾ ಪ್ರವಾಸ ಮುಗಿಸಿಕೊಂಡು ಮರಳುವಾಗ ಹುಬ್ಬಳ್ಳಿಯಲ್ಲಿ ಹು. ಕ. ಪ್ರತಿನಿಧಿಗೆ ತಿಳಿಸಿದರು.

ಬೇಸಾಯದ ಬೆಳಸುಗಳ ಬೇಟೆಯ ನಿಯಂತ್ರಣದ ಕಾಯದೆಯಂತೆ ಶಿರಸಿ ತಾಲೂಕಿನ ವ್ಯವಹಾರವನ್ನು ಕ್ರಮಗೊಳಿಸಲು ಬೇಸಾಯಗಾರರ ಮತ್ತು ವ್ಯಾಪಾರಸ್ಥರ ಪ್ರತಿನಿಧಿಗಳು, ನಗರ ಸಭಾಧ್ಯಕ್ಷರು, ಹೊಂಡುಲೇಖಾಪಾಲರು ಇವರನ್ನೊಳಗೊಂಡು ೧೫ ಜನರ ಒಂದು ಮಾರ್ಕೆಟ್ ಕಮಿಟಿಯನ್ನು ಸರ್ಕಾರವು ನೇಮಿಸಿದ್ದಾರೆ.

ಕಳೆದ ವರ್ಷದಂತೆ ಈಗಲೂ ದಾರಿಗಳ್ಳರ ಉಪದ್ರವ ಪ್ರಾರಂಭವಾಗಿದೆ. ಇತ್ತೀಚೆಗೆ ಶಿರಸಿ–ಕುಮಟಾ ಮಾರ್ಗದಿಂದ ಹಳ್ಳಿಗೆ ಹೋಗುತ್ತಿದ್ದ ಒಂದು ಹಳ್ಳಿಯವನ್ನು ತಡೆದು ಕೆಲ ಕಳ್ಳರು ಅವರಲ್ಲಿದ್ದ ೪ ಎತ್ತುಗಳನ್ನು ಎತ್ತಿಕೊಂಡು ಹೋದರಂತೆ.

ಮೈಸೂರು ಸಂಸ್ಥಾನದ ಹೋಟೆಲುಗಳಲ್ಲಿ ಸೀದಾ ಕಾಳುಗಳ ಉಪಯೋಗ ಮಾಡತಕ್ಕದ್ದೆಂಬುದಾಗಿ ಮಾಡಿರುವ ಆಜ್ಞೆಯ ಪರಿಣಾಮವಾಗಿ ಸಂಸ್ಥಾನದ ಕೆಲವು ಹೋಟೇಲುಗಳಲ್ಲಿ ಹೆಚ್ಚಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿದೆ. ಈ ಕಾರಣದಿಂದ ಹೋಟೇಲು ಕೆಲಸಗಾರರು ಮುಷ್ಕರ ಹೂಡಲಾರಂಭಿಸಿದ್ದಾರೆ. ಮೈಸೂರು ನಗರದಲ್ಲಿರುವ ಭಾರೀ ಹೋಟೇಲಾದ ಬೊಂಬಾಯಿ ಆನಂದ ಭವನದಲ್ಲಿ ಈರೀತಿ ೩ ದಿನಗಳಿಂದಲೂ ಮುಷ್ಕರ ನಡೆಯುತ್ತಿದೆ.

ಮಂಗಳೂರಲ್ಲಿ ವೈದ್ಯಕೀಯ ಅನುಕೂಲಗಳನ್ನು ಹೆಚ್ಚಿಸಬೇಕೆಂಬ ಸರಕಾರದ ಯೋಜನೆಯನ್ನು ಪರಾಂಬರಿಸಲು ಸರ್ಜನ್ ಜನರಲ್ ಕರ್ನಲ್ ಭಾಟಿಯಾ ಅವರು ಕಳೆದ ೨೫ ರಲ್ಲಿ ಮಂಗಳೂರು, ಪುತ್ತೂರು ಮತ್ತು ಮುಲ್ಕಿಯ ಆಸ್ಪತ್ರೆಗಳನ್ನು ಸಂದರ್ಶಿಸಿದರು.

ಮಹಾಜನ ಸಭೆಯೆಂಬ ಸಮಾಜಸೇವಾ ಸಂಸ್ಥೆಯೊಂದು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಸಂಸ್ಥೆಗೆ ಸದಸ್ಯರಾಗಬಯಸುವವರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಾಗಿರಕೂಡದು. ಸಭೆ ಈಗಾಗಲೆ ತನ್ನ ಕಾರ್ಯಕಲಾಪಗಳನ್ನು ಪ್ರಾರಂಭಿಸಿದೆ.

ಮುಂಬಯಿ

...ಜನೆಗಳಲ್ಲಿ ಹೇರಳ ಬಚ್ಚಿ ಸಂಗ್ರಹ ...ವನ್ನು ಅದನ್ನು ಒಯ್ಯಲು ಸರಕಾರದವರು ...ತಲೆ ಏರ್ಪಾಡು ಮಾಡಬೇಕೆಂದೂ ...ರು ತಿಂಗಳುಗಳ ಉತ್ಪಾದನೆಗಿಂತ ಹೆಚ್ಚು ...ಗ್ರಹ ಕೂಡಿಬಿದ್ದಿದ್ದರೆ ಆ ವಿರಣಿಯನ್ನು ...ಮು ತಿಂಗಳ ವರೆಗೆ ಬಂದುಮಾಡಲಾಗು ...ಕೆಂದೂ ಅಹಮದಾಬಾದ ಗಿರಣಿಯೊಡೆಯರ ...ಘ ಬೆದರಿಕೆ ಹಾಕಿದೆ.

...ದೇವಲಾಲಿಯಿಂದ ಬಂದು ಶಾಂತಾಕ್ರುಝು ...ನದಲ್ಲಿಳಿದ ವಿಮಾನವೊಂದು ನೈಮಾಸಿ... ...ಇಳಿದುಹೋದ ನಂತರ ನಿಲ್ದಾಣತುಂಬ ...ಡಾಡಹತ್ತಿತು. ಕೊನೆಗೆ ಧೈರ್ಯಶಾಲಿ ನೌಕ ...ನೊಬ್ಬನು ಹೇಗೋ ಒಳಹೊಕ್ಕು ಯಂತ್ರ ...ವನ್ನು ನಿಲ್ಲಿಸಿದನು.

ಕೇಂದ್ರ ಸರಕಾರದ ನೌಕರರು ಲಂಚಕೇಳಿ ...ದ ಇಲ್ಲವೆ ಸ್ವೀಕರಿಸಿದರೆ ತಮಗೆ ತಿಳಿಸಬೇ ...ಂದೂ ಹಾಗೆ ತಿಳಿಸಿದವರ ಹೆಸರುಗಳನ್ನು ...ಪ್ತವಾಗಿಡಲಾಗುವದೆಂದೂ ಕೇಂದ್ರ ಲಂಚ ನಿರ್ಮೂಲನ ಶಾಖೆಯ ಅಧಿಕಾರಿಗಳು ಬಿನ್ನವಿ...ದ್ದಾರೆ.

ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆ ...ಯವರು ತಾ ೧ ರಿಂದ ಭಾರತದಲ್ಲಿ ರಾಯಟರ ...ಹಾಗು ಅಸೋಸಿಯೇಟೆಡ್ ಪ್ರೆಸ್ ಸುದ್ದಿ ...ಸಂಸ್ಥೆಗಳ ವ್ಯವಸ್ಥಾಪಕತ್ವವನ್ನು ವಹಿಸಿ ...ದರು. ಈ ವರೆಗೆ ಅವು ವಿದೇಶಿ ಆಡಳಿತದಲ್ಲಿ ...ದ್ದವು.

ಮುಂಬಯಿ ಪ್ರಾಂತದಲ್ಲಿ ಆಯುರ್ವೇದದ ಸ್ಥಾನಮಾನಗಳನ್ನು ಎತ್ತರಿಸುವ ಸಲುವಾಗಿ ಸರಕಾರ ಒಂದು ಮಸೂದೆಯನ್ನು ತರಲಿದೆ. ಆಯುರ್ವೇದ ಪದ್ಧತಿಯ ಬಗ್ಗೆ ಸಂಶೋಧನೆ ಕೈಕೊಳ್ಳಲಾಗುವದು ಮತ್ತು ಎಫ್. ವಾಯ. ಸಾಯನ್ಸ ಹಾಗು ಸಂಸ್ಕೃತ ಜ್ಞಾನವಿರುವ ವಿದ್ಯಾರ್ಥಿಗಳನ್ನು ಮಾತ್ರ ಆಯುರ್ವೇದ ವಿದ್ಯಾಲಯಗಳಲ್ಲಿ ತೆಗೆದುಕೊಳ್ಳಲಾಗುವದು. ಆಯುರ್ವೇದ ವಿದ್ವಾಂಸರೊಡನೆ ಈ ಬಗ್ಗೆ ಆರೋಗ್ಯ ಮಂತ್ರಿ ಡಾ. ಗಿಲ್ಡರರು ವಿಚಾರವಿನಿಮಯ ನಡೆಸಿದ್ದಾರೆ.

ಭಾರತ ವೆಸ್ಟ ಇಂಡೀಜ ಕೊನೆಯ ಕ್ರಿಕೆಟ ಕೊನೆಯ ಪಂದ್ಯಾಟ ತಾ. ೮ಕ್ಕೆ ಡ್ರಾ ಆಗಿ ಕೊನೆಗೊಂಡಿತ್ತು. ಹೊತ್ತು ತೀರಿದಾಗ ಭಾರತದವರು ಗೆಲ್ಲಬೇಕಾದರೆ ಬರಿ ೬ ಓಟಗಳನ್ನು ತೆಗೆಯುವದುಳಿದಿತ್ತು.

ಟ್ಯಾಂಕ್ ವ್ಯಾಗೀನುಗಳ ಕೊರತೆಯಿಂದ ಪೆಟ್ರೋಲ ಕೊರತೆಯಾಗಿದೆಯೆಂದು ಸರಕಾರಿ ಪ್ರಕಟನೆ ಹೊರಟಿದೆ.

ಮದ್ರಾಸ

ಮದ್ರಾಸ ವಿಧಿ ಮಂಡಲದ ಸದಸ್ಯರಾದ ಶ್ರೀ ಮುತ್ತುರಂಗ ಮುದಲಿಯಾರರು ತಾ. ೫ ರಂದು ತಮ್ಮ ಮನೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಅವರು ಕೆಲಕಾಲ ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಿದ್ದರು.

ಮದ್ರಾಸ ಪ್ರಾಂತದ ಕನ್ನಡ ಭಾಗಗಳ ವಿದ್ಯಾ ಸಂಸ್ಥೆಗಳಿಗೆ ಭವಿಷ್ಯಮಾಣ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇರುವ ಅವಕಾಶ ಕೊಡುವ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯ ಅಧ್ಯಕ್ಷರು ತಮ್ಮೊಡನೆ ಮಾತುಕತೆ ನಡೆಸಿದ್ದು ನಿಜವೆಂದೂ ಆದರೆ ಈ ಹೊಸ ವಿಶ್ವವಿದ್ಯಾನಿಲಯದ ಬಗ್ಗೆ ಇನ್ನೂ ನಿರ್ಧಾರವಾಗದಿರುವದರಿಂದ ಆ ಪ್ರಶ್ನೆ ಈಗ ಅಪ್ರಸ್ತುತವೆಂದೂ ಮದ್ರಾಸ ಶಿಕ್ಷಣ ಮಂತ್ರಿ ಅವಿನಾಶಲಿಂಗಂ ಚೆಟ್ಟಿಯವರು ಶಾಸನ ಸಭೆಯಲ್ಲಿ ಶಾರಿಕೆಯ ಉತ್ತರ ಕೊಟ್ಟರು.

ಗವರ್ನರ ಜನರಲ್ ರಾಜಾಜಿಯವರು ಮದ್ರಾಸಿಗೆ ಬಂದಿದ್ದು ಸರಕಾರಿ ಭವನದಲ್ಲಿ ಭೂ ಜಲ ವಾಯುಪಡೆಗಳ ಗೌರವ ರಕ್ಷೆಯನ್ನು ಸ್ವೀಕರಿಸಿದರು.

ಅ. ಭಾ. ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕಳಾ ವೆಂಕಟರಾಯರು ಘಟನಾ ಸಮಿತಿಗೆ ಆರಿಸಲ್ಪಟ್ಟಿದ್ದಾರೆ.

ಮದ್ರಾಸ ಶಾಸನ ಸಭೆಯು ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಧಾರ್ಮಿಕ ಉಂಬಳಿಗಳ ಮಸೂದೆಯೊಂದು ಮಂಡಿಸಲ್ಪಟ್ಟಿದ್ದು ಮಠಗಳನ್ನೂ ಸರಕಾರದ ಅಧೀನಕ್ಕೆ ತರುವ ಏರ್ಪಾಡು ಅದರಲ್ಲಿದೆ. ಈ ಬಗ್ಗೆ ಶಾಸನ ಸಭೆಯಲ್ಲಿಯೂ ಹೊರಗೂ ತೀವ್ರ ವಿರೋಧವಿದೆ. ಸ್ವಾಮಿ ಸತ್ಯಾನಂದರೆಂಬ ಹಳೆ ಕಾಂಗ್ರೆಸ್ಸಿಗರೊಬ್ಬರು ಅದನ್ನು ವಿರೋಧಿಸಿ ಅನೇಕ ದಿನಗಳಿಂದ ಉಪವಾಸ ಮಾಡುತಿದ್ದಾರೆ.

ವಿಜಯವಾಡದಲ್ಲಿ ಸೇರಿದ ಅ. ಭಾ. ಭಾಷಾವಾರು ಪ್ರಾಂತ ಸಮಿತಿಯ ಆಂಧ್ರ ಶಾಖೆಯ

ಹಿಂದುಸ್ತಾನ

ಯುಕ್ತ ಪ್ರಾಂತ

ಪುರಾಣ ಪ್ರಸಿದ್ಧವಾದ ಹಸ್ತಿನಾಪುರದಲ್ಲಿ ಪಡಭೂಮಿ ಸಾಗುವಳಿಯ ಪ್ರಗತಿಯನ್ನು ನಿರೀಕ್ಷಿಸಲು ಮುಖ್ಯ ಮಂತ್ರಿಗಳು ತಾ. ೬ ಅಲ್ಲಿಗೆ ಹೋಗಿದ್ದರು. ಬುಲ್ ಡೋಝರ ಮತ್ತು ಟ್ರಾಕ್ಟರುಗಳನ್ನು ಪಯೋಗಿಸಿ, ಪಡಬಿದ್ದ ಅಲ್ಲಿಯ ೪೭ ಸಾವಿರ ಎಕರೆ ಭೂಮಿಯಲ್ಲಿ ಇದೇ ಜೂನಿನೊಳಗಾಗಿ ೩೨ ಸಾವಿರ ಎಕರೆಯನ್ನು ಸಾಗುಮಾಡಲಾಗುವದು. ಮುಖ್ಯ ಮಂತ್ರಿಗಳು ಒಂದು ಯಾಂತ್ರಿಕ ನೇಗಿಲಲ್ಲಿ ಕುಳಿತು ಸ್ವತಃ ಸ್ವಲ್ಪ ಕಾಲ ಉತ್ತರು!

ಕಳ್ಳ ಪೇಟೆಯ ಪ್ರಕರಣಗಳ ವಿಚಾರಣೆಗಾಗಿ ಯುಕ್ತಪ್ರಾಂತ ಸರಕಾರವೊಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದೆ.

ಬಂಗಾಲ—ಬಿಹಾರ

ಪೂರ್ವ ಬಂಗಾಲದಿಂದ ಪಶ್ಚಿಮ ಬಂಗಾಲಕ್ಕೆ ವಲಸೆ ಬಂದ ನಿರಾಶ್ರಿತರ ಸಂಖ್ಯೆ ೧೧ ಕೋಟಿ ಅಲ್ಲವೆಂದೂ ಕೇವಲ ೧೫-೧೬ ಲಕ್ಷವೆಂದೂ ಸರಕಾರಿ ಪ್ರಕಟನೆ ಹೊರಟಿದೆ.

ಸಾಮ್ಯವಾದಿ ರಿಪಬ್ಲಿಕ್ ಪಕ್ಷದ ಸಂಸ್ಥಾಪಕರಾದ ಶ್ರೀ ಶರಚ್ಚಂದ್ರ ಬೋಸರು ಲಂಡನದಲ್ಲಿರುವ ಹಿಂದೀ ಹೈಕಮೀಶನರರ ಕಚೇರಿಯಲ್ಲಿ ಬ್ರಿಟಿಶ ನೌಕರರನ್ನಿಟ್ಟುಕೊಂಡದ್ದನ್ನು ಟೀಕಿಸಿ ಈಗಿನ ಹೈಕಮೀಶನರರು ಅಲ್ಲಿನ ಹಿಂದೀ ವಿದ್ಯಾರ್ಥಿಗಳಲ್ಲಿ ಅತ್ಯಂತ ಅಪ್ರಿಯರಾಗಿದ್ದಾರೆಂದು ಆರೋಪಿಸಿದ್ದಾರೆ.

ಬಿಹಾರ ಪ್ರಾಂತದ ಶಿಕ್ಷಕರ ಪಗಾರ ಪ್ರಮಾಣವನ್ನು ಸರಕಾರದವರು ಹೆಚ್ಚಿಸಲು ನಿರ್ಧರಿಸಿದ್ದಾರೆ. ಪ್ರಾಥಮಿಕ ಮಾಧ್ಯಮಿಕ ಮತ್ತು ಕಾಲೇಜು ಎಲ್ಲ ಶಿಕ್ಷಕರಿಗೂ ಪಗಾರ ಹೆಚ್ಚಿಸುವ ಈ ಯೋಜನೆಯಿಂದ ಸರಕಾರಕ್ಕೆ ವರ್ಷಕ್ಕೆ ೧॥ ಕೋಟಿ ಹೆಚ್ಚು ವೆಚ್ಚ ಬರುವದು.

ಹಿಂದೀ ಕಮ್ಯುನಿಸ್ಟ ಪಕ್ಷದಲ್ಲಿ ದೊಡ್ಡ ಪ್ರಮಾಣದ ಶುದ್ಧಿಕ್ರಿಯೆ ನಡೆದಿದ್ದು ಸ್ವತಃ ಕಾರ್ಯದರ್ಶಿ ಪೂರ್ಣಚಂದ್ರ ಜೋಶಿಯವರನ್ನು ತಳ್ಳಿ ಹಾಕಲಾಗಿದೆ. ಅನಂತಸಿಂಗ, ಶ್ರೀ ಆಚಾರ್ಯ, ಸುನೀಲ ಕುಮಾರ ಡಾ.(ಶ್ರೀಮತಿ) ಅಚ್ಚಮಾಂಬಾ ಮೊದಲಾದವರನ್ನು ಪಕ್ಷದಿಂದ ಹೊರಹಾಕಲ್ಪಾಗಿದೆಯಂತೆ. ಶ್ರೀ ರಣದಿವೆಯವರು ಈಗ ಕಾರ್ಯದರ್ಶಿಗಳು.

ಮಯೂರಭಂಜ ಸಂಸ್ಥಾನವನ್ನು ಓಡಿಸಾಕ್ಕೆ ಸೇರಿಸಿದ್ದರ ವಿರುದ್ಧ ಪ್ರದರ್ಶನ ಮಾಡಿ ಆಕ್ರಮದಿಂದ ವರ್ತಿಸಿದ ರಾಯರಂಗಪುರ ಆದಿವಾಸಿಗಳ ಗುಂಪುಗಳ ಮೇಲೆ ಮಿಲಿಟರಿ ಪೋಲೀಸರು ಗೋಳೀಬಾರು ಮಾಡಿದ್ದರಿಂದ ೭ ಮರಣಗಳಾಗಿ ೧೪ ಜನರಿಗೆ ಗಾಯವಾಗಿದೆ. ಮಯೂರಭಂಜ ಸಂಸ್ಥಾನ ಬಿಹಾರಕ್ಕೆ ಸೇರಬೇಕೆಂದು ಅವರ ಹಟ.

ಮಧ್ಯಪ್ರಾಂತ

ಪಲಗಾನದಿಂದ ನಾಲ್ಕು ಮೈಲಿನಲ್ಲಿರುವ ಕೇಂದ್ರ ಸರಕಾರದ ಶಸ್ತ್ರಾಗಾರದಲ್ಲಿ ತಾ. ೩೧ ರಾತ್ರಿ ಬೆಂಕಿ ಹತ್ತಿ ಸ್ಫೋಟವಾಗಿ ೫೦೦೦೦ ರೂಪಾಯಿ ಹಾನಿಯಾಗಿದೆ.

ಮಧ್ಯಪ್ರಾಂತದಲ್ಲಿಯ ೧ ಲಕ್ಷ ನಿರಾಶ್ರಿತರಿಗೆ ವಸತಿನಿರ್ಮಾಣಕ್ಕಾಗಿ ಮತ್ತು ಅವರನ್ನು ಉದ್ಯೋಗಗಳಲ್ಲಿ ತೊಡಗಿಸಲು ಕೇಂದ್ರದಿಂದ ೪.೯೫ ಕೋಟಿ ರೂಪಾಯಿ ಸಾಲ ಕೊಡಲಾಗುವದೆಂದು ತಿಳಿಯುತ್ತದೆ.

ಸಭೆಯಲ್ಲಿ ಮಹಾತ್ಮಾ ಗಾಂಧಿಯವರ ಸೂಚನೆಯಂತೆ ಸದ್ಯದ ಕಾಂಗ್ರೆಸ್ ಆಡಳಿತದ ಪ್ರಾಂತಿಕ ಗಡಿಗಳನ್ನೆ ತಾತ್ಪೂರ್ತಿಕ ಗಡಿಗಳಾಗಿ ಮಾಡಿಕೊಂಡು ಪ್ರಾಂತಗಳ ಪುನಾರಚನೆಯಾಗಬೇಕೆಂದೂ ಐದು ವರ್ಷಗಳೊಳಗೆ ಕೊನೆಯ ಸೀಮಾರೇಖೆಗಳನ್ನು ನಿರ್ಣಯಿಸಿ ಕೊಡಲು ಗಡಿಸಮಿತಿ ನೇಮಿಸಲ್ಪಡಬೇಕೆಂದೂ ಗೊತ್ತುವಳಿಯಾಯಿತು.

ಫೆಬ್ರುವರಿ ಪ್ರಾರಂಭದಲ್ಲಿ ಮದ್ರಾಸದಲ್ಲಿ ಸೇರಿದ ಹಿಂದುಸ್ತಾನ ಮುಸ್ಲಿಂ ಲೀಗಿನ ಕಾರ್ಯಸಮಿತಿಯಲ್ಲಿ, ಕಾಶ್ಮೀರದಲ್ಲಿ ಯುದ್ಧ ನಿಲ್ಲಿಸುವ ನಿರ್ಣಯಮಾಡಿದ ಬಗ್ಗೆ ಉಭಯ ಸರಕಾರಗಳನ್ನು ಅಭಿನಂದಿಸುವ ಮತ್ತು ಅಲ್ಪಸಂಖ್ಯಾಕರಿಗೆ ಪ್ರತ್ಯೇಕ ಮತದಾನ ಸಂಘಗಳನ್ನು ಬೇಡುವ ಹಾಗು ಇತರ ಗೊತ್ತುವಳಿಗಳಾದವು.

ಹೊಸದಿಲ್ಲಿ

ಮುಂಬಯಿಗೆ ಹೊರಟಿದ್ದ ಪಂಜಾಬ ಮೇಲಗಾಡಿ ಬೀನಾ-ಭೋಪಾಲ ವಿಭಾಗದಲ್ಲೊಂದೆಡೆ ಹಳಿತಪ್ಪಿ ಉರುಳಿ ಮೂವರಿಗೆ ಗಾಯವಾಯಿತು. ವಿಘಾತಕ ಚಟುವಟಿಕೆಗಾರರ ಕುತಂತ್ರವೆಂದು ಶಂಕಿಸಲಾಗಿದೆ.

“ಗ್ಲಿಂಪ್ಸಸ್ ಆಫ್ ಗಾಂಧೀಜಿ”ಯೆಂಬ ಶ್ರೀ ರಂಗನಾಥ ದಿವಾಕರರ ಇಂಗ್ಲಿಷ್ ಗ್ರಂಥವೊಂದು ಗಾಂಧೀ ಪುಣ್ಯತಿಥಿಯ ದಿನ ಪ್ರಕಟವಾಯಿತು. ಸರದಾರ ವಲ್ಲಭಭಾಯಿಯವರ ಮುನ್ನುಡಿ ಸಹಿತವಾದ ಈ ಗ್ರಂಥದ ಕನ್ನಡ ಹಾಗು ಹಿಂದೀ ಆವೃತ್ತಿಗಳೂ ಸಿದ್ಧವಾಗುತ್ತಿವೆ.

ಹಿಂದುಸ್ತಾನ-ಪಾಕಿಸ್ತಾನ ಸರಕಾರಗಳಲ್ಲಿ ಈಚೆಗೆ ಆದ ಒಡಂಬಡಿಕೆಯನ್ವಯ ಅಪಹೃತ ಸ್ತ್ರೀ-ಬಾಲ-ಬಾಲಿಕೆಯರ ಶೋಧದ ವಿಷಯದಲ್ಲಿ ಪೋಲೀಸರಿಗೆ ಹೆಚ್ಚು ಅಧಿಕಾರಕೊಡುವ ಸುಗ್ರೀವಾಜ್ಞೆಯನ್ನು ಗವರ್ನರ ಜನರಲ್ಲರು ಹೊರಡಿಸಿದ್ದಾರೆ. ಅಪಹೃತರನ್ನು ಬಚ್ಚಿಟ್ಟುಕೊಂಡ ಅಪರಾಧಿಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳ ಏರ್ಪಾಡೂ ಅದರಲ್ಲಿದೆ.

ಪ್ರತಿಫಲಾಪೇಕ್ಷೆಯಿಲ್ಲದೆ ಸಾಧ್ಯವಿದ್ದಷ್ಟು ಗೋದಿಯನ್ನು ಭಾರತಕ್ಕೆ ಕಳಿಸಲಾಗುವದೆಂಬ ಆಶ್ವಾಸನವನ್ನು ಭಾರತದಲ್ಲಿ ಆಸ್ಟ್ರೇಲಿಯನ್ ಹೈಕಮಿಶನರರಾದ ಶ್ರೀ ಗೊಲ್ಲಾನರು ಸುದ್ದಿಗಾರರ ಸಭೆಯಲ್ಲಿ ಕೊಟ್ಟಿದ್ದಾರೆ.

ಗಾಂಧೀಜಿಯ ಪುತ್ರರೂ ದರ್ಬಾನದ “ಇಂಡಿಯನ್ ಒಪೀನಿಯನ್” ಸಂಪಾದಕರೂ ಆದ ಮಣಿಲಾಲ ಗಾಂಧಿಯವರು ದ. ಆಫ್ರಿಕೆಯಲ್ಲಿ ಹಿಂದೀಯರು “ಪರಿಜನ ಕೇರಿ”ಗಳಲ್ಲಿ ವಾಸಿಸಬೇಕಾಗಿದೆಯೆಂದೂ ಸ್ವಾರ್ಥತ್ಯಾಗ ಮತ್ತು ಸಾತ್ವಿಕ ತೇಜಸ್ಸಿನ ಕೊರತೆಯೆ ಭಾರತದ ಆರ್ಥಿಕ ದಿಗ್ಬಂಧನ ಕ್ರಮಗಳು ದ. ಆಫ್ರಿಕಾ ಸರಕಾರದ ಮೇಲೆ ಪರಿಣಾಮ ಮಾಡದಿರಲು ಕಾರಣವೆಂದೂ ಅ. ಭಾ. ಆಕಾಶವಾಣಿಯಲ್ಲಿ ಹೇಳಿದರು.

ಕೈಮಗ್ಗಗಳು ಈ ದೇಶಕ್ಕೆ ನಿರುಪಯುಕ್ತವಾದ ಬಟ್ಟೆಗಳನ್ನು ತಯಾರಿಸಿದ್ದರಿಂದ ಅವನ್ನು ಪಾಕಿಸ್ತಾನ ಹೊರತು ಬೇರೆ ಪರದೇಶಗಳಿಗೆ ಕಳಿಸಲು ಅನಿರ್ಬಂಧ ಅನುಮತಿಯನ್ನು ಕೊಡಲಾಗಿದೆ.

ಧಾರವಾಡದ ಆಕಾಶವಾಣಿ ಕೇಂದ್ರ ೧೯೪೯ ಜೂನಿನೊಳಗೆ ಸಿದ್ಧವಾಗುವದೆಂದು ಸುದ್ದಿ ಮಂತ್ರಿ ಶ್ರೀ ದಿವಾಕರರು ಹಿರಿಯೋಲಗದಲ್ಲಿ ಹೇಳಿದರು.

೧೯೪೮ ನವೆಂಬರಕ್ಕೆ ಅಂತ್ಯವಾದ ೮ ತಿಂಗಳಲ್ಲಿ ಭಾರತ ಸರಕಾರಕ್ಕೆ ರೂ. ೫೮.೭೫ ಕೋಟಿ ಉಳಿತಾಯವಾಗಿದೆ. ಆಯ ೧೯೯.೩೫ ಕೋಟಿ, ವ್ಯಯ ೧೪೦.೫೨ ಕೋಟಿ, ಸಂರಕ್ಷಣ ವೆಚ್ಚ ೭೯-೫ ಕೋಟಿ.

ರಾ. ಸ್ವ. ಸಂಘದ ಸತ್ಯಾಗ್ರಹದ ಉಪಸಂಹಾರಕ್ಕೆ ಕಾರಣರಾದ ಶ್ರೀ ಜಿ. ವಿ. ಕೇತಕರರು ಸಂಘಕ್ಕೆ ಬಹಿರಂಗವಾಗಿ ವರ್ತಿಸಬೇಕಾದರೆ ಅವಶ್ಯವಾದ ಘಟನೆಯ ಕರಡನ್ನು ಸಿದ್ಧಪಡಿಸುತಿದ್ದು, ಅದು ಮುಗಿದೊಡನೆ ಸಂಘದವರ ಬಿಡುಗಡೆಗಾಗಿ ಸರದಾರ ಪಟೇಲರನ್ನು ಕಾಣಲಿರುವರು.

ರಾಜಮುಖ ಚಿಹ್ನೆಯುಳ್ಳ ಈಗಿನ ನೋಟುಗಳ ಸ್ಥಾನದಲ್ಲಿ ಅಶೋಕಸ್ತಂಭವನ್ನು ಧರಿಸಿದ ಹೊಸ ರೂ. ೩, ೫ ಮತ್ತು ೧೦೦ ರ ನೋಟುಗಳು ಬೇಗನೆ ಬರಲಿವೆ. ಅಶೋಕಸ್ತಂಭ ಯುಕ್ತವಾದ ೧ ರೂ. ನೋಟು ಇದೇ ಅಗಸ್ಟದಲ್ಲಿಯೆ ಬಳಕೆಗೆ ಬರುವದು.

ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಸುದ್ದಿ ಮಂತ್ರಿಗಳ ಪರಿಷತ್ತು ಕೇಂದ್ರ ಸುದ್ದಿ ಮಂತ್ರಿ ಶ್ರೀ ರಂ. ರಾ. ದಿವಾಕರರ ಅಧ್ಯಕ್ಷತೆಯಲ್ಲಿ ಸೇರಿ ಬಾನುಲಿ, ದೃಶ್ಯ ಮತ್ತು ವಾಚ್ಯ ಸುದ್ದಿ ಪ್ರಸರಣದ ಬಗ್ಗೆ ಚರ್ಚೆಯಾಗಿ ಹೆಚ್ಚಿನ ಯೋಜನೆಗೆ ಒಂದು ಸಮಿತಿ ನೇಮಿಸಲ್ಪಟ್ಟಿತು.

ಡಚ್ಚರು ಇಂಡೋನೇಶಿಯಾದಲ್ಲಿ ಯುದ್ಧ ಪ್ರಾರಂಭಿಸಿರುವದರಿಂದ ಅವರ ವಿಮಾನಗಳಿಗೆ ಭಾರತದಲ್ಲಿ ಹಾದುಹೋಗಲು ಪ್ರತಿಬಂಧ ಹಾಕಿದ್ದು ಶಿಕಾಗೋ ವಿಮಾನ ಒಪ್ಪಂದದ ಭಂಗವಾಗಲಾರದೆಂದು ಸರಕಾರ ಪ್ರಕಟನೆ ಹೊರಡಿಸಿದೆ.

ಪೂರ್ವ ಪಂಜಾಬ

ಪತಿಯಾಳಾ ಮೊದಲಾದವುಗಳನ್ನೊಳಗೊಂಡ ಪೂರ್ವ ಪಂಜಾಬ ಸಂಸ್ಥಾನಗಳ ಒಕ್ಕೂಟವನ್ನು ಪೂ. ಪಂ. ಪ್ರಾಂತದಲ್ಲಿ ಲೀನಗೊಳಿಸಬೇಕೆಂಬ ಅಭಿಪ್ರಾಯವನ್ನು ಮಂತ್ರಿಗಳಾದ ಜ್ಞಾನಿ ಕರ್ತಾರ ಸಿಂಗರು ವ್ಯಕ್ತಗೊಳಿಸಿದರು. ಪೂ. ಪಂಜಾಬದ ರಾಜಕಾರಣದಲ್ಲಿ ಪತಿಯಾಳಾ ಮಹಾರಾಜರು ಕೈಹಾಕುತಿರುವರೆಂದು ದೂರಿದ್ದಿದೆ.

ಪೂರ್ವಪಂಜಾಬದಲ್ಲಿ ಹರಿಜನರಿಗೂ ಹಿಂದುಳಿದ ವರ್ಗದವರಿಗೂ ಶಾಲೆ ಕಾಲೇಜುಗಳ ಶಿಕ್ಷಣ ಪುಕ್ಕಟೆಯಾಗಿ ದೊರೆಯುವ ಏರ್ಪಾಡು ಮಾಡುವದಾಗಿ ಮುಖ್ಯ ಮಂತ್ರಿ ಡಾ. ಭಾರ್ಗವರು ಸಾರಿದ್ದಾರೆ.

ಸಂಸ್ಥಾನಗಳು

ವರಂಗಲ್ ಜಿಲ್ಹೆಯಿಂದ ಕಮ್ಯುನಿಸ್ಟ ಹಾವಳಿಗಾರರನ್ನು ಉಚ್ಚಾಟನೆ ಮಾಡಲು ಪೋಲೀಸರ ಮತ್ತು ಸೈನಿಕರ ಚಟುವಟಿಕೆ ಪ್ರಾರಂಭವಾಗಿದೆ. ಗಡಿಪ್ರದೇಶಗಳಲ್ಲಿ ಕಮ್ಯುನಿಸ್ಟರ ಕಣ್ಣುಚ್ಚಾಲೆಯನ್ನು ನಿಲ್ಲಿಸಲು ಮದ್ರಾಸ-ಹೈದರಾಬಾದ ಸರಕಾರಗಳಲ್ಲಿ ಮಾತುಕತೆಯಾಯಿತು. ಈ ಕ್ರಮಗಳ ಫಲವಾಗಿ ಕಮ್ಯುನಿಸ್ಟರು ಧೈರ್ಯಗುಂದಹತ್ತಿದ್ದಾರೆ.

ಭೋಪಾಲದಲ್ಲಿ ವಿಲಯನ ಸತ್ಯಾಗ್ರಹಿಗಳಲ್ಲಿ ಅಧಿಕಸಂಖ್ಯರು ಬಿಡುಗಡೆಹೊಂದಿದ್ದು, ನವಾಬರು ಒಂದು ಪ್ರಕಟನೆ ಹೊರಡಿಸಿ ಶಾಂತ ಪರಿಸ್ಥಿತಿ ಸ್ಥಾಪಿತವಾದೊಡನೆ ಸಂಸ್ಥಾನದ ಭವಿತವ್ಯ ನಿಶ್ಚಯ ಮಾಡುವದಾಗಿ ಆಶ್ವಾಸನವಿತ್ತಿದ್ದಾರೆ.

ರಾಜಕೋಟದ ದ್ವಾರಕಾದೇವಾಲಯದಲ್ಲಿ ಹರಿಜನರ ಪ್ರವೇಶವಾಗಿದೆ.

ಪಾಕಿಸ್ತಾನ

ಗಂಗಾ ಬ್ರಹ್ಮಪುತ್ರಾ ನದಿಗಳ ಸಂಗಮಿತ ಪ್ರವಾಹವಾದ ಮೇಘನಾ ನದಿಯ ಎಡ ದಂಡೆ ಕುಸಿದು ಬೀಳುತಿದ್ದು ನೌಖಾಲಿ ನಗರದ ಅನೇಕ ಭಾಗಗಳು ಮುಳುಗಿಹೋಗಿವೆ. ಸ್ಥಾನಿಕ ಸ್ವರಾಜ್ಯ ಮಂತ್ರಿ ಹಬೀಬುಲ್ಲಾ ಬಹಾರರು ಪರಿಸ್ಥಿತಿಯ ಪರಿಶೀಲನೆ ನಡೆಸಿ ಹೋದರು.

ಸಿಂಧದ ಪೀರ ಇಲಾಹಿ ಬಕ್ಷ ಮಂತ್ರಿಮಂಡಲ ರಾಜೀನಾಮೆ ಕೊಟ್ಟಿದೆ. ಮೀರ ಗುಲಾಮ ಅಲಿಖಾನ ತಾಲಪುರರ ಧುರೀಣತ್ವದಲ್ಲಿ ತಾತ್ಪೂರ್ತಿಕ ಮಂತ್ರಿಮಂಡಲ ಸ್ಥಾಪಿಸಲ್ಪಟ್ಟಿದೆ. ಶ್ರೀ ಜಿ. ಎಂ. ಸಯ್ಯದರು ಕೊಟ್ಟ ಅರ್ಜಿಯ ವಿಚಾರಣೆಯಿಂದ ಶ್ರೀ ಬಕ್ಷರೇ ಮೊದಲಾದ ೪ ಸಭಾಸದರು ೧೯೪೬ ರ ಚುನಾವಣೆಗಳಲ್ಲಿ ನಡೆಸಿದ ಅಕಾರ್ಯಗಳು ಹೊರಬಿದ್ದುದರಿಂದ ಅವರ ಸದಸ್ಯತ್ವ ರದ್ದಾಗಿ ೬ ವರ್ಷಕಾಲ ಶಾಸನ ಸಭಾ ಸದಸ್ಯತ್ವಕ್ಕೆ ಅವರು ಅನರ್ಹರಾಗಿ ಮಾಡಲ್ಪಟ್ಟಿದ್ದಾರೆ.

ತಾ ೩೦ ಕ್ಕೆ ಸರ್ವೋದಯ ದಿನಾಚರಣೆಗಾಗಿ ಕರಾಚಿಯಲ್ಲಿ ಮಹಾತ್ಮಾ ಗಾಂಧಿಯವರ ಪುತ್ಥಳಿಗೆ ಹೂಮಾಲೆಯನ್ನು ಅರ್ಪಿಸಲು ಪಾಕಿಸ್ತಾನದಲ್ಲಿರುವ ಹಿಂದೀ ಹೈಕಮಿಶನರರಿಗೆ ಪಾಕಿಸ್ತಾನ ಸರಕಾರದವರು ಅಪ್ಪಣೆ ಕೊಡಲಿಲ್ಲ. ಆದರೆ ಪೂ. ಬಂಗಾಲದ ರಾಜಧಾನಿ ಡಾಕಾದಲ್ಲಿ ಈ ದಿನಾಚರಣೆಯಲ್ಲಿ ಗವರ್ನರ ಜನರಲ್ ನಾಜೀಮುದ್ದೀನರು ಕೂಡ ಭಾಗವಹಿಸಿದ್ದರು!

ಚೆಲುವೆಯ ಗಂಡ

(೨ನೇ ಪುಟದಿಂದ)

ನೋಡಿಯೆ ಇದ್ದೆನಲ್ಲ. ಸಿನೇಮಾಕ್ಕೆ ಅಥವಾ ಕಾನ್ಸರ್ಟಿಗೆ ಹೊರಟರೆ ರಸ್ತೆಯಲ್ಲಿ ಜನರು ಗುಂಪುಗಟ್ಟಿ ಅವಳ ರೂಪಲಾವಣ್ಯಗಳನ್ನು ಪಿಳಿಪಿಳಿ ನೋಡುತಿದ್ದರು. ಚುರೂಟಿನ ಚಟ ಬಿದ್ದವನಿಗೆ ಅದು ದೊರೆಯದಿದ್ದರೆ ಹೇಗೋ ಹೇಗೋ ಅನಿಸುವಂತೆ ಅವಳಿಗೂ ರೂಪ ಮುಗ್ಧ ಸ್ತುತಿಪಾಠಕರು ಸುತ್ತಲೂ ಇಲ್ಲದಿದ್ದರೆ ಭಣಭಣ ಎನಿಸುತಿತ್ತು. ಸೌಂದರ್ಯ ಭಕ್ತರ ಮತ್ತು ಮಧುಕರ ವೃಂದದ ಸಾಮೀಪ್ಯವನ್ನು ತಾಳಿಕೊಳ್ಳಬಲ್ಲವನೆ ಸುಂದರಿಯರ ಕೈಹಿಡಿದು ಬದುಕಬಲ್ಲ. ಆ ತಾಳ್ಮೆ ಇಲ್ಲದವನು ಸುಂದರ ತರುಣಿಯರನ್ನು ಮದುವೆ ಮಾಡಿಕೊಂಡರೆ ಕೆಟ್ಟ.

ಮರುದಿನ ಮುಂಜಾನೆ ಇವೇ ಮಾತುಗಳನ್ನು ಚಿಂತಿಸುತ್ತ ಸರೋವರದ ದಂಡೆಯ ಮೇಲೆ ತಿರುಗಾಡುತಿದ್ದೆ. ಅಗಾಥೆ ಇನ್ನೂ ನಿದ್ದೆಯಿಂದ ಎಚ್ಚತ್ತಿರಲಿಲ್ಲ. ತಂಗಾಳಿಗೆ ಮೈಯೊಡ್ಡಿ ಸಂಚರಿಸುತಿದ್ದಾಗ್ಗೆ ನನಗೆ ಹಠಾತ್ತಾಗಿ ಒಂದು ಉಪಾಯ ಹೊಳೆಯಿತು. ಅಲ್ಲಿಂದ ನೇರವಾಗಿ ಡ್ರೇಸರನ ಬಂಗಲೆಗೆ ಹೋದೆ. ಡ್ರೇಸರ ಯಾರೆಂದು ನಿನಗೆ ಗೊತ್ತೇ ಇದೆ. ಅವನು ಬವೇರಿಯನ್ ನಾಟಕ ಕಂಪನಿಯ ಪ್ರಮುಖ. ಹೆಸರಾದ ವಿದೂಷಕ ನಟ. ಅವನನ್ನು ಕಂಡು ಹೇಳಿದೆ, “ಗೆಳೆಯ, ನನ್ನ ಒಂದು ಕೆಲಸವನ್ನು ಮಾಡಿಕೊಡಬೇಕು ನೀನು. ಈ ಊರಲ್ಲಿ ನಿನಗೆ ಎಲ್ಲರ ಪರಿಚಯ ಇದ್ದೇತೀರಬೇಕು. ನನಗೆ ಒಬ್ಬ ಸುಂದರ ಮನುಷ್ಯ ಬೇಕಾಗಿದ್ದಾನೆ. ಹುಡುಕಿ ಕೊಡುವಿಯಾ? ಅವನು ಒಕ್ಕಲಿಗನಾಗಿರಲಿ, ಕಾರಕೂನನಿರಲಿ, ಕೂಲಿಕಾರ ಬೇಕಾದರೆ ಆಗಿರಲಿ. ನನ್ನ ಹೆಂಡತಿಯ ಮುಂದೆ ಸೌಂದರ್ಯ ಮುಗ್ಧತೆಯನ್ನು ಅಭಿನಯಿಸಲು ಮಾತ್ರ ಅವನಿಗೆ ಬರುತಿದ್ದರೆ ಸಾಕು. ಅರ್ಥಾತ್ ಅದಕ್ಕೆ ತಕ್ಕ ಕೂಲಿ ಅವನಿಗೆ ಕೊಟ್ಟೇಕೊಡುವೆ!”

“ಅಂ, ಏನಂದೆ? ಸೌಂದರ್ಯ-ಭಕ್ತ, ಸ್ತ್ರೀ ಸೌಂದರ್ಯ ಭಕ್ತ ಬೇಕೆ?”

“ಹೌದು, ಅಂಥವನೇ ಬೇಕಾಗಿದ್ದಾನೆ” ಎಂದೆ ನಾನು. “ರೂಪರಸಿಕ ಬೇಕಾಗಿದ್ದಾನೆ ನನಗೆ. ಅವನಿಗೆ ಬೇರೇನೂ ಕೆಲಸವಿಲ್ಲ. ನನ್ನ ಹೆಂ[illegible] ಬಿದತ್ತ ನೋಡುತಿರಬೇಕು, [illegible] ನೋಡುತಿರಬೇಕು, ಎವೆ [illegible]ರಬೇಕು. ಇಂಥ ಒಬ್ಬ [illegible]ತ್ತುಮಾಡಿಕೊಡು. ಈ [illegible] ಹೆಂಡತಿ ಅಗಾಥಾಳಿಗೆ [illegible] ಇದೊಂದೇ. ಚಿಕ್ಕಂದಿನಿಂದ [illegible] ಪ್ರಶಂಸೆಯನ್ನು ಕೇಳಿ ಕೇಳಿ, [illegible]ಜೆಯನ್ನು ಪಡೆದು ಪಡೆದು ಅದು [illegible]ಂಗಾಂಗಗಳಲ್ಲಿ ವ್ಯಾಪಿಸಿಬಿಟ್ಟಿದೆ. [illegible], ಆ ಮನುಷ್ಯನಿಗೆ ಅದೇ ಕೆಲಸ. [illegible]ಲ್ಲಿ ಕುಳಿತು, ನನ್ನ ಹೆಂಡತಿಯ [illegible]ದ ಕಡೆಗೆ ರೂಪಮೋಹಿತನಂತೆ ನಟ್ಟ [illegible]ಬಿದಿಂದ ನೋಡಬೇಕು!”

[illegible]ನ್ನ ಕೆಲಸ ಮಾಡಿಕೊಡಲು ಡ್ರೇಸರನು [illegible]ಟಿಗಾಲಲ್ಲಿ ಸಿದ್ಧನಾದನು. ಅಂದರೆ ಅವನ ಕೆಲಸ ಬರೀ ನೋಡುತ್ತ ಕೂಡುವದು, ಹೌದೋ ಅಲ್ಲವೊ?”

“ಹೌದು ಹೌದು ಅಷ್ಟೆ. ಆದರೆ ನಡುವೆಯೆ ಅವನು ಎದೆಗುಂದಿದನೆಂದರೆ ನಾನು ಕೇಳುವವನಲ್ಲ.” ಎಂದು ಎಚ್ಚರಿಕೆ ಕೊಟ್ಟೆ ನಾನು.

“ನನ್ನ ಗುರುತಿನ ನಟನೊಬ್ಬ ಇದ್ದಾನೆ. ಅವನಿಗೆ ಈ ಕೆಲಸ ಒಪ್ಪಿಸೋಣ. ಅವನು ಈ ಅಭಿನಯವನ್ನು ನಿಶ್ಚಯವಾಗಿ ಮಾಡಬಲ್ಲ.”

“ಆದರೆ ಮಾತಾಡಲು, ನೋಡಲು, ನಡೆಯಲು ಹೇಗಿದ್ದಾನೆ ಆತ?”

“ಅದರ ಚಿಂತೆ ಬಿಡು, ಪಾಲ! ಕಾಣಲು ಮಾತಾಡಲು ಅವನು ಹೇಗಿದ್ದರೆ ನಿನಗೇನು-? ಮುಖ್ಯವಾದ್ದು ಅವನ ದೃಷ್ಟಿ, ಅವನ ಹಾವ ಭಾವ. ಇಂಥ ಪ್ರಕರಣಗಳಲ್ಲಿ ಹೆಂಗರು ತಮ್ಮ ಸ್ವಂತ ಸೌಂದರ್ಯವನ್ನು ಮೆರೆಸಿ ತೋರಿಸುವದರಲ್ಲೆ ಪೂರ್ತಿ ಮಗ್ನರಾಗಿರುವದರಿಂದ ಉಳಿದ ಮಾತುಗಳ ಕಡೆ ಅವರ ಲಕ್ಷ್ಯವೆ ಇರುವದಿಲ್ಲ.”

ಡ್ರೇಸರನು ಗೊತ್ತುಮಾಡಿದಂತೆ ಅಂದು ಮಧ್ಯಾಹ್ನವೆ ಆ ನಟನು ತನ್ನ ಈ ವಿಚಿತ್ರವಾದ ನೌಕರಿಯ ಮೇಲೆ ಹಾಜರಾದನು. ಆ ನಟನ ಕರುಣಕೋಮಲ ದೃಷ್ಟಿ-ಮತ್ತು ಆ ದೃಷ್ಟಿಯಲ್ಲಿಯ ಶಾಂತ ಧೀರತೆ,-ಛೆ, ಅವನಂಥ ಬೇರೆ ನಟ ಸಿಗುವದೇ ಸಾಧ್ಯವಿಲ್ಲ.

ಅದೇ ದಿವ್ಯ ಸಾಯಂಕಾಲದಲ್ಲಿ ನಾನು ಹಾಟೆಲಿಗೆ ಮರಳಿದೆ. ಅಗಾಥಾ ಅಗ್ಗೆ ಹೊರಗೆ ತೋಟದಲ್ಲಿ ಕುಳಿತಿದ್ದಳು. ನಾನು ನೇಮಿಸಿದ್ದ ಆ ನಟ ಪ್ರೇಮಿಕ ತನ್ನ ಕೆಲಸವನ್ನು ಅತ್ಯಂತ ದಕ್ಷತೆಯಿಂದ ಮಾಡುತಿದ್ದ. ಇಷ್ಟು ಸ್ವಲ್ಪ ಅವಧಿಯಲ್ಲಿಯೆ ಅವನಿಗೆ ಸಾಕಷ್ಟು ಯಶ ದೊರೆತಿತ್ತು.

ನಾನು ಹೀಗೇ ಅವಳನ್ನು ಕೇಳಿದೆ, “ಅಗಾಥಾ, ನಾಳೆ ಹೊರಡಲು ಯಾವ ಗಾಡಿ ಅನುಕೂಲವೆಂದು ನೋಡಲು ಸ್ಟೇಶನ್ನಿಗೆ ಹೋಗಿದ್ದೆ. ಹತ್ತೂವರೆಯ-ಗಾಡಿ ತುಂಬ ಅನುಕೂಲ ಕಾಣುವದು.”

ಅಗಾಥಾ ನುಡಿದಳು, “ಪಾಲ, ನೀನು ಹೀಗೇಕೆ ಹೇಳುವಿಯೋ ತಿಳಿಯದಾಗಿದೆ. ಒಂದೇ ಸ್ಥಳದಲ್ಲಿ ದಟ್ಟ ಮನಸುಮಾಡಿ ಎರಡು ದಿನ ಕೂಡ ನಿಲ್ಲಲು ನಿನ್ನಿಂದಾಗುವದಿಲ್ಲೆಂದು ತೋರುತ್ತದೆ. ನನಗೆ ಈ ಊರು ತುಂಬ ಹಿಡಿಸುತ್ತದೆ ನೋಡು. ಈ ಸರೋವರ ಕೂಡ.”

“ಏನು ಸರೋವರವೊ! ನನಗಂತೂ ಅದೇನೂ ಸೇರುವದಿಲ್ಲ ನೋಡು” ಎಂದು ನಾನು ಕೆಣಕಿದೆ.

“ಸೇರದಂಥಾದ್ದು ಅದರಲ್ಲೇನಿದೆಯೊ ನಿನಗೆ!” ಅಗಾಥಾಳ ದನಿ ಸ್ವಲ್ಪ ಏರಿತ್ತು.

“ಮತ್ತೆ ಆ ಗುಡ್ಡಗಳು. ಒಂದರ ಹಾಗೆಯೆ ಇನ್ನೊಂದು. ಒಂದರ ಹಿಂದೆ ಒಂದು. ಅವುಗಳಲ್ಲೇನಿದೆ ಚಂದ? ನನಗೆ ಒಂದೂ ಮೆಚ್ಚಿಕೆಯಿಲ್ಲ ನೋಡು, ಎಂದೆ ನಾನು.

ಅಗಾಥಾ ಹೇಳಿದಳು, “ಆ ಗುಡ್ಡಗಳ ತಪ್ಪಲಲ್ಲೇ ಇರಬೇಕೆಂದು ನನ್ನ ಆತುರ. ಈ ಬಯಲು ಹವೆ, ಸುಂದರ ಪ್ರಕಾಶ, ಮನಮೋಹಿಸುವ ನಿಸರ್ಗ, ಇವೆಲ್ಲವುಗಳಿಂದ ಒದಗುವ ಮನಸ್ಸಮಾಧಾನ, ತೃಪ್ತಿ ಮತ್ತೇತರಿಂದ ದೊರೆಯುವದು? ಬೇಕಾದರೆ ಡಾಕ್ಟರರನ್ನು ಕೇಳು! ಅವರಾದರೂ ನನಗೆ ಇದನ್ನೆ ಹೇಳಿದ್ದಾರೆ. ಇಂಥ ಆರೋಗ್ಯಕರ ಸ್ಥಳಗಳು ಸಿಗುವದೇ ವಿರಳ. ಇದರ ಹೊರತು, ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ಯಾತಾಯಾತ ಹಾಕುವದರಿಂದ ಏನು ಬಂದಂತಾಯಿತು? ಅದೊಂದೂ ನಾನೊಲ್ಲೆ. ನೀನು ನಿನ್ನ ರಜೆಯನ್ನು ಇಲ್ಲೇ ಕಳೆಯಲು ನಿಶ್ಚಯಿಸು. ಹಾಗೆ ನಿಶ್ಚಯಿಸಿದರೆ ಎಷ್ಟು ಆನಂದವಾದೀತು! ಏನ್ರೀ, ನಿಮಗೆ ಹೇಗನಿಸುವದು ಈ ಸ್ಥಳ?” ಎಂದು ನನ್ನ ಸಂಬಳದ ರೂಪಾರಾಧಕನ ಕಡೆ ನೋಡಿದಳವಳು.

ನಾನು ಹೆಚ್ಚಿಗೆ ಒತ್ತಾಯ ಮಾಡಲಿಲ್ಲ! ನಾವು ಆ ಮೇಲೆ ಮೂರು ವಾರಗಳವರೆಗೆ ಅಲ್ಲೆ ಇದ್ದೆವು. ಪ್ರತಿ ರವಿವಾರ ದಿನ ಆ ನಟ ತನ್ನ ಬಿಲ್ಲನ್ನು ನನಗೆ ಕಳಿಸುತಿದ್ದ. ಅದನ್ನು ತೆರಲು ನನಗೆ ಎಳ್ಳಷ್ಟು ಕಸಿವಿಸಿಯೆನಿಸುತಿರಲಿಲ್ಲ. ಅಲ್ಲಿಂದ ಹೊರಟು ಬರುವಾಗ್ಗೆ ಮಾತ್ರ ಆ ನಟನಿಗೆ ಒಂದು ಹೊಸ ಕೋಟನ್ನು ಹೊಲಿಸಿಕೊಡಬೇಕಾಯಿತು. ಯಾಕಂದರೆ ನೋಡು, ನನ್ನ ಈ ಅಭಿನಯದ ನೌಕರಿಯ ಅಂಗವಿಕಾರಗಳನ್ನು ಮಾಡುತಿದ್ದಾಗ್ಗೆ ತಾನೆ ಅವನ ಕೋಟಿನ ತೋಳುಗಳು ಸಂಪೂರ್ಣ ಹರಿದು ಹೋಗಿದ್ದು? ಅಂತೆಯೇ ನಾನೀಗ ನಿಶ್ಚಯಿಸಿಬಿಟ್ಟಿದ್ದೇನೆ. ಸುಂದರಿ ಹೆಂಡತಿಯೊಡನೆ ಹವೆ ಬದಲಿಸಲು ಹೋಗುವದಾದರೆ ಅದೇ ಊರಿಗೆ-ಡ್ರೇಸರನ ದೇಶಕ್ಕೆನೇ-ಹೋಗಬೇಕು!

ನಾರದ ಭವಿಷ್ಯ

ಜ್ಯೋತಿಷಿ-- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಪಿಡೇಬಝಾರ, ಬೆಳಗಾವಿ

ಫೆಬ್ರುವರಿ ತಾ. ೧೪ ರಿಂದ ೨೦ ರ ವರೆಗೆ

ಮೇಷ

ದೇಹಸೌಖ್ಯವೂ ಇದೆ, ತೋರಿಕೆಗೆ ಪ್ರಾಪಂಚಿಕ ಸುಖಕ್ಕೂ ಕೊರತೆಯಿಲ್ಲ. ಆದರೂ ದಾಂಪತ್ಯದ ತಪ್ಪು ತಿಳಿವಳಿಕೆಯಿಂದ ತುಂಬ ಎದೆಗುದಿಯಲ್ಲಿ ಸಿಕ್ಕುವಿರಿ. ಉದ್ಯೋಗದಲ್ಲಿ ಧಾರಾಳ ಲಾಭ. ಆದರೆ ನಿಮ್ಮ ಪ್ರತಿಷ್ಠೆಗೆ ಧಕ್ಕೆ. ಮೇಲಾಗಿ ಸ್ತ್ರೀಜನದ ವಿಷಯದಲ್ಲಿ ಅಪವಾದಕ್ಕೂ ಗುರಿಯಾಗುವಿರಿ. ವಾದಸ್ಪರ್ಧೆಗಳಲ್ಲಿ ಅನಿಶ್ಚಯ. ನಿಮ್ಮ ಸಸ್ಯ ಸಂಪತ್ತಿಗೂ ಮನೆ ಮಾರಿಗೂ ಹುಳು ಹುಪ್ಪಡಿಗಳ ಮತ್ತು ಕುಸಿದುಬೀಳುವ ಗಂಡಾಂತರ ಬರಬಹುದು ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ಮತ್ತು ಭರಣಿಯ ಮೊದಲಿನ ೩ ಚರಣಗಳು ತುಂಬ ಪ್ರಯತ್ನಶೀಲರಾಗಬೇಕು. ಸುದಿನಗಳು: ತಾ ೧೪, ೧೫, ೧೮, ೧೯.

ವೃಷಭ

ತಂದೆತಾಯಿಗಳಿಗೆ ಕ್ಲೇಶ ಆದರೆ ಉಳಿದವರೆಲ್ಲರಿಗೂ ಕ್ಷೇಮವೆ. ಪ್ರಾಪಂಚಿಕ ಸುಖವೂ ಸಮಾಧಾನಕರ. ಬಳಗದವರೊಡನೆ ಇಲ್ಲವೆ ನೆರೆಹೊರೆಯವರೊಡನೆ ನಿಷ್ಠುರ. ತರ್ಕ, ಬುದ್ಧಿ ಶಕ್ತಿಗಳನ್ನು ಉಪಯೋಗಿಸಬೇಕಾದ ಕೆಲಸಗಳಲ್ಲಿ ಸೈಸೈ ಎನಿಸಿಕೊಳ್ಳುವಿರಿ. ಉದ್ಯೋಗದಲ್ಲಿ ಪ್ರತಿಷ್ಠೆಗೆ ಕುಂದು ಮಕ್ಕಳ ಉನ್ನತಿ. ಪಾರಮಾರ್ಥಿಕ ಒಲವು. ವಾದ ಸ್ಪರ್ಧೆಗಳಲ್ಲಿ ಗೆಲವು. ಪ್ರವಾಸಾದಿ ಕಾರ್ಯಗಳೂ ಹಿತ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು ತಾ. ೧೬, ೧೭, ೨೦ ಅನುಕೂಲ.

ಮಿಥುನ

ಮಡದಿಯ ಮುನಿಸು. ಉದ್ಯೋಗದಲ್ಲಿ ಬಯಸಿದಷ್ಟೂ ಸಿದ್ಧಿ. ಮೇಲಾಗಿ ಮುಂದೆ ನಿಮಗೆ ಆಸ್ತಿಪಾಸ್ತಿಯ ವಾರಸಾ ಹಕ್ಕು ದೊರಕಿಸಿಕೊಡಬಹುದಾದ ಮಾತುಕತೆಗಳ ಪ್ರಾರಂಭ. ಮಿತ್ರಸುಖ ಉತ್ತಮ. ಅಸಾಧ್ಯ ಸಾಹಸದಲ್ಲಿ ಪ್ರವೃತ್ತಿ. ವಾದ ಸ್ಪರ್ಧೆಗಳು ಮನಸಿನಂತೆ. ಪ್ರವಾಸ, ಭೆಟ್ಟಿ ಅನುಕೂಲ. ಮೃಗಶೀರ್ಷದ ೪ ನೆ ಮತ್ತು ಆರ್ದ್ರೆಯ ಮೊದಲಿನ ೩ ಚರಣಗಳಿಗೆ ಅಷ್ಟು ಹಿತಕಾಲವಲ್ಲ. ತಾ. ೧೪, ೧೫, ೧೮, ೧೯, ಅನುಕೂಲ ದಿನಗಳು.

ಕರ್ಕ

ನೀವೊಂದು ಹೇಳಿದರೆ ಹೆಂಡತಿ ಮಕ್ಕಳು ಬೇರೊಂದು ಹೇಳುವರು. ಸಂಬಳ ಹೆಚ್ಚು ಬೇಡಿ ನೌಕರರು ಕೆಲಸದಲ್ಲಿ ಹರಕತ್ತು ಮಾಡುವರು. ಉದ್ಯೋಗದಲ್ಲಿ ಲಾಭಕ್ಕೆ ತೊಂದರೆಯಿಲ್ಲ. ಆದರೆ ಹೆಂಡತಿಯಿಂದ ಸಿಕ್ಕಾಬಟ್ಟೆ ಖರ್ಚು. ಮಿತ್ರಸುಖ ಅನುಕೂಲವಾದರೂ ಶತ್ರುವಿನ ಕೈಯಲ್ಲಿ ಸೋಲುವಿರಿ. ಪತ್ರವ್ಯವಹಾರ ಅನುಕೂಲ ಪುಷ್ಯದ ೪ ನೇ ಮತ್ತು ಆಶ್ಲೇಷದ ಮೊದಲ ೩ ಚರಣಗಳಿಗೆ ಇದ್ದದ್ದರಲ್ಲಿ ಒಳಿತು. ತಾ. ೧೬, ೧೭, ೨೦ ಅನುಕೂಲ.

ಸಿಂಹ

ಪ್ರಕೃತಿ ನೆಟ್ಟಗಿದ್ದರೂ ಮನಸಿಗೆ ಮಾತ್ರ ಸುಖವಿಲ್ಲ. ಹೆಂಡತಿ ಹೀನೈಸಿ ನೋಯಿಸುವಳು. ಉದ್ಯೋಗದಲ್ಲಿ ಲಾಭಕ್ಕೆ ಸೊನ್ನೆ ಆದರೂ ನಾಳಿನ ಲಾಭದ ಆಸೆಯಿಂದ ಇಂದು ಕೈಬಿಟ್ಟು ವೆಚ್ಚಮಾಡಿ ಪೆಚ್ಚರಾಗುವಿರಿ ವಾದಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸ ಸುಖಕರ. ಮಘೆಯ ೪ ನೆ ಮತ್ತು ಪೂರ್ವದ ಮೊದಲನೆ ೩ ಚರಣಗಳಿಗೆ ತೊಂದರೆ ಮತ್ತಷ್ಟು ಹೆಚ್ಚು. ತಾ. ೧೬,೧೭, ೧೫,೧೯ ಅನುಕೂಲ.

ಕನ್ಯಾ

ಮಕ್ಕಳೊಡನೆ ಮತಭೇದ. ಪ್ರಾಪಂಚಿಕ ಸುಖಕ್ಕೆ ತೊಂದರೆಯಿಲ್ಲ. ವಾಯೂದ್ರವು ಪೀಡಿಸಬಹುದು. ಉದ್ಯೋಗದಲ್ಲಿ ಲಾಭ ಪ್ರತಿಷ್ಠೆ ಚನ್ನಾಗಿರುವದು. ವಾದ ಸ್ಪರ್ಧೆಗಳಲ್ಲಿ ಉಭಯತರಿಗೂ ಹಾನಿ ಮಿತ್ರರಲ್ಲಿ ವಿರೋಧ. ಪತ್ರವ್ಯವಹಾರದಿಂದ ಕೆಲಸ ಸಾಧ್ಯ. ಉತ್ತರೆಯ ೪ ನೆ ಮ[illegible] ಹಸ್ತದ ಮೊದಲ ೩ ಚರಣಗಳಿಗೆ ತೊ[illegible] ಅಧಿಕ. ತಾ. ೧೬,೧೭, ೧೫,೧೯ ಅನುಕೂಲ

ತುಲಾ

ದಂಪತಿಗಳ ಸುಖ ಒಬ್ಬರಷ್ಟು [illegible] ಇನ್ನೊಬ್ಬರದು ಅತ್ತ. ಮಕ್ಕಳು ಜುಬರ[illegible] ಬೀಳಬಹುದು. ವಾಹನ ಸುಖ. ಉದ್ಯೋಗ[illegible]ದಲ್ಲಿ ವಿಶೇಷ ಹಿಗ್ಗೂ ಇಲ್ಲ ಕುಗ್ಗೂ [illegible] ವಾದ ಸ್ಪರ್ಧೆಗಳಲ್ಲಿ ಅನುಕೂಲ. [illegible] ವಿಯೋಗ. ಪ್ರವಾಸ, ಭೆಟ್ಟಿಗಳಿಗಿಂತ ಪತ್ರ[illegible]ಹಾರ ಲೇಸು. ಚಿತ್ರೆಯ ೪ ನೆ ಮ[illegible] ಸ್ವಾತಿಯ ಮೊದಲ ೩ ಚರಣಗಳಿಗೆ [illegible]ದಿಂದಲೆ ಸಿದ್ಧಿ ತಾ. ೧೪,೧೮, ೧೯ ಒಳಿತು.

ವೃಶ್ಚಿಕ

ಸ್ವಂತ ಪ್ರಕೃತಿಗಿಂತ ಹೆಂಡತಿ ಮಕ್ಕಳ ಸೌಖ್ಯ. ಮನೆಯಲ್ಲಿ ನೆಮ್ಮದಿ ಆದರೆ ಬಂ[illegible] ಬಳಗದವರಿಂದ ನೆರೆಹೊರೆಯವರಿಂದ [illegible] ವಾದ. ವಾಹನಗಳಿಂದ ಅಪಾಯ ಸಂಭವಿಸ[illegible] ಭಯ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದ[illegible] ಪ್ರತಿಷ್ಠೆಗೆ ಮಸಿ ಬಳಿಯುವ ಸಂಗತಿಗಳು. [illegible]ಷ್ಠರು ಅಥವಾ ಆಶ್ರಯದಾತರು ಮುನಿ[illegible] ಬಹುದು. ಮಿತ್ರಸುಖ ಉತ್ತಮ. [illegible] ಸ್ಪರ್ಧೆಗಳಲ್ಲಿ ಯಶ. ಪ್ರವಾಸಾದಿ ಕಾರ್ಯ[illegible] ಯಥಾಭಿಮತ. ಅನುರಾಧೆಯ ೪ ನೆ ಮ[illegible] ಜ್ಯೇಷ್ಠದ ಮೊದಲ ೩ ಚರಣಗಳಿಗೆ ತೊಂ[illegible] ಕಡಮೆ. ತಾ ೧೪, ೧೫, ೧೬, ೧೭ ಉತ್ತಮ.


ಧನು

ಎಲ್ಲರ ಪ್ರಕೃತಿಯೂ ನೆಟ್ಟಗೆ. ಆದರೆ ಹೆಂ[illegible]ತಿಯ ಕೋಪ. ಉದ್ಯೋಗದಲ್ಲಿ ಸಹೋ[illegible]ದ್ಯೋಗಿಗಳು ಅಡ್ಡಗಾಲು ಹಾಕಲು ನೋಡು[illegible]ವರು. ಲಾಭ ಚೆನ್ನಾಗಿರುವದು. ವಾದ ಸ್ಪ[illegible] ಗಳಲ್ಲಿ ಎರಡೂ ಪಕ್ಷಗಳು ಸೋತು ಸುಣ್ಣ[illegible] ೧೬ನೆಯ ಘಟಿಕ[illegible]

Reg. No. B. 3148

LICENCE No. 3
Licenced to Post without Prepayment

KARMAVEER 14-2-49



[ವಾರಕ್ಕೆ ಬಂದ ಎಲ್ಲ ಪುಸ್ತಕಗಳನ್ನು ಕಾಲದಿಂದ ಸ್ವೀಕರಿಸಿದ ಉಲ್ಲೇಖ ಮಾಡುತ್ತೇವಾದರೂ ಆ ಎಲ್ಲವುಗಳ ವಿಮರ್ಶೆ ... ಕ್ರಮವಾಗಿ ಈ ಮಾಲಿಕೆ ತೀರಿಸುತ್ತೇವೆ. —ಸಂ]

ಗಾಂಧೀ ಸೂತ್ರಗಳು

ಬರೆದವರು: ಪ್ರೊ. ಡಿ. ಎಸ್. ಶರ್ಮಾ, ಎಂ. ಎ. ಪ್ರಕಾಶಕರು ಮಿಂಚಿನ ಬಳ್ಳಿ ಗ್ರಂಥಮಾಲೆ, ಧಾರವಾಡ. ಪುಟ ೨೩೬, ಬೆಲೆ ರೂ ೩-೮-೦

ಯಾವ ಜ್ಞಾನಭಾಗವನ್ನೇ ಆಗಲಿ ಹಿಂದು ಸ್ತಾನದ ಋಷಿಶೈಲಿಯಲ್ಲಿ ಹೇಳಿದಹೊರತು ಅದು ನಮ್ಮದೆಂಬ ಗಂಭೀರ ಮುದ್ರೆಯನ್ನು ಪಡೆಯಿಂದಿ ಸಮಾಧಾನಕರವೆನಿಸುವುದಿಲ್ಲ. ಈ ದೃಷ್ಟಿಯಿಂದ ಪ್ರೊ. ಡಿ. ಎಸ್. ಶರ್ಮಾರು ಗಾಂಧಿಯವರ ಬರಹಗಳ ಆಧಾರದಿಂದ ರಚಿಸಿದ "ಗಾಂಧೀ ಸೂತ್ರಗಳು" ಎಂಬ ಗ್ರಂಥವನ್ನು ಬರೆದುದು ಬಹಳ ಸ್ತುತ್ಯವಾಗಿದೆಎನ್ನಬೇಕು.

ಇದರ ಜೊತೆಗೆ ತಿಳಿಗನ್ನಡದಲ್ಲಿ ಗಾಂಧಿಯವರ ವಿವಿಧ ವಿಷಯಗಳ ಭಾಷಣಗಳಿಂದ ಉಚಿತಾಂಶಗಳನ್ನು ಸೂತ್ರ ಸೂತ್ರಗಳಿಗೆ ಭಾಷ್ಯರೂಪದಲ್ಲಿ ಕೊಡಲಾಗಿದೆ. ಹಿಂದುಸ್ತಾನದ ಜನರ ವ್ಯಕ್ತಿತ್ವದ ಸಂಸ್ಕೃತಿ ಪ್ರಭೆಯನ್ನು ಉಜ್ವಲಗೊಳಿಸುವ ಸತ್ವದ ದೃಷ್ಟಿಯಿಂದ ಇದು ಬಹು ಅಮೂಲ್ಯವಾದುದು. ಆದರೆ ಇಂಥ ಅಮೂಲ್ಯ ಗ್ರಂಥವನ್ನು ಇಷ್ಟು ಅಪರೂಪಬದ್ಧವನ್ನಾಗಿ ಏಕೆ ಅಚ್ಚು ಹಾಕಿಸಲಾಯಿತೋ ತಿಳಿಯದು. "ಪ್ರಥಮ ಚುಂಬನೇ ದಂತಭಂಗಃ" ಎಂಬ ನಾಣ್ಣುಡಿಯಂತೆ "ಅಥ ನವಯುಗಧರ್ಮ ವ್ಯಾಖ್ಯಾಸ್ಯಾಮಃ" ಎಂದು ಧರ್ಮಶಬ್ದವನ್ನು ಸ್ಖಲಿತ ರೂಪದಲ್ಲಿ ಪ್ರಕಟಿಸಲಾಗಿದೆ. ಇಂಥ ಸ್ಖಾಲಿತ್ಯಗಳು ೧೫, ೧೬, ೧೭, ೧೯, ೩೧, ೩೬, ೪೦, ೪೧, ೪೩, ೪೪, ೪೪, ೪೬, ೪೯, ೫೦, ೫೩, ೫೫, ೫೭, ೫೮, ೫೯, ೬೩, ೬೪, ೬೪, ೬೫, ೬೯, ೭೦, ೭೮, ೮೧, ೯೪, ೯೭, ೯೮, ೯೯, ೧೦೦, ೧೦೩, ೧೦೮ ನೆಯ ಸೂತ್ರಗಳಲ್ಲಿ ಕಾಣಬರುವವು. ಅಲ್ಲದೆ, ಪ್ರಾಯಶಃ ಎಲ್ಲ ಸೂತ್ರಗಳಲ್ಲಿಯೂ ಶಬ್ದಗಳ ವಿಂಗಡಿಕೆ ಅಶುದ್ಧವಾಗಿದೆ. ಮುನ್ನುಡಿಯಲ್ಲಿ ಸೂತ್ರೀಕರಣದ ಮುಖ್ಯ ಉದ್ದೇಶ ಓದುಗರಿಗೆ ಕಂಠಪಾಠ ಮಾಡಲು ಅನುಕೂಲವಾಗಬೇಕೆಂಬುದೆಂದು ಹೇಳಿರುವಾಗ ಇಷ್ಟು ಅಬದ್ಧವಾಗಿ ಸೂತ್ರಗಳನ್ನು ಅಚ್ಚು ಹಾಕಬಾರದಾಗಿತ್ತು. ಶ್ರುತಿ ಶತ್ರ ಮುಂತಾದ ಪದಗಳು ಕೂಡ ತಪ್ಪಾಗಿ ಮುದ್ರಿಸಲ್ಪಟ್ಟಿವೆ. ಗಹನ ವಿಚಾರಗಳಿಗೆ ಮೀಸಲಾದ ಪುಸ್ತಕಗಳನ್ನು ಅಚ್ಚು ಹಾಕುವ ಮಿಂಚಿನಬಳ್ಳಿಯವರು ತಮ್ಮ ಪ್ರಕಟನೆಗಳ ಶಬ್ದ ಶುದ್ಧಿಯತ್ತ ಹೆಚ್ಚು ಗಮನ ಕೊಡಬೇಕಾಗಿತ್ತು. ಪುಸ್ತಕ ಈಗ ತಾನೆ ಹೊರ ಬಿದ್ದಿದೆ. ಆದ್ದರಿಂದ ಕೂಡಲೆ ಈ ಅಷ್ಟೋತ್ತರ ಶತ ಸಂಸ್ಕೃತ ಸೂತ್ರಗಳನ್ನು ಶುದ್ಧವಾಗಿ ಮುದ್ರಿಸಿ ಕಡೆಯಲ್ಲಿ ಅಥವಾ ಮೊದಲಲ್ಲಿ ಅನುಬಂಧವಾಗಿ ಸೇರಿಸಿ ಮುಂದಿನ ಪ್ರತಿಗಳನ್ನು ಮಾರಾಟಕ್ಕೆ ಸಿದ್ಧಪಡಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ.

ಸೊಂಪಿನ ಸಾಗರ

ಬರೆದವರು ಶ್ರೀ ಜಿ. ಸದಾಶಿವಯ್ಯ ಪ್ರಕಾಶಕರು ಶ್ರೀ ಜಿ. ಶ್ರೀನಿವಾಸ ಅಯ್ಯಂಗಾರ್, ಅರಳೇ ಪೇಟೆ, ಬೆಂಗಳೂರು ನಗರ ಪುಟ ೩೮, ಬೆಲೆ ಎಂಟಾಣೆ.

ಇದು ಸರಳ ರಗಳೆಯ ಕಿರಿಯದ ನಾಟಕ. ಈ ನಾಟಕವನ್ನು "ಪ್ರಿಜರ್ ಜೆಸ್ಸ್" ಪತ್ರಿಕೆಯವರು ಇಂಗ್ಲೀಷಿಗೆ ಭಾಷಾಂತರಿಸಿ ೧೯೪೦ರ ಅವರ ಪತ್ರಿಕೆಯಲ್ಲಿ "ದಿ ಓಶನ್ ಸ್ಪ್ಲೆಂಡಿಡ್" ಎಂಬ ಹೆಸರಿಂದ ಪ್ರಕಟಿಸಿದ್ದಾರಂತೆ. ಸರಳ, ಶುದ್ಧ ಶೈಲಿಯಲ್ಲಿ ಬರೆಯಲಾದ ಈ ನಾಟಕ ಕಿರಿಯರು ಆಡಲು ಯೋಗ್ಯವಾಗಿದೆ. ವ್ಯಾಕರಣ ಶುದ್ಧವಾದ ಸುಂದರ ಸುಲಭ ವಾಕ್ಯಗಳ ರಗಳೆ ರಂಜಕವೂ ಬೋಧಕವೂ ಆಗಿದೆ ... ಲು ಯಾವ ಅಡ್ಡಿಯೂ ಇಲ್ಲ.

New Lives for Old.

ಬರಹಗಾರರು ಮೂರು ಮಂದಿ. ಪ್ರಕಾಶಕರು ಪ್ರಾಂತಿಕ ಪಾನ ಪ್ರತಿಬಂಧ ಸಮಿತಿ, ಮುಂಬಯಿ ಸರಕಾರ, ಮುಂಬಯಿ. ಪುಟ ೧೪೧, ಬೆಲೆ ಒಂದೂಕಾಲು ರೂಪಾಯಿ.

ಪ್ರಸ್ತುತ ಪುಸ್ತಕದಲ್ಲಿ ನವಯುಗ ನವಜೀವನ ಕ್ರಮಕ್ಕೆ ಅಗತ್ಯವಾದ ಪಾನನಿಷೇಧವನ್ನು ನಾನಾ ಲೇಖನಗಳಲ್ಲಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರ್ ಅಬಕಾರಿ ಮಂತ್ರಿ ಶ್ರೀ ಶ್ರೀ ಎಲ್. ಎಂ. ಪಾಟೀಲ್, ಗೃಹ ಮಂತ್ರಿ ಶ್ರೀ ಮುರಾರಜಿ ದೇಸಾಯಿ ಇವರು ಪ್ರತಿಬಿಂಬಿಸಿದ್ದಾರೆ. ಇದಕ್ಕೆ ಮುಂಬಯಿ ಗವರ್ನರರಾದ ಸರ್ ಮಹಾರಾಜಸಿಂಗರ ಮುನ್ನುಡಿಯಿದೆ.

ಶ್ರೀ ಬಿ. ಜಿ. ಖೇರರು "ನಮ್ಮ ನೀತಿ ನಡತೆಗಳಲ್ಲಿ ಭಯಂಕರ ಅಧಃಪಾತ ಉಂಟಾಗಿದೆ ಎಂದು ಎಲ್ಲೆಲ್ಲೂ ಕೂಗೆದ್ದಿದೆ" ಎಂದು ಲೇಖನವನ್ನು ಆರಂಭಿಸಿದು ಪಾನ ಪ್ರತಿಬಂಧಕ ಧೋರಣೆಯನ್ನು ಸಮರ್ಥಿಸಲು ಸಾಕಷ್ಟು ಶಕ್ತಿಯುಳ್ಳದ್ದಾಗಿದೆ. ಅವರು ಇಲ್ಲಿ ಮದ್ಯಪಾಯಿಗಳ ಪ್ರಮಾಣ, ಪಾನಪ್ರತಿಬಂಧ ಚಟುವಟಿಕೆ ಮುಂತಾದವನ್ನು ಸಂಕ್ಷೇಪವಾಗಿ ವಿವರಿಸಿ, ಎರಡನೆಯ ಕಡೆ ಪಾನಪ್ರತಿಬಂಧವೂ ಹೇಗೆ ಒಂದು ರಚನಾತ್ಮಕ ಕಾರ್ಯಕ್ರಮವೆಂಬುದನ್ನು ಸಾಧಾರವಾಗಿ ವಿವರಿಸಿದ್ದಾರೆ. ಇಲ್ಲಿ ಅವರು ಪೂರ್ವಪಕ್ಷಗಳಲ್ಲಿ ಹಲವನ್ನು ಎತ್ತಿ ಬಲವಾಗಿ ಖಂಡಿಸಿ, ಜನರ ಸಹಕಾರದ ಅಗತ್ಯವನ್ನು ಒತ್ತಿ ಹೇಳಿ, ಪಾನತ್ಯಾಗ ಪ್ರಚಾರಕ್ಕಾಗಿ ನಿಯುಕ್ತರಾದ ಅಧಿಕಾರಿಗಳು ಭಜನ ಮಂಡಲ, ನಾಟಕ ಮಂಡಲ, ಸಂಗೀತ ಕಚೇರಿ, ಮುಂತಾದವನ್ನು ನಡೆಸಿ ಕುಡುಕರನ್ನು ಕುಡಿತದಿಂದ ವಿಮುಖಗೊಳಿಸಬಹುದೆಂದು ಮುಂತಾಗಿ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ.

ಪಾನ ಪ್ರತಿಬಂಧದ ಅವಶ್ಯಕತೆಯ ಬಗ್ಗೆ ಹೇಳುವಾಗ ಶ್ರೀ ಎಲ್. ಎಂ. ಪಾಟೀಲರು ತಮ್ಮದೇ ಆದ ಶೈಲಿಯಲ್ಲಿ ಪ್ರತಿಪಕ್ಷದವರ ವಾದವನ್ನು ಐದು ಅಂಶಗಳಾಗಿ ವಿಂಗಡಿಸಿ ಕಾಯದೆಬದ್ಧವಾದ ಉತ್ತರಗಳನ್ನು ಕ್ರಮವಾಗಿ ಕೊಟ್ಟಿದ್ದಾರೆ. ಅಲ್ಲದೆ, ಬೇರೆ ಬೇರೆ ದೇಶಗಳಲ್ಲಿಯ ಕುಡಿವ ಸ್ತ್ರೀಪುರುಷರ ಶತಾಂಶದ ಉದಾಹರಣೆಗಳು, ಪ್ರತಿಬಂಧ ಕಾರ್ಯಕ್ರಮದ ವಿವರಗಳು, ಬೆಲ್ಲದ ಬೆಳೆ ಮತ್ತು ಅದರ ಪುನರ್ಪ್ರಯೋಗ ಮುಂತಾದವನ್ನು ವಿವರವಾಗಿ ಚರ್ಚಿಸಿದ್ದಾರೆ.

ಮುಂದೆ ಪಾನದ ಇತಿಹಾಸವನ್ನೇ ಶ್ರೀ ಪಾಟೀಲರು ಕೊಟ್ಟಿದ್ದಾರೆ. ಪೇಶ್ವೆಯ ಕಾಲದಿಂದ ಬ್ರಿಟಿಶರ ಕಾಲದ ವರೆಗೂ ಪಾನಕ್ಕೆ ಸಿಕ್ಕಿದ ಪ್ರೋತ್ಸಾಹದ ಚರಿತ್ರೆಯನ್ನು ಕೊಟ್ಟು ಅದರಿಂದಾದ ಹಾನಿಯನ್ನು ಅವರು ಹೃದಯ ದ್ರಾವಕವಾಗಿ ವರ್ಣಿಸಿದ್ದಾರೆ. ಈ ವರ್ಣನೆಯ ನಡುವೆ ಪಾನಪ್ರೇರಕವಾದ ಧರ್ಮ, ಶಾಸ್ತ್ರ ಮುಂತಾದ ಎಲ್ಲವನ್ನೂ ಅವರು ಪ್ರತಿಭಟಿಸಿದ್ದಾರೆ. ಪಾನದಿಂದ ಸರಕಾರಗಳಿಗಾಗುತ್ತಿದ್ದ ಲಾಭವನ್ನು ಅಂಕೆ ಸಂಖ್ಯೆಗಳಿಂದ ಕೊಟ್ಟಿದ್ದಲ್ಲದೆ, ಮುಂಬಯಿ ಅಬಕಾರಿ ಕಾಯಿದೆಗಳ ಅಂಶಗಳನ್ನು ವಿವರಿಸಿ, ಪಾನಾನುಕೂಲ ವಾದಿಗಳ ವಾದವನ್ನು ಸಂದರ್ಭೋಲ್ಲೇಖ ಮಾಡಿ ಉಪಹಾಸ ಮಾಡಿದ್ದಾರೆ.

ಕಡೆಯಲ್ಲಿ ಶ್ರೀ ಮುರಾರಜಿ ದೇಸಾಯಿಯವರು ಪಾನಪ್ರತಿಬಂಧಕ್ಕೆ ಯೋಗ್ಯ ಶಿಕ್ಷಣ ಅಗತ್ಯವೆಂಬುದನ್ನು ಒತ್ತಿ ಹೇಳಿದ್ದು ಸಾರ್ಥಕವಾಗಿದೆ. ಪಾನಪ್ರತಿಬಂಧದ ಪ್ರಾಮುಖ್ಯವನ್ನು ಅವರು ಸಂಕ್ಷೇಪತಃ ಪರಿಶೀಲಿಸಿ ಆ ಕಾರ್ಯದಲ್ಲಿ ಯಶಸ್ಸು ಸಿಗಲೆಂದು ಪ್ರಾರ್ಥಿಸಿಕೊಂಡಿದ್ದಾರೆ.

ಬುದ್ಧಿಗಿಂತ ಹೆಚ್ಚಿನ ವರ ಮಾನವನಿಗೆ ದೇವರು ಕೊಟ್ಟಿಲ್ಲ. ಮದ್ಯ ಅದನ್ನೇ ಕೆಡಿಸುತ್ತದೆ. ಎಂದ ಮೇಲೆ ಮದ್ಯಪಾನವನ್ನು ಪ್ರತಿಬಂಧಿಸುವದು ಬುದ್ಧಿಯನ್ನು ಕಾಪಾಡಿಕೊಳ್ಳಬಯಸುವ ಆಶೆಯುಳ್ಳ ಎಲ್ಲರ ಕರ್ತವ್ಯ. ಈ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಮುಂಬಯಿ ಸರಕಾರದ ಪ್ರಯತ್ನ ಸರ್ವಥಾ ಶ್ಲಾಘ್ಯವೆಂದು ಹೇಳದಿರುವ ಬುದ್ಧಿವಂತನಿರಲಾರನು. ಮದ್ಯಪಾನದ ಫಲ ಮತ್ತು ಪ್ರತಿಬಂಧದ ಗುಣ ಇವುಗಳನ್ನು ಪುಸ್ತಕದ ಎಂಟು ಬರಹಗಳಲ್ಲಿ ಕೊಡಲಾಗಿದೆ. ಅವನ್ನು ನಾಡಿನ ಮತ್ತು ತನ್ನ ಹಿತಚಿಂತಕನಾದ ಪ್ರತಿಯೊಬ್ಬ ಪ್ರಜೆಯೂ ಓದಿ ತನ್ನ ಬುದ್ಧಿಧನವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದರಲ್ಲಿ ಮಾದಕವಾದ ವಸ್ತು, ದೃಶ್ಯ, ವಾಕ್ಯಗಳನ್ನು ದೂರವಿಡುವ ನಿಯಮಮಾರ್ಗವನ್ನು ಹಿಡಿಯಬೇಕೆಂದು ನಮ್ಮ ಆಗ್ರಹಪೂರ್ವಕವಾದ ಬಿನ್ನಹ. ಮದ್ಯವಲ್ಲದೆ, ಸೂಳೆಗಾರಿಕೆ, ಜೂಜಾಟ, ಸಟ್ಟಾ, ಕುದುರೆ ಜೂಜು ಇಸ್ಪೀಟು ಮುಂತಾದ ಬುದ್ಧಿನಾಶಕ ಚಟುವಟಿಗಳ ಬಗ್ಗೂ ಮಾನ್ಯ ಮಂತ್ರಿಗಳಿಂದ ಅಧಿಕಾರಯುಕ್ತ ಮಾತು ಮತ್ತು ಬರಹಗಳು ಹೊರಬೀಳುವ ಸುಸಂದರ್ಭವುಂಟಾಗಲೆಂದು ಆಶಿಸುತ್ತೇವೆ!

ಸಾದರ ಸ್ವೀಕಾರ

ಸೇವಾದಲ

ಇದು ಶ್ರೀ ಬುರ್ಲಿ ಬಿಂದು ಮಾಧವ ಮತ್ತು ಶ್ರೀ ರಾ. ವೆ. ಶಿರಗುಪ್ಪಿಯವರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ಹೊರಬಿದ್ದ ಸೇವಾದಲ ರಾಷ್ಟ್ರ ಮಹೋತ್ಸವ ಸಂಚಿಕೆ. ಸೇವಾದಲದ ಬಗ್ಗೆ ಅನೇಕ ಉತ್ತಮ ಲೇಖನಗಳು ಇದರಲ್ಲಿವೆ. ಪುಟ ೧೩೪, ಬೆಲೆ ಹಾಕಿಲ್ಲ.

ಮಕ್ಕಳ ಸಚಿತ್ರ ಅಂಕಗಣಿತ

ಲೇಖಕರು ಶ್ರೀ ಎಲ್. ಆಯ. ಅಕಳವಾಡಿ, ಬಿ. ಎ. ಬಿ. ಕಾಂ. ಪ್ರಕಾಶಕರು ರಾಮಾಶ್ರಯ ಬುಕ್‌ಡಿಪೋ, ಧಾರವಾಡ. ಪುಟ ೨೪, ಬೆಲೆ ಐದಾಣೆ. ಇದು ಹೊಸ ಅಭ್ಯಾಸ ಪತ್ರಿಕೆಯಂತೆ ೧ ನೆಯ ಇಯತ್ತೆಗಾಗಿ ರಚಿಸಿದ ಸಚಿತ್ರ ಬಾಲಗಣಿತದ ಹಲವಾರು ಸುಲಭ ಗ್ರಾಹ್ಯ ನಿದರ್ಶನಗಳನ್ನು ಒಳಗೊಂಡಿದೆ. ಬೇರೀಜು, ಉಜಳಣಿ, ವಜಾಬಾಕಿ ಮುಂತಾದ ಅಕನ್ನಡಪದಗಳನ್ನು ನಿವಾರ್ಯವಿದ್ದೂ ಬಳಸಿದ್ದು ಕನ್ನಡಿಗರಿಗೆ ನಾಚಿಕೆಗೇಡೆನಿಸುವುದು.

ಗಾಂಧೀ ಶತಕ

ಬರೆದವರು ಶ್ರೀ ವೈ. ಶಾ. ವಾಸಪ್ಪ, ಪ್ರಕಾಶಕರು ಶ್ರೀ ನಂಜುಂಡೇಶ್ವರ ಪ್ರೆಸ್, ಮಧುಗಿರಿ. ಪುಟ ೫೫, ಬೆಲೆ ೧೨ ಆಣೆ. ಇದು ಲಾವಣಿಯೂ ಅಲ್ಲ, ಗಂಭೀರ ಪದಗತಿಯ ಪದ್ಯವೂ ಅಲ್ಲ; ಕುರುಡು ಭಕ್ತಿಯ ಒಂದು ಆಲಾಪ.

ಅಂತರಂಗ

ಈ ವಾರಪತ್ರಿಕೆ ಅನೇಕ ವರ್ಷಗಳಿಂದ ಉಡುಪಿಯಿಂದ ಶ್ರೀಗಳಾದ ಕೆ. ಎಚ್. ಶೆಟ್ಟಿ ಮತ್ತು ಎಂ. ವಿ. ಹೆಗಡೆಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದು ಈಗ ಅದರ ಆಕೃತಿಯನ್ನು ಹ್ರಸ್ವಗೊಳಿಸಿ ಒಂದೇ ವಿಷಯದ ಮೇಲೆ ಬರೆವ ಹೊಸ ಪದ್ಧತಿಯನ್ನು ಹಿಡಿಯಲಾಗಿದೆ. ಪುಟ ೪೪, ಬೆಲೆ ೩ ಆಣೆ.

ದರ್ಜಿ

ಇದು ಬೆಂಗಳೂರಿನಿಂದ ಹೊರಡುವ ಕನ್ನಡ-ಇಂಗ್ಲಿಷ್ ತ್ರೈಮಾಸಿಕ ಪತ್ರಿಕೆ. ಶ್ರೀ ಎಸ್. ಶ್ರೀನಿವಾಸಾಚಾರ್ಯರು ಸಂಪಾದಕರು. ಇದರಲ್ಲಿ ದರ್ಜಿವೃತ್ತಿಗೆ ಸಂಬಂಧಿಸಿದ ವಿಷಯಗಳಿವೆ. ಪುಟ ೪೨, ಬೆಲೆ ೮ ಆಣೆ.

ಸತ್ಯಾರ್ಥಿ

ಇದು ಕೊಡಗಿನಿಂದ ಶ್ರೀ ಎಂ. ಬಿ. ಮುತ್ತಣ್ಣನವರ ಸಂಪಾದಕತ್ವದಲ್ಲಿ ಹೊರಬೀಳುವ ಒಂದು ಮಾಸಪತ್ರಿಕೆ. ಪುಟ ೨೮, ವಾರ್ಷಿಕ ಚಂದಾ ರೂಪಾಯಿ ೪.

ವಿಶ್ವಕರ್ಮಾ

ಇದು ಶ್ರೀ ಯಂ. ಗಂಗಾಧರಮೂರ್ತಿಗಳ ಸಂಪಾದಕತ್ವದಲ್ಲಿ ಹೊರಡುವ ಮಾಸಪತ್ರಿಕೆ. ೯೭೬, ಮಂಡಿ ಮೊಹಲ್ಲಾ, ಮೈಸೂರು ಎಂಬುದು ಇದರ ವಿಳಾಸ. ಪುಟ ೩೦ ಬೆಲೆ ಆರು ಕಾಸು.

ಅಮರವಾಣಿ

ಇದು ಶ್ರೀ ಬಿ. ಎಂ. ವೀರೇಶ್ವರ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಯಾದಗಿರಿಯಿಂದ ಪ್ರಕಟವಾಗುವ ಮಾಸಿಕ ಪತ್ರಿಕೆ. ಪುಟ ೬೨, ಬೆಲೆ ಎಂಟಾಣೆ.

ಮಧುದೀಪಿಕಾ

ಬರೆದವರು ಶ್ರೀ ಪಾಣಾಜೆ ವೈದ್ಯ ಶಂಕರನಾರಾಯಣಭಟ್ಟ, ವೈತೋಟ, ದ. ಕ. ಪುಟ ೨೪, ಬೆಲೆ ಎಂಟಾಣೆ. ಈ ಪುಸ್ತಕದಲ್ಲಿ ಆಯುರ್ವೇದ ರೀತ್ಯಾ ಜೇನುಗಳ ಮತ್ತು ಜೇನು ಸಾಕುವ ವಿಧಾನಗಳ ಬಗ್ಗೆ ವಿಚಾರಪೂರ್ಣವಾದ ಬರಹವಿದೆ. ಆದ್ದರಿಂದ ಇದು ಸಂಬಂಧಪಟ್ಟವರಿಗೆ ಒಳ್ಳೆಯ ಕೈಪಿಡಿಯಾಗಬಹುದಾಗಿದೆ.

ಕಲ್ಕಿ

ಗದುಗಿನಿಂದ ಈ ವಾರಪತ್ರಿಕೆ ಹೊರಡುತ್ತದೆ. ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಇದರ ಸಂಪಾದಕರು. ಪುಟ ೪೪; ಬೆಲೆ ನಾಲ್ಕಾಣೆ. ಇದು ಪ್ರಧಾನವಾಗಿ ಆಧ್ಯಾತ್ಮಿಕ ಬೋಧವನ್ನು ಜನರಲ್ಲಿ ಪ್ರಚುರ ಪಡಿಸಲು ಹೊರಟ ಪತ್ರಿಕೆ. ಸರ್ವವಿಧದ ಲೋಕ ಶಿಕ್ಷಣಕ್ಕೂ ಅದು ಅವಕಾಶ ಮಾಡಿಕೊಡಬಹುದೆಂದು ಆಶೆಯಿರುವ ಕಾರಣ ಇದನ್ನು ಕನ್ನಡಿಗರು ಹೃತ್ಪೂರ್ವಕವಾಗಿ ಸ್ವಾಗತಿಸದಿರರು. ಹೊಸದಾಗಿ ನಮ್ಮ ವ್ಯವಸಾಯ ಬಂಧುಗಳೆನಿಸಿದ ಸಂಪಾದಕರಿಗೆ ಯಶಸ್ಸನ್ನು ಕೋರುತ್ತೇವೆ.

ಮಹಾತ್ಮಾ ಗಾಂಧಿಯವರ ಲಾವಣಿ ಪದಗಳು

ಲಾವಣಿಕಾರರು ಶ್ರೀ ಕುಲಕರ್ಣಿ ಕೇಶವರಾಯರು ಧಾರವಾಡ. ಪ್ರಕಾಶಕರು, ಶ್ರೀ ಹ. ರಾ. ಮೋಹರೆ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ. ಪುಟ ೧೪, ಬೆಲೆ ನಾಲ್ಕಾಣೆ. ಇದರಲ್ಲಿ ಗ್ರಂಥಕರ್ತರು ಮಹಾತ್ಮಾ ಗಾಂಧಿಯವರ ಜೀವನದ ಮುಖ್ಯಾಂಶಗಳನ್ನು ಸರಸವಾಗಿ ಬಣ್ಣಿಸಿದ್ದಾರೆ. ರಾಷ್ಟ್ರಪಿತನ ನೆನಪಿಗೆ

ಸಹಕಾರ

ಈ ತ್ರೈಮಾಸಿಕ ೩೨ ಪುಟಗಳದು. ಪ್ರಕಾಶಕರು ಶ್ರೀ ಸಿ. ಸಿ. ಸ್ವಾಮಿ, ಎಂ. ಎ. ಸೂಪರಿಂಟೆಂಡೆಂಟ ಕರ್ನಾಟಕ ಕೋಅಪರೇಟಿವ್ ಸ್ಕೂಲ್, ಧಾರವಾಡ. ಬೆಲೆ ಹಾಕಿಲ್ಲ. ಇದರಲ್ಲಿ ಶ್ರೀ ಸಂಜೀವರಾವ್ ಕಲ್ಲಾಪೂರ ಮುಂತಾದವರ ಸಹಕಾರ ಸಂಬಂಧವಾದ ಮನನೀಯ ವಿಚಾರಗಳನ್ನು ಓದಬಹುದು.

ಭವಿಷ್ಯಬಂಧು

ಆರು ಪುಟದ ಒಂದೂ ಕಾಲಾಣೆಯ ಈ ಪುಸ್ತಿಕೆ ಸರ್ವಧಾರಿ - ಪುಷ್ಯದ ಭವಿಷ್ಯವನ್ನೊಳಗೊಂಡಿದೆ. ಶ್ರೀ ಕೆ. ನರಸಿಂಹಮೂರ್ತಿ ಪಡುವಣ ಬಡಾವಣೆ, ತುಮಕೂರು ಇವರು ಸಂಪಾದಕರು.

ವಾರದ ಭವಿಷ್ಯ

(೧೫ನೆಯ ಪುಟದಿಂದ)

ವವು. ಸ್ಥಾವರದಲ್ಲಿ ಅನುಕೂಲವಾದ ಮಾತುಕತೆಗಳು. ಭೆಟ್ಟಿ ಪತ್ರವ್ಯವಹಾರ ಎರಡೂ ಹಿತಾವಹ, ಪ್ರವಾಸ ಒಳಿತಲ್ಲ. ಮೂಲದ ನಾಲ್ಕನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳಿಗೆ ತೊಂದರೆಯಿಲ್ಲದೆ ಗೆಲವಿಲ್ಲ. ತಾ. ೧೬, ೧೭, ೧೮, ೧೯ ಉತ್ತಮ.

ಮಕರ

ನಿಮ್ಮೆಲ್ಲರ ಪ್ರಕೃತಿ ಚೆನ್ನಾಗಿದ್ದು ಮಕ್ಕಳಿಂದ ಸಮಾಧಾನಕರ ಕಾರ್ಯಗಳು ಜರುಗಿದರೂ ಬೇರೆ ಕಾರಣಗಳಿಂದ ನಿಮ್ಮ ಮನಸ್ಸು ವಿಕ್ಷಿಪ್ತವಾಗಿಯೆ ಇರುವದು. ಉದ್ಯೋಗದಲ್ಲಿ ಲಾಭ ಕಡಿಮೆ. ನಿರರ್ಥಕ ವೆಚ್ಚಗಳು, ಮಿತ್ರರಲ್ಲಿ ವಿರೋಧ, ವಾದ ಸ್ಪರ್ಧೆಗಳಲ್ಲಿ ಅಷ್ಟಕ್ಕಷ್ಟೆ. ಪ್ರವಾಸಾದಿ ಕಾರ್ಯಗಳು ನಿರ್ವಿಘ್ನ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲ ೩ ಚರಣಗಳಿಗೆ ತುಂಬ ಉಪದ್ರವ. ತಾ. ೧೬, ೧೭, ೧೮, ೧೯ ಅನುಕೂಲ.

ಕುಂಭ

ಸ್ವಂತದ ಮತ್ತು ಹೆಂಡತಿಯ ಪ್ರಕೃತಿಯಲ್ಲಿ ಆಗಾಗ್ಗೆ ಕಸರು, ಅನ್ಯೋನ್ಯದಲ್ಲಿಯೂ ಕಸರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆಗೆ ಕುಂದು, ಲಾಭ ಮಾತ್ರ ತುಂಬ. ಆದರೆ ವೆಚ್ಚಕ್ಕೂ ಗಡಿಮಿತಿಯಿಲ್ಲ. ವಾದ ಸ್ಪರ್ಧೆಗಳಲ್ಲಿ ಪರಿಣಾಮ ಅನಿಶ್ಚಿತ. ಮಿತ್ರ ಸುಖ ಚೆನ್ನಾಗಿದೆ. ಪ್ರವಾಸಾದಿ ಕಾರ್ಯಕ್ಕೆ ಅನುಕೂಲ ಕಾಲವಲ್ಲ. ಧನಿಷ್ಠೆಯ ೪ ನೆ ಮತ್ತು ಶತತಾರೆಯ ಮೊದಲ ೩ ಚರಣಗಳಿಗೆ ತುಂಬ ತೊಂದರೆ. ತಾ. ೧೮, ೧೯, ೨೦ ಅನುಕೂಲ.

ಮೀನ

ಮಕ್ಕಳ ಉಪದ್ವ್ಯಾಪ. ಸ್ತ್ರೀಸುಖ ನೆಟ್ಟಗಿದ್ದರೂ ಇತರ ಪ್ರಾಪಂಚಿಕ ಸುಖಕ್ಕೆ ಕೇಡುಗಾಲವೇ. ಉದ್ಯೋಗದಲ್ಲಿ ಲಾಭಕ್ಕೆ ಬಡತನವಾದರೂ ಪ್ರತಿಷ್ಠೆಗೆ ಪ್ರಸನ್ನ ಕಾಲ. ಅಲ್ಲಸಲ್ಲದ ವಿತಂಡವಾದಗಳಲ್ಲಿ ಸಿಲುಕಬೇಡಿರಿ. ವಾದ ಸ್ಪರ್ಧೆಗಳಲ್ಲಿ ಬಹಳ ವೆಚ್ಚದಿಂದ ಯಶ. ಅನಿರೀಕ್ಷಿತ ಲಾಭದ ಯೋಗ. ಭೆಟ್ಟಿ ಪತ್ರವ್ಯವಹಾರ ಯಶಸ್ವಿ. ಉತ್ತರಾಭಾದ್ರದ ೪ ನೆ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೧೭, ೨೦ ಲೇಸು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.